ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 7 ಗುರುವಾರ 2022

ಸಂಪುಟ: 43 | ಸಂಚಿಕೆ: 82 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಪ್ರಾದೇಶಿಕ ಪತ್ರಿಕೆಗಳು ಪರಿಣಾಮಕಾರಿಯಾಗಿವೆ.... ಪುಟ–10

3.74 ಕೋಟಿ ವೆಚ್ಚದಲ್ಲಿ ಸೋಮನಾಥಪುರದ ಕೇಶವ ದೇವಸ್ಥಾನ ಅಭಿವೃದ್ಧಿಗೆ ಚಿಂತನೆ ಪುಟ–6

ಚಾಮುಂಡಿಬೆಟ್ಟಕ್ಕೆ ರೋಪ್‌ವೇ ಬೇಡ

ಪ್ರವಾಸೋದ್ಯಮ ಅಭಿವೃದ್ಧಿ ಕುರಿತ ಸಭೆಯಲ್ಲಿ ಜನಪ್ರತಿನಿಧಿಗಳು, ಸಂಘ–ಸಂಸ್ಥೆಗಳ ಅಭಿಪ್ರಾಯಕ್ಕೆ ಮೈಸೂರು ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಮನ್ನಣೆ





ಮೈಸೂರು, ಜು.6(ಆರ್‌ಕೆ)–ಚಾಮುಂಡಿ ಬೆಟ್ಟಕ್ಕೆ ರೋಪ್‌ವೇ ಯೋಜನೆ ಬೇಡವೇ ಬೇಡ ಎಂದು ಜನಪ್ರತಿನಿಧಿಗಳು, ಸಂಘ–ಸಂಸ್ಥೆಗಳ ಪ್ರಮುಖರು ಒಕ್ಕೊರಲಿನಿಂದ ಆಗ್ರಹಿಸಿದ್ದಾರೆ. ಮೈಸೂರಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರ ಅಧ್ಯಕ್ಷತೆಯಲ್ಲಿ ಇಂದು ನಡೆದ ಮೈಸೂರು ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿ ಕುರಿತ ಸಭೆಯಲ್ಲಿ ಚಾಮುಂಡಿ ಬೆಟ್ಟವನ್ನು ಗಿಡ–ಮರ, ತೊರೆಗಳಂತಹ ನೈಸರ್ಗಿಕ ಸಂಪತ್ತಿನೊಂದಿಗೆ ರಕ್ಷಿಸಬೇಕೇ ಹೊರತು, ರೋಪ್‌ವೇ ಯೋಜನೆಯನ್ನು ಅನುಷ್ಠಾನ ಮಾಡಕೂಡದು ಎಂಬ ಅಭಿಪ್ರಾಯ ವ್ಯಕ್ತವಾಯಿತು.

▶ 8ನೇ ಪುಟಕ್ಕೆ

ಚಾಮುಂಡಿಬೆಟ್ಟದ ಗ್ರಾಮಸ್ಥರಿಗೆ ಮನೆ ಕಟ್ಟಲು ತಪ್ಪಲಲ್ಲಿ ಜಾಗ

ಜಿಲ್ಲಾಡಳಿತಕ್ಕೆ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಸಲಹೆ

ಮೈಸೂರು, ಜು.6(ಆರ್‌ಕೆ)– ಚಾಮುಂಡಿಬೆಟ್ಟ ಗ್ರಾಮಸ್ಥರಿಗೆ ಮನೆ ನಿರ್ಮಿಸಲು ತಪ್ಪಲಲ್ಲಿ ಜಾಗ ಗುರುತಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಜಿಲ್ಲಾಡಳಿತಕ್ಕೆ ಇಂದಿಲ್ಲಿ ಸಲಹೆ ನೀಡಿದ್ದಾರೆ.

ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ಪ್ರವಾಸೋದ್ಯಮ ಅಭಿವೃದ್ಧಿ ಕುರಿತ ಸಭೆಯಲ್ಲಿ ಪಾಲ್ಗೊಂಡಿದ್ದ ಸಂಸದ ಪ್ರತಾಪ್ ಸಿಂಹ ಅವರು, ಚಾಮುಂಡಿ ಬೆಟ್ಟದ ಮೇಲೆ ಎಲ್ಲೆಂದರಲ್ಲಿ ಮನೆ, ಕಟ್ಟಡ ನಿರ್ಮಾಣವಾಗುತ್ತಿವೆ. ಅಲ್ಲಿನ ಮಣ್ಣು, ಮರಳು ಮಿಶ್ರಿತವಾಗಿದ್ದು, ಮಳೆಗಾಲದಲ್ಲಿ

▶ 8ನೇ ಪುಟಕ್ಕೆ

ನಗರ ಪ್ರದೇಶದ ಮತದಾರರಿಗೆ ಬಿಜೆಪಿ 'ಎ' ಖಾತಾ ಗಾಳ

- 'ಬಿ' ಖಾತಾ ನಿವೇಶನದಾರರಿಗೆ ಪೂರ್ಣಪ್ರಮಾಣದ ಹಕ್ಕುಪತ್ರ ನೀಡುವ ಮಹತ್ವದ ನಿರ್ಧಾರ
- ಮಹಾನಗರ ಪಾಲಿಕೆಗಳ ವ್ಯಾಪ್ತಿಯ ಲಕ್ಷಾಂತರ ಮಂದಿಗೆ ಇದರಿಂದ ನಾನಾ ಅನುಕೂಲ
- 'ಎ' ಖಾತಾದಿಂದ ಆಸ್ತಿ ಪರಭಾರೆ ಮೂಲಕ ಸಾಲ ಸೌಲಭ್ಯ ಪಡೆಯುವ ಅವಕಾಶ
- ಇನ್ನೆರಡು ತಿಂಗಳಲ್ಲಿ 'ಬಿ' ಖಾತಾದಾರರಿಗೆ 'ಎ' ಖಾತಾ ಲಭ್ಯವಾಗಲಿದೆ




ಬೆಂಗಳೂರು, ಜು. 6(ಕೆಎಂಶಿ)– ರಾಜ್ಯ ವಿಧಾನಸಭಾ ಚುನಾವಣೆ ಸಮೀಪಿಸುತ್ತಿದ್ದಂತೆ ನಗರ ಪ್ರದೇಶದ ಮತದಾರರನ್ನು ಸೆಳೆಯಲು ಬಿ–ಖಾತಾ ನಿವೇಶನದಾರರಿಗೆ ಎ–ಖಾತಾ ನೀಡಲು ರಾಜ್ಯ ಸರ್ಕಾರ ಮಹತ್ವದ ತೀರ್ಮಾನ ಕೈಗೊಂಡಿದೆ.

ಬೆಂಗಳೂರು ಸೇರಿದಂತೆ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆ ಹಾಗೂ ಇತರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿರುವ ಲಕ್ಷಾಂತರ ಬಿ–ಖಾತಾ ನಿವೇಶನದಾರರಿಗೆ ಪೂರ್ಣಪ್ರಮಾಣದ ಹಕ್ಕು ನೀಡುವ ತೀರ್ಮಾನವನ್ನು ಮುಖ್ಯಮಂತ್ರಿಯವರು ತೆಗೆದುಕೊಂಡಿದ್ದಾರೆ. ಸರ್ಕಾರದ ನಿರ್ಧಾರವನ್ನು ಸುದ್ದಿಗಾರರಿಗೆ ತಿಳಿಸಿದ ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ್, ಇನ್ನೆರಡು ತಿಂಗಳಲ್ಲಿ ಬಿ–ಖಾತಾದಾರರಿಗೆ ಎ–ಖಾತಾ ದಾಖಲೆಗಳು ಲಭ್ಯವಾಗಲಿವೆ. ಲಕ್ಷಾಂತರ ಮಂದಿ ಎ–ಖಾತಾ ಪಡೆಯಲು ಕಳೆದ ಕೆಲವು ವರ್ಷಗಳಿಂದ ಕಚೇರಿಗಳಿಗೆ ಅಲೆದಾಟ ನಡೆಸುತ್ತಿದ್ದರು. ಇದನ್ನು ತಪ್ಪಿಸಿ, ಅವರಿಗೆ ಪೂರ್ಣ ಪ್ರಮಾಣದ ಹಕ್ಕುಪತ್ರಗಳನ್ನು ನೀಡುವ ಜನಪರ ತೀರ್ಮಾನ ಕೈಗೊಳ್ಳಲಾಗಿದೆ. ಬಿ ಖಾತಾ ನಿವೇಶನದಾರರು ತಮ್ಮ

▶ 8ನೇ ಪುಟಕ್ಕೆ

ಧರ್ಮಸ್ಥಳ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಡೆ, ಇಳಯರಾಜ, ಪಿ.ಟಿ.ಉಷಾ, ವಿಜಯೇಂದ್ರ ಪ್ರಸಾದ್ ರಾಜ್ಯಸಭೆಗೆ ನಾಮನಿರ್ದೇಶನ


ಡಾ.ವೀರೇಂದ್ರ ಹೆಗ್ಡೆ


ಇಳಯರಾಜ


ಪಿ.ಟಿ.ಉಷಾ


ವಿಜಯೇಂದ್ರ ಪ್ರಸಾದ್

ನವದೆಹಲಿ: ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗಡೆ, ಜನಪ್ರಿಯ ಸಂಗೀತ ಸಂಯೋಜಕ ಇಳಯರಾಜ, ಮಾಜಿ ಒಲಿಂಪಿಕ್ ತಾರೆ ಪಿ.ಟಿ.ಉಷಾ ಹಾಗೂ ಚಿತ್ರಕಥೆ ರಚನಾಕಾರ ವಿಜಯೇಂದ್ರ ಪ್ರಸಾದ್ (ನಿರ್ದೇಶಕ ರಾಜಮೌಳಿ ತಂದೆ) ಅವರನ್ನು ರಾಜ್ಯಸಭೆಗೆ ನಾಮನಿರ್ದೇಶನ ಮಾಡಲಾಗಿದೆ. ಪ್ರಧಾನಿ ಮೋದಿ ಟ್ವಿಟ್ಟರ್‌ನಲ್ಲಿ ಈ ನಾಲ್ವರನ್ನು ಅಭಿನಂದಿಸಿದ್ದಾರೆ.

ಮೈಸೂರಲ್ಲಿ ವಿವೇಕ ಸ್ಮಾರಕಕ್ಕೆ ಅಡಿಗಲ್ಲು

ವಿವಿಧ ಮಠಾಧಿಪತಿಗಳು, ರಾಮಕೃಷ್ಣ ಆಶ್ರಮದ ಯತಿಗಳು, ಜನಪ್ರತಿನಿಧಿಗಳು ಭಾಗಿ



ಮೈಸೂರಿನಲ್ಲಿ ಉದ್ದೇಶಿತ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರ– ವಿವೇಕ ಸ್ಮಾರಕ ನಿರ್ಮಾಣಕ್ಕೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜಿ ಭೂಮಿಪೂಜೆ ನೆರವೇರಿಸಿದರು. ಚಿತ್ರದಲ್ಲಿ ಶಾಸಕರಾದ ಜಿ.ಟಿ.ದೇವೇಗೌಡ, ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಸಂಸದ ಪ್ರತಾಪ್‌ಸಿಂಹ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ಇತರರನ್ನು ಕಾಣಬಹುದು.

> ▶ ವಿವೇಕ ಸ್ಮಾರಕಕ್ಕೆ ನಾಂದಿ ಹಾಡಲಾಗಿದೆ. ಈ ಕೇಂದ್ರ ಸಾಮಾನ್ಯ ವಿಸ್ಮಯವಷ್ಟೇ ಅಲ್ಲ, ವಿಶ್ವ ವಿಸ್ಮಯ. ಇಂದಿನ ಕಾರ್ಯಕ್ರಮ ಚಿಕಾಗೋ ಸಮಾವೇಶವನ್ನು ನೆನಪಿಗೆ ತರುವ ಕಿರಿಯ ಆವೃತ್ತಿಯಾಗಿದೆ. ವಿವೇಕಾನಂದರ 'ಏಳಿ ಎದ್ದೇಳಿ.. ಗುರಿ ಮುಟ್ಟುವತನಕ ನಿಲ್ಲದಿರಿ..' ಎಂಬಂತೆ ಸ್ಮಾರಕ ಶೀಘ್ರ ಮೇಲೇರಲಿ. ಸರ್ವೋದಯವಾಗಲಿ.
>
> – ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ (ಸಿಪಿಕೆ)

ಮೈಸೂರು, ಜು.6 (ಆರ್‌ಕೆಬಿ)– ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯ ರಾಮಕೃಷ್ಣ ಆಶ್ರಮದ ಉದ್ದೇಶಿತ 'ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರ – ವಿವೇಕ ಸ್ಮಾರಕ'ದ ನಿರ್ಮಾಣಕ್ಕೆ ಇಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮತ್ತು ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಅವರ ಸಮ್ಮುಖದಲ್ಲಿ ಭೂಮಿ ಪೂಜೆ ನೆರವೇರಿಸಲಾಯಿತು. ರಾಮಕೃಷ್ಣ ಆಶ್ರಮದ ಯತಿಗಳು ನಡೆಸಿದ ಹೋಮದೊಂದಿಗೆ ಶಂಕುಸ್ಥಾಪನೆ ಕಾರ್ಯ ಆರಂಭವಾಯಿತು. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಶಂಕುಸ್ಥಾಪನೆ ನೆರವೇರಿಸಿದರು. ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ, ವಿವೇಕ ಸ್ಮಾರಕದ ಮೂಲ ಮಾದರಿಯನ್ನು ಅನಾವರಣಗೊಳಿಸಿದರು.

ಭೂಮಿಪೂಜೆ ನೆರವೇರಿಸಿದ ಬಳಿಕ ಮಾತನಾಡಿದ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಇದೊಂದು ಐತಿಹಾಸಿಕ ಕ್ಷಣ. ವಿವೇಕ ಸ್ಮಾರಕವು ಸಾಂಸ್ಕೃತಿಕ, ಐತಿಹಾಸಿಕ, ಜೀವಂತಿಕೆ ಮತ್ತು ಸ್ಮರಣೀಯ ಸ್ಮಾರಕವಾಗಲಿ. ಸ್ಮಾರಕವು ಸಂಪಿಗೆಯ ಸುಗಂಧವನ್ನು

▶ 3ನೇ ಪುಟಕ್ಕೆ

ಮೈಸೂರಿಗೆ ವಿವೇಕ ಸ್ಮಾರಕ ಕಳಶಪ್ರಾಯ

ಸಂಸದ ಪ್ರತಾಪ್ ಸಿಂಹ ಮಹಾ ಆಶಯ

ಮೈಸೂರು, ಜು.6 (ಆರ್‌ಕೆಬಿ)– ನೂರಾರು ಜನರ ಹೋರಾಟದ ಫಲವಾಗಿ ಇಂದು ಶಂಕುಸ್ಥಾಪನೆಗೊಂಡಿರುವ 'ವಿವೇಕ ಸ್ಮಾರಕ' ಮೈಸೂರಿಗೆ ಕಳಶಪ್ರಾಯವಾಗಲಿದೆ ಎಂದು ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ ಆಶಯ ವ್ಯಕ್ತಪಡಿಸಿದರು.

ಮೈಸೂರಿನಲ್ಲಿ ವಿವೇಕ ಸ್ಮಾರಕದ ಶಂಕುಸ್ಥಾಪನೆ ಸಮಾರಂಭದಲ್ಲಿ ಯೋಜನೆಯ ಮೂಲ ಮಾದರಿ ಅನಾವರಣಗೊಳಿಸಿ ಅವರು ಮಾತನಾಡಿದರು. 1913ರಲ್ಲಿ ರವೀಂದ್ರನಾಥ ಠಾಗೋರ್ ಅವರಿಗೆ ಸಾಹಿತ್ಯಕ್ಕಾಗಿ ನೊಬೆಲ್ ಪಾರಿತೋಷಕ ದೊರೆಯಿತು. ಹಾಗೆಯೇ 1915ರಲ್ಲಿ ಫ್ರೆಂಚ್‌ನ ರೊಮೈನ್ ರೊಲಾಂಡ್ ಅವರಿಗೂ ನೊಬೆಲ್ ಪಾರಿತೋಷಕ ಬರುತ್ತದೆ. ಇದನ್ನು ಪಡೆದುಕೊಳ್ಳುವ ಸಂದರ್ಭದಲ್ಲಿ ಠಾಗೋರ್ ಹಾಗೂ ರೊಲಾಂಡ್ ಇಬ್ಬರ ಭೇಟಿಯಾಗುತ್ತದೆ. ಆಗ ಫ್ರೆಂಚ್ ನಾಟಕಕಾರ, ಕಾದಂಬರಿಕಾರ ರೊಲಾಂಡ್ ಅವರು ರವೀಂದ್ರನಾಥ್ ಠಾಗೋರ್ ಅವರೊಂದಿಗೆ ಮಾತನಾಡುತ್ತಾ, ಭಾರತದ ಬಗ್ಗೆ ತಿಳಿದುಕೊಳ್ಳುವ ಕುತೂಹಲ ವ್ಯಕ್ತಪಡಿಸುತ್ತಾರೆ. ಭಾರತದ ಬಗ್ಗೆ ಸಮಗ್ರವಾಗಿ ಕಟ್ಟಿಕೊಡುವಂತಹ ಒಂದು ಪುಸ್ತಕವನ್ನು ತಿಳಿಸುವಂತೆಯೂ ಠಾಗೋರ್ ಅವರನ್ನು ಕೇಳುತ್ತಾರೆ. ಆಗ ಠಾಗೋರ್ ಅವರು ನೀವು ವಿವೇಕಾನಂದರ ಬಗ್ಗೆ ಅಧ್ಯಯನ ಮಾಡಿ



ಮೈಸೂರಿನಲ್ಲಿ ವಿವೇಕ ಸ್ಮಾರಕದ ಶಂಕುಸ್ಥಾಪನೆ ಸಮಾರಂಭದಲ್ಲಿ ಯೋಜನೆಯ ಮೂಲ ಮಾದರಿ ಅನಾವರಣಗೊಳಿಸಿ, ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ ಮಾತನಾಡಿದರು.

ಎನ್ನುತ್ತಾರೆ. ಆಗ ರೊಮೈನ್ ರೊಲಾಂಡ್ ಅವರು ವಿವೇಕಾನಂದರ ಅಧ್ಯಯನದ ಮೂಲಕ ಭಾರತದ ಬಗ್ಗೆ ತಿಳಿದುಕೊಳ್ಳುತ್ತಾರೆ. ಬಳಿಕ ವಿವೇಕಾನಂದರ ಬಗ್ಗೆ ಪುಸ್ತಕವೊಂದನ್ನು ಸಹ ಬರೆಯುತ್ತಾರೆ. ನೊಬೆಲ್ ಪಾರಿತೋಷಕ ಪಡೆದ ವ್ಯಕ್ತಿ ಇಷ್ಟೊಂದು ಪ್ರೇರಣೆ ಪಡೆದು ಕೊಳ್ಳುತ್ತಾರೆಂದರೆ ವಿವೇಕಾನಂದರ ವ್ಯಕ್ತಿತ್ವ ಎಷ್ಟು ದೊಡ್ಡದು ಎಂಬುದು ಗೊತ್ತಾಗುತ್ತದೆ ಎಂದು ಪ್ರತಾಪ್‌ಸಿಂಹ ತಿಳಿಸಿದರು.

ವಿವೇಕಾನಂದರು 1893ರಲ್ಲಿ ಅಮೆರಿಕಾಕ್ಕೆ ಹೋದಾಗ ಅಲ್ಲಿ ಹೇಳಿದ 'ಅಮೆರಿಕಾದ ನನ್ನ ಸಹೋದರ– ಸಹೋದರಿಯರೇ...' ಎಂಬ ಅವರ ವಾಕ್ಯದಲ್ಲಿ ಏನಿದೆ ಎಂದು ನಮಗನಿಸಬಹುದು. ಆ ವಾಕ್ಯ ಎಲ್ಲರಿಗೂ ಕೂಡ ಸಹೋದರ–ಸಹೋದರಿಯಂತೆ ನೋಡುವ ಭಾರತದ ಸಂಸ್ಕೃತಿಯ ಹಿನ್ನೆಲೆಯನ್ನು ಅವರು ಒಂದೇ ವಾಕ್ಯದಲ್ಲಿ ಕಟ್ಟಿಕೊಟ್ಟರು. ಅದರ ಮಾರನೇ ದಿನ ಪತ್ರಿಕೆಗಳಲ್ಲಿ **'ಕೊಲಂಬಸ್ ಅಮೆರಿಕದ ಮಣ್ಣನ್ನು ಅನ್ವೇಷಿಸಿದ, ವಿವೇಕಾನಂದರು ಅಮೆರಿಕಾದ ಆತ್ಮವನ್ನು ಅನ್ವೇಷಿಸಿದರು'** ಎಂದು ಪ್ರಕಟವಾಗಿತ್ತು.

ಅಂತಹ ವಿವೇಕಾನಂದರು ಮೈಸೂರಿಗೆ ಬಂದು, ಅವರು ನೆಲೆಸಿದ್ದ ಜಾಗದಲ್ಲಿ ವಿವೇಕ ಸ್ಮಾರಕ ನಿರ್ಮಾಣವಾಗಲು ಇದರ ಹಿಂದೆ ನೂರಾರು ಜನರ ಕೊಡುಗೆ, ಹೋರಾಟ, ಶ್ರಮವಿದೆ. ಎಲ್ಲ ರೀತಿಯ ಹೋರಾಟ, ಒತ್ತಡವನ್ನು ತಾಳಿಕೊಂಡು, ಸ್ವಾಮಿ ಮುಕ್ತಿದಾನಂದಜೀ ಬಂದಿದ್ದಾರೆ. ಅದರ ಫಲ, ಇಂದಿನ ವಿವೇಕ ಸ್ಮಾರಕದ ಶಂಕುಸ್ಥಾಪನೆಗೆ ಕಾರಣವಾಗಿದೆ. ವಿವೇಕ ಸ್ಮಾರಕ ಮೈಸೂರಿಗೆ ಕಳಶಪ್ರಾಯವಾಗಲಿದೆ ಎಂದರು.

ವಿವೇಕ ಸ್ಮಾರಕದ ವಿಚಾರದಲ್ಲಿ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರ ಸಹಕಾರದ ಬಗ್ಗೆಯೂ ಪ್ರತಾಪ್‌ಸಿಂಹ ತಮ್ಮ ಭಾಷಣದಲ್ಲಿ ಉಲ್ಲೇಖ ಮಾಡಿದರು.

ಪಿಎಸ್ಐ ನೇಮಕಾತಿ ಹಗರಣದಲ್ಲಿ ಸಿದ್ದರಾಮಯ್ಯ ಆರೋಪ ಗಾಳಿಯಲ್ಲಿ ಗುಂಡು ಹೊಡೆದಂತಿದೆ...

● ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥನಾರಾಯಣ ವಾಗ್ದಾಳಿ
● ದಾಖಲೆ ಪ್ರಮಾಣದ ಬಜೆಟ್ ಮಂಡಿಸಿದವರು ದಾಖಲೆ ಇಲ್ಲದೆ ಆರೋಪ ಮಾಡುವುದು ಸರಿಯಾ...!?

ಬೆಂಗಳೂರು, ಜು. 6(ಕೆಎಂಶಿ)–ಪಿಎಸ್ಐ ನೇಮಕಾತಿ ಹಗರಣ ಸಂಬಂಧವಾಗಿ ಯಾವುದೇ ದಾಖಲೆಗಳಿಲ್ಲದೆ ಗಾಳಿಯಲ್ಲಿ ಗುಂಡು ಹೊಡೆದಂತೆ ತಮ್ಮ ವಿರುದ್ಧ ಆರೋಪಿಸುತ್ತಿರುವ ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಅವರು ಪೆದ್ದರಾಮಯ್ಯ ಅವರಂತೆ ವರ್ತಿಸುತ್ತಿದ್ದಾರೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹರಿಹಾಯ್ದಿದ್ದಾರೆ.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಾಖಲೆ ಸಂಖ್ಯೆಯಲ್ಲಿ ರಾಜ್ಯದ ಬಜೆಟ್ಟನ್ನು ಮಂಡಿಸಿದವರು. ಆದರೆ ಈಗ ಅವರು ದಾಖಲೆಗಳಿಲ್ಲದೆಯೇ ಇಲ್ಲಸಲ್ಲದ ಆಪಾದನೆಗಳನ್ನು ಮಾಡುತ್ತಿದ್ದಾರೆ. ಈ ಮೂಲಕ ತಮ್ಮ ಮಟ್ಟವನ್ನು ತಾವೇ ಇಳಿಸಿಕೊಳ್ಳುತ್ತಿದ್ದಾರೆ ಎಂದು ಅವರು ಹೇಳಿಕೆಯಲ್ಲಿ ಚುಚ್ಚಿದ್ದಾರೆ. ಎಲ್ಲರ ಕೈಗಳೂ ತನ್ನ ಕೈಗಳಂತೆಯೇ ಕೊಳಕು ಎಂದುಕೊಂಡಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಮಾತಿಗೆ ಸಿದ್ದರಾಮಯ್ಯ ಗೋಣು ಹಾಕುತ್ತಿದ್ದಾರೆ. ಒಂದು ಸುಳ್ಳನ್ನು ನೂರು ಸಲ ಹೇಳಿದರೆ ಅದನ್ನು ಸತ್ಯವಾಗಿಸಬಹುದು ಎಂಬ ಭ್ರಮೆ ಸಿದ್ದರಾಮಯ್ಯ ಅವರನ್ನು ಆವರಿಸಿಕೊಂಡಿದೆ. ತಮ್ಮ 75ನೇ ವರ್ಷಾಚರಣೆ ಸಂದರ್ಭದಲ್ಲಾ ದರೂ ಅವರು ಈ ಭ್ರಮೆಯಿಂದ ಹೊರಬರಬೇಕು ಎಂದು ಹೇಳಿ ದ್ದಾರೆ. ಲೋಕಾಯುಕ್ತದ ಕೈ ಕಟ್ಟಿ ಅದನ್ನು ನೀರಿಗೆ ಬಿಟ್ಟ ಕುಖ್ಯಾತಿ ಸಿದ್ದರಾಮಯ್ಯ ಅವರಿಗೆ ತಳುಕು ಹಾಕಿಕೊಂಡಿದೆ. ಹಾಗೆಯೇ, ಅವರು "ಅರ್ಕಾವತಿ ಹಗರಣದ ಪಿತಾಮಹ"ನೂ ಆಗಿದ್ದಾರೆ.



ಸಿದ್ದರಾಮಯ್ಯ ಅವರು ಸುಳ್ಳುಗಳ ಸರಮಾಲೆ ಹೆಣೆಯುವುದರಲ್ಲಿ ಸಿದ್ಧಹಸ್ತರು. ಜೊತೆಗೆ, ತಾವು ಅಧಿಕಾರದಲ್ಲಿದ್ದಾಗ ಎಲ್ಲರನ್ನೂ ಒಟ್ಟಿಗೆ ತೆಗೆದು ಕೊಂಡು ಹೋಗಲಾಗದೆ ಸಮುದಾಯಗಳನ್ನು ಪರಸ್ಪರ ಎತ್ತಿಕಟ್ಟಿ ಜನರ ಕೆಂಗಣ್ಣಿಗೆ ಗುರಿಯಾದ ಅವರು ಜನರಿಂದ ತಿರಸ್ಕೃತರಾಗಿರುವುದು ಎಲ್ಲರಿಗೂ ಗೊತ್ತಿರುವಂಥದ್ದೇ ಆಗಿದೆ. ಕೇವಲ ಮಾತಿನ ಚಾತುರ್ಯದಿಂದ ಸುಳ್ಳನ್ನು ಸತ್ಯ ಮಾಡಲಾಗದು ಎಂಬ ಅರಿವು ಅವರಿಗಿದ್ದರೆ ಒಳ್ಳೆಯದು ಎಂದಿದ್ದಾರೆ.

ಡಿವೈಎಸ್ ಪಿ ಗಣಪತಿ ಅವರ ಆತ್ಮಹತ್ಯೆಗೆ ಕಾರಣವೇನೆಂದು ಕೇಳಿದರೆ ಸಿದ್ದರಾಮಯ್ಯ ಅವರು ಕಳ್ಳರಂತೆ ನುಣುಚಿಕೊಳ್ಳುತ್ತಾರೆ. 'ಕಾಮಾಲೆ ಕಣ್ಣಿಗೆ ಕಾಣುವುದೆಲ್ಲಾ ಹಳದಿ' ಎನ್ನುವಂತೆ ಸಿದ್ದರಾಮಯ್ಯ ಅವರಿಗೆ ಯಾವಾಗಲೂ ಸಮಾಜ ಕೆಟ್ಟದ್ದಾಗಿಯೇ ಕಾಣುತ್ತದೆ. ಹೀಗಾಗಿಯೇ ಅವರು ಸಾಮರಸ್ಯದ ನಿದರ್ಶನಗಳನ್ನು ಬಿಟ್ಟು, ಸಮುದಾಯಗಳ ಮಧ್ಯೆ ಒಡಕು ತರುವ ಮಾತುಗಳನ್ನೇ ಆಡುತ್ತಿರುತ್ತಾರೆ ಎಂದು ಅಶ್ವತ್ಥನಾರಾಯಣ ಪ್ರಹಾರ ಮಾಡಿದ್ದಾರೆ.

ಸಿದ್ದರಾಮಯ್ಯ ಅವರು ಇಲ್ಲಸಲ್ಲದ ಆರೋಪ ಮಾಡಿದರೆ ಡಿಕೆಶಿ ಅವರು ತಲೆ ಅಲ್ಲಾಡಿಸಬಹುದೇ ವಿನಾ ನಾಡಿನ ಜನರು ನಂಬಲಾರರು. ಕಾಂಗ್ರೆಸ್ ಸುಳ್ಳಿನ ಫ್ಯಾಕ್ಟರಿಯ CEO ಆಗಲು ಪೈಪೋಟಿ ನಡೆಸುತ್ತಿರುವ ಸಿದ್ದರಾಮಯ್ಯ ಹಾಗೂ ಡಿಕೆಶಿ ಅವರು "ದಿನಕ್ಕೊಂದು ಸುಳ್ಳು" ತತ್ತ್ವಕ್ಕೆ ಮೊರೆ ಹೋಗಿದ್ದಾರೆ. ತಾವು ಬೆಳೆಸಿದ ಭ್ರಷ್ಟರನ್ನು ಬಿಜೆಪಿ ಸರ್ಕಾರ ಮಟ್ಟ ಹಾಕುತ್ತಿದೆ ಎಂಬ ಭಯ ಅವರಲ್ಲಿ ಅಸ್ಥಿರತೆ ಉಂಟುಮಾಡಿದೆ ಎಂದು ಟೀಕಿಸಿದ್ದಾರೆ.

ಕೆ.ಆರ್.ಕ್ಷೇತ್ರ ಮಾದರಿ ಕ್ಷೇತ್ರ: ಶಾಸಕ ರಾಮದಾಸ್ ಶಪಥ



ಮೈಸೂರು, ಜು.6– ಕೃಷ್ಣರಾಜ ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿಸುವ ಸಂಬಂಧ ಯೋಜನೆಗಳ ಅನುಷ್ಠಾನ ಕುರಿತು ಸಭೆ ನಡೆಸಲಾಯಿತು. ಮೈಸೂರು ಮಹಾನಗರ ಪಾಲಿಕೆಯ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಕೆ.ಆರ್. ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್ ಅವರ ನೇತೃತ್ವದಲ್ಲಿ ಸಭೆ ನಡೆಯಿತು.

ಆಗಸ್ಟ್ 14ರೊಳಗೆ ವಿವಿಧ ಇಲಾಖೆಗಳನ್ನು ಒಗ್ಗೂಡಿಸಿಕೊಂಡು ಕ್ಷೇತ್ರದಲ್ಲಿ ಸೇಫ್ಟಿ ರಸ್ತೆ ನಿರ್ಮಾಣ, ಬೋರ್‌ವೆಲ್ ಮುಕ್ತ, ಪ್ರಧಾನ ಮಂತ್ರಿ ಆವಾಸ್‌ಯೋಜನೆಯಡಿ ಎಲ್ಲರಿಗೂ ವಸತಿ ಸೌಲಭ್ಯ ಕಲ್ಪಿಸುವುದು, ಪ್ಲಾಸ್ಟಿಕ್ ಮುಕ್ತಗೊಳಿಸುವುದರೊಂದಿಗೆ ಪೇಪರ್ ಮತ್ತು ಹತ್ತಿ ಬ್ಯಾಗ್ ಬಳಕೆಗೆ ತರಬೇತಿ ನೀಡುವುದು. ವಾರ್ಡ್ ನಂ. 55 ಅನ್ನು ಸಂಪೂರ್ಣ ಆರೋಗ್ಯಕರ ವಾರ್ಡ್ ಮಾಡುವುದು, ಶಿಬಿರಗಳ ಮೂಲಕ ಎಲ್ಲಾ ಮನೆಗಳಿಗೆ ಪ್ರಾಪರ್ಟಿ ಕಾರ್ಡ್‌ಗಳು (ಅಶೋಕಪುರಂ, ಎಲ್ಲಾ ಕಂದಾಯ ಬಡಾವಣೆಗಳು, ಮುಡಾ ಅನುಮೋದಿತ ಲೇಔಟ್‌ಗಳು) ನೀಡುವುದು, ಪ್ರಧಾನಿ ಸ್ವಾನಿಧಿ ಯೋಜನೆ ಅನುಷ್ಠಾನಗೊಳಿಸುವ ಬಗ್ಗೆ ಚರ್ಚಿಸಲಾಯಿತು.

ಕ್ಷೇತ್ರದ ಉದ್ಯಾನವನಗಳ ಅಭಿವೃದ್ಧಿ ಮತ್ತು ಬಳಕೆದಾರರ ಸಮಿತಿಯ ರಚನೆ, ಕ್ಷೇತ್ರದ ಸರ್ಕಾರಿ ಶಾಲೆ ಮತ್ತು ಕಾಲೇಜುಗಳಿಗೆ ಮೂಲ ಸೌಲಭ್ಯಗಳನ್ನು ದೊಕಿಸಿಕೊಡುವುದು ಹಾಗೂ ಸರಸ್ವತಿಪುರಂ ಮತ್ತು ಚಾಮರಾಜಪುರಂನಲ್ಲಿ ಗ್ರಂಥಾಲಯ ಸ್ಥಾಪನೆ, ನಾಯಿ ಮತ್ತು ಕೋತಿಗಳಿಗೆ ಪುನರ್ವಸತಿ ಕೇಂದ್ರಗಳು ನಿರ್ಮಾಣ ಕುರಿತು ಕೂಡ ಚರ್ಚಿಸಲಾಯಿತು. ಕ್ಷೇತ್ರದಲ್ಲಿರುವ ಮತದಾರರ ಪಟ್ಟಿಯನ್ನು ಪರಿಪೂರ್ಣವಾಗಿ ಸಿದ್ಧಪಡಿಸಬೇಕು. ಕೊಳಚೆ ಫಾರ್ಮ್‌ನಲ್ಲಿ ಭೂಮಿ ಹಂಚಿಕೆ ಮತ್ತು ತರಕಾರಿ ಮಾರಾಟಗಾರಿಗೆ ಹಾಗೂ ಮಾರುಕಟ್ಟೆಯಲ್ಲಿ ಮಹಿಳೆಯರಿಗೆ ವೇದಿಕೆ ಸ್ಥಾಪನೆಗೊಳಿಸಬೇಕು. ಈ ಎಲ್ಲಾ ಯೋಜನೆಗಳ ಅನುಷ್ಠಾನಕ್ಕೆ ವೇಳಾಪಟ್ಟಿಯನ್ನು ತಯಾರಿಸುವಂತೆ ಸಭೆಯಲ್ಲಿ ತಿಳಿಸಲಾಯಿತು.



ಮೈಸೂರಿನ ವಿಜಯನಗರದ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರ(ಆರ್‌ಕೆವಿ)ದ 5ನೇ ತರಗತಿ ವಿದ್ಯಾರ್ಥಿ ಎಂ.ಎಸ್.ಅಮನ್ ಶ್ರೀವತ್ಸ, ಕರ್ನಾಟಕ ರಾಜ್ಯ ಪೆನ್‌ಕಾಕ್ ಸಿಲಕ್ ಅಸೋಸಿಯೇಷನ್ ಏರ್ಪಡಿಸಿದ್ದ ದಕ್ಷಿಣ ವಲಯ ಪೆನ್‌ಕಾಕ್ ಸಿಲಕ್ ಚಾಂಪಿಯನ್‌ಶಿಪ್ 2021–22 ರಲ್ಲಿ ಬೆಳ್ಳಿ ಪದಕ ವಿಜೇತನಾಗಿದ್ದಾನೆ. ಪೆನ್‌ಕಾಕ್ ಸಿಲಕ್ ಇಂಡೋನೇಷಿಯನ್ ಸಮರ ಕಲೆಗಳಲ್ಲಿ ಒಂದಾಗಿದೆ, ಚಿತ್ರದಲ್ಲಿ ಅಮನ್‌ನೊಂದಿಗೆ ತರಗತಿ ಶಿಕ್ಷಕರಾದ ರತ್ನ, ಪ್ರಧಾನ್‌ಆಚಾರ್ಯ ಡಿ. ಅನಿತಾ (ಬಲಬದಿ) ಕಾಣಬಹುದು.



ಮೈಸೂರು ಜಿಲ್ಲಾ ಕುಂಬಾರರ ಮಹಿಳಾ ಸಂಘದ ವತಿಯಿಂದ ಪುರಭವನದಲ್ಲಿ ಕೊಡಗು ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷೆ ರೇಣುಕಾಂಬ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಶ್ರೀ ಬಸವ ಗುಂಡಯ್ಯ ಸ್ವಾಮೀಜಿ, ನಗರಪಾಲಿಕೆ ಸದಸ್ಯೆ ಉಷಾ ಕುಮಾರ್, ಮಂಜಪ್ಪ, ಹೆಚ್.ಎಸ್.ಪ್ರಕಾಶ್, ಚೆಸ್ಕಾಂ ತಾಂತ್ರಿಕ ನಿರ್ದೇಶಕ ಮಂಜಪ್ಪ, ರವಿಕುಮಾರ್, ಶಿವಕುಮಾರ್, ಚೌಡಶೆಟ್ಟಿ ಇನ್ನಿತರರು ಉಪಸ್ಥಿತರಿದ್ದರು.

ಶಿಕ್ಷಣ ತಜ್ಞ ಶ್ಯಾಮ್‌ಪ್ರಸಾದ್ ಮುಖರ್ಜಿ ಜನ್ಮ ದಿನಾಚರಣೆ



ಮೈಸೂರು, ಜು.6(ಆರ್‌ಕೆಬಿ)– ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ವತಿಯಿಂದ ಬುಧವಾರ ವಿದ್ಯಾರಣ್ಯಪುರಂನಲ್ಲಿರುವ ಗ್ರಾಹಕ ಪಂಚಾಯತ್ ಕಚೇರಿಯಲ್ಲಿ ಶಿಕ್ಷಕ ತಜ್ಞ, ಚಿಂತಕ ಶ್ಯಾಮ್‌ಪ್ರಸಾದ್ ಮುಖರ್ಜಿ ಅವರ ಜನ್ಮ ದಿನವನ್ನು ಆಚರಿಸಲಾಯಿತು.

ಅಖಿಲ ಭಾರತ ಗ್ರಾಹಕ ಪಂಚಾಯತ್ ಅಧ್ಯಕ್ಷ ರವಿಶಂಕರ್ ಮಾತನಾಡಿ, ಶ್ಯಾಮ್ ಪ್ರಸಾದ್ ಮುಖರ್ಜಿ ಅವರಂತಹ ಮಹಾನ್ ವ್ಯಕ್ತಿಗಳ ಆದರ್ಶ, ಸಾಮಾಜಿಕ ಕಳಕಳಿ ನಮಗೆ ಪ್ರೇರಣೆಯಾಗಬೇಕು. ತಮ್ಮ ಬದುಕಿನುದ್ದಕ್ಕೂ ಪ್ರಖರ ರಾಷ್ಟ್ರೀಯತೆಯನ್ನು ಪ್ರತಿಪಾದಿಸಿದ್ದ ಮುಖರ್ಜಿಯವರು ದೇಶ ವಿಭಜನೆಯನ್ನು ಪ್ರಬಲವಾಗಿ ವಿರೋಧಿಸಿದ್ದರು. ಅಖಂಡ ಭಾರತದ ಪರಿಕಲ್ಪನೆಯ ಕನಸು ಅವರದ್ದಾಗಿತ್ತು ಎಂದು ಸ್ಮರಿಸಿದರು.

ನಂತರ ಮಾತನಾಡಿದ ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ಮಾತನಾಡಿ, ಕೈ ಜಾರಿ ಹೋಗುತ್ತಿದ್ದ ಕಾಶ್ಮೀರ ರಕ್ಷಣೆ ಮಾಡಿದ ಕೀರ್ತಿ ಮುಖರ್ಜಿ ಅವರಿಗೆ ಸಲ್ಲುತ್ತದೆ. ಕಾಶ್ಮೀರ ರಕ್ಷಣಾ ಸತ್ಯಾಗ್ರಹದ ಮುಂದಾಳತ್ವವನ್ನು ವಹಿಸಿಕೊಂಡು 1950ರ ಅವಧಿಯಲ್ಲಿ 370ನೇ ವಿಧಿಯನ್ನು ಧಿಕ್ಕರಿಸಿ ಕಾಶ್ಮೀರ ಪ್ರವೇಶ ಮಾಡಿದ್ದಕ್ಕೆ ಅಂದಿನ ನೆಹರು ಮತ್ತು ಶೇಕ್ ಅಬ್ದುಲ್ಲಾ ಸರ್ಕಾರ ಅವರನ್ನು ಗೃಹಬಂಧನಕ್ಕೆ ಒಳಪಡಿಸಿತ್ತು. ದೇಶದ ಪ್ರಗತಿಗೆ ಶ್ರಮಿಸಿದ ಮುಖರ್ಜಿ ಯುವ ಸಮೂಹಕ್ಕೆ ರಾಷ್ಟ್ರ ಪ್ರೇಮದ ಪ್ರಾಮುಖ್ಯತೆಯನ್ನು ತಿಳಿಸಿಕೊಟ್ಟರು. ಮುಖರ್ಜಿ ಅವರ ಭಾರತೀಯ ಜನ ಸಂಘವೇ ಇಂದಿನ ಭಾರತೀಯ ಜನತಾ ಪಾರ್ಟಿಯಾಗಿ ರಾಷ್ಟ್ರ ಮಟ್ಟದ ರಾಜಕಾರಣದಲ್ಲಿ ಸೇವೆ ಸಲ್ಲಿಸುತ್ತಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಅಖಿಲ ಭಾರತ ಗ್ರಾಹಕ ಪಂಚಾಯತ್ ಸಂಘಟನಾ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಮಮತಾ, ಕುಮಾರಸ್ವಾಮಿ, ರಂಗನಾಥ್, ಸುಚಿಂದ್ರ, ಚಕ್ರಪಾಣಿ, ಸದಾಶಿವ, ಸೂರಜ್ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ತೆರೆಗೆ 'ಶುಗರ್‌ಲೆಸ್'!



ಮೈಸೂರು, ಜು.6(ಎಂಟಿವೈ)–ಸಕ್ಕರೆ ಕಾಯಿಲೆ ಕುರಿತಂತೆ ಜನರಲ್ಲಿರುವ ತಪ್ಪು ಕಲ್ಪನೆಯನ್ನು ಒಳಗೊಂಡ ಹಾಸ್ಯಮಿಶ್ರಿತ ಕಥಾ ಹಂದರವುಳ್ಳ 'ಶುಗರ್‌ಲೆಸ್' ಚಿತ್ರ ಜು. 8ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿದೆ ಎಂದು ನಿರ್ದೇಶಕ ಕೆ.ಎಂ. ಶಶಿಧರ್ ತಿಳಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಸಕ್ಕರೆ ಖಾಯಿಲೆ ಬಗ್ಗೆ ಜನರಲ್ಲಿ ತಪ್ಪು ಕಲ್ಪನೆಯಿದೆ. ಸಕ್ಕರೆ ಖಾಯಿಲೆ ನಿರ್ಮೂಲನೆ ನಿಟ್ಟಿನಲ್ಲಿ ಜಾಗೃತಿ ಮೂಡಿಸುವ ಅವಶ್ಯಕತೆಯಿದೆ. ಅದನ್ನು ಮನಗಂಡು ಸಕ್ಕರೆ ಖಾಯಿಲೆ ಬಗ್ಗೆ ಜನರಲ್ಲಿ ಹಾಸ್ಯಭರಿತ ಸನ್ನಿವೇಶದೊಂದಿಗೆ ಜಾಗೃತಿ ಮೂಡಿಸಲು ಚಿತ್ರದ ಕಥೆ, ಚಿತ್ರಕಥೆ ಬರೆದು 'ಶುಗರ್‌ಲೆಸ್' ಚಲನಚಿತ್ರವನ್ನು ನಿರ್ದೇಶಿಸಿದ್ದೇನೆ. ಸಕ್ಕರೆ ಕಾಯಿಲೆ ಬಗ್ಗೆ ಸಮಾಜಕ್ಕೆ ಅಗತ್ಯವಾಗಿ ಬೇಕಾಗಿರುವ ಉತ್ತಮ ಸಂದೇಶವನ್ನು ಈ ಚಲನಚಿತ್ರ ಹೊಂದಿದೆ ಎಂದರು.

ಈ ಚಿತ್ರದಲ್ಲಿ ನಾಯಕ ನಟನಾಗಿ ಪೃಥ್ವಿ ಅಂಬಾರ್ ಅಭಿನಯಿಸಿದ್ದರೆ ತಾರಾಗಣದಲ್ಲಿ ಕಲಾವಿದರಾದ ರಾಘು ರಾಮನಕೊಪ್ಪ, ಧರ್ಮಣ್ಣ ಕಡೂರ್ ಹಾಗೂ ಇನ್ನಿತರರು ನಟಿಸಿದ್ದಾರೆ. ಈ ಚಲನಚಿತ್ರ ಎಲ್ಲ ವರ್ಗದ ಪ್ರೇಕ್ಷಕರ ಮನಸೂರೆಗೊಳ್ಳಲಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಕಲಾವಿದರಾದ ಪೃಥ್ವಿ ಅಂಬಾರ್, ರಾಘು ರಾಮನಕೊಪ್ಪ, ಧರ್ಮಣ್ಣ ಕಡೂರ್ ಇದ್ದರು.

ಲಾಭದ ಆಸೆ ತೋರಿಸಿ ರೈತನಿಗೆ 5.44 ಲಕ್ಷ ವಂಚನೆ

ಮೈಸೂರು, ಜು.6–ವಹಿವಾಟು ನಡೆಸಲು ಇನ್ವೆಸ್ಟ್‌ಮೆಂಟ್ ಮಾಡಿದರೆ ಹೆಚ್ಚಿನ ಲಾಭ ಗಳಿಸಬಹುದು ಎಂದು ಆಮಿಷ ಒಡ್ಡಿ ಆನ್‌ಲೈನ್ ಮೂಲಕ ರೈತನಿಂದ ಹಣ ವರ್ಗಾವಣೆ ಮಾಡಿಸಿಕೊಂಡು 5.44 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ.

ಹುಣಸೂರು ತಾಲೂಕು ಹಿರೇಕ್ಯಾತನಹಳ್ಳಿ ಗ್ರಾಮದ ರೈತ ಹೆಚ್.ಜೆ.ಅಭಿಷೇಕ್ (31) ಮೇ 16ರಂದು ಯೂ–ಟ್ಯೂಬ್ ವೀಕ್ಷಿಸುತ್ತಿದ್ದಾಗ ಹೆಚ್ಚಿನ ಲಾಭ ಪಡೆಯಲು BITFULRY Group ಎಂಬ ಇನ್ವೆಸ್ಟ್‌ಮೆಂಟ್ ಆ್ಯಪ್ ನೋಡಿದ್ದಾರೆ. ಅದರಲ್ಲಿ ನಮೂದಿಸಿದ್ದ 8598943156 ಮೊಬೈಲ್ ಸಂಖ್ಯೆಯನ್ನು ಸಂಪರ್ಕಿಸಿದಾಗ ನರೇಶ್ ಎಂಬ ಹೆಸರಿನಲ್ಲಿ ಮಾತನಾಡಿದ ವ್ಯಕ್ತಿ ತನ್ನನ್ನು ಸಂಸ್ಥೆಯ ಮ್ಯಾನೇಜರ್ ಎಂದು ಪರಿಚಯಿಸಿಕೊಂಡು ವಾಟ್ಸಾಪ್ ಲಿಂಕ್ ಕಳುಹಿಸುವುದಾಗಿಯೂ, ಅದರ ಮೂಲಕ ಕೆಲವು ಪ್ರಾಡಕ್ಟ್‌ಗಳ ಮೇಲೆ ಇನ್ವೆಸ್ಟ್‌ಮೆಂಟ್ ಮಾಡಿದರೆ ಲಾಭಾಂಶ ಬರುತ್ತದೆ ಎಂದು ತಿಳಿಸಿದ್ದಾನೆ. ಅದರಂತೆ ಅಭಿಷೇಕ್ ಅವರು ಮೇ 16ರಂದು ಮೈನಿಂಗ್ ಮೆಷಿನ್‌ಗೆ ಸಂಬಂಧಿಸಿದ ಪ್ರಾಡಕ್ಟ್‌ಗಳಿಗಾಗಿ 97,700 ರೂ. ವರ್ಗಾವಣೆ ಮಾಡಿದ್ದಾರೆ. ಮೇ 18ರಂದು 5,605 ರೂ. ಲಾಭಾಂಶ ಅವರ ಖಾತೆಗೆ ಜಮೆ ಆಗಿದೆ. ಇದರಿಂದಾಗಿ ಒಳ್ಳೆಯ ಲಾಭ ಬರುತ್ತದೆ ಎಂದು ಭಾವಿಸಿದ ಅವರು, ಹಂತ–ಹಂತವಾಗಿ 6,76,500 ರೂ. ಹೂಡಿಕೆ ಮಾಡಿದ್ದಾರೆ. ಆದರೆ ಅವರಿಗೆ 1,31,847 ರೂ. ಮಾತ್ರ ವಾಪಸ್ ಬಂದಿದ್ದು, ಉಳಿಕೆ 5,44,653 ರೂ. ಬಂದಿಲ್ಲ. ಇದರ ಬಗ್ಗೆ ವಿಚಾರಿಸಲು ಕರೆ ಮಾಡಿದರೆ ನರೇಶ್ ಎಂಬಾತನ ಮೊಬೈಲ್ ಸ್ವಿಚ್ ಆಫ್ ಆಗಿದೆ. ಈ ಸಂಬಂಧ ಮೈಸೂರು ಜಿಲ್ಲಾ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜು.15ಕ್ಕೆ 'ಚೇಸ್' ರಿಲೀಸ್



ಮೈಸೂರು, ಜು.6(ಎಂಟಿವೈ)–ಪ್ರೇಕ್ಷಕರ ಕುತೂಹಲ ಕೆರಳಿಸುವ ಸಸ್ಪೆನ್ಸ್ ಹಾಗೂ ಥ್ರಿಲ್ಲರ್ ಅನುಭವ ನೀಡುವ ಕಥೆಯುಳ್ಳ 'ಚೇಸ್' ಕನ್ನಡ ಚಲನಚಿತ್ರ ಜು. 15ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿದೆ ಎಂದು ನಾಯಕಿ ನಟಿ ರಾಧಿಕಾ ನಾರಾಯಣ್ ತಿಳಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಚೇಸ್' ಚಿತ್ರವನ್ನು ವಿಲೋಕ್ ಶೆಟ್ಟಿ ನಿರ್ದೇಶಿಸಿದ್ದು, ಸೊಗಸಾಗಿ ಮೂಡಿಬಂದಿದೆ. ಇದು ಕೊರೊನಾ ನಂತರ ಬಿಡುಗಡೆಯಾಗುತ್ತಿರುವ ಮೊದಲ ಥ್ರಿಲ್ಲಿಂಗ್ ಚಿತ್ರವಾಗಿದೆ. ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುವ ನಿರೀಕ್ಷೆ ಇದೆ. ಒಂದು ಕೊಲೆಯ ನಿಗೂಢತೆಯ ಹಿಂದೆ ಈ ಚಿತ್ರ ಸಾಗುತ್ತದೆ. ಪ್ರಕರಣವನ್ನು ಹಿಂಬಾಲಿಸುತ್ತ ಹೋಗುವುದರಿಂದ ಹೊರಬೀಳುವ ಅನೇಕ ಸತ್ಯಗಳೇ ಈ ಚಿತ್ರದ ಮುಖ್ಯ ಕಥಾ ವಸ್ತುವಾಗಿದೆ. ಇದು ಹೊಸ ಶೈಲಿಯ ಚಲನಚಿತ್ರವೂ ಆಗಿದ್ದು, ಐದು ಹಾಡುಗಳಿವೆ ಎಂದರು. ಪ್ರಸ್ತುತ ಎನಿಸುವ ಕಥೆಯನ್ನು ಹೊಂದಿರುವ ಈ ಚಿತ್ರ, ತಾಂತ್ರಿಕವಾಗಿಯೂ ಉತ್ತಮವಾಗಿದೆ. ಕ್ಷಣ ಕ್ಷಣಕ್ಕೂ ಕುತೂಹಲ ಕೆರಳಿಸುವುದರೊಂದಿಗೆ 'ಮ್ಯಾಕ್ಸ್' ಎಂಬ ಶ್ವಾನವೂ ಚಿತ್ರದುದ್ದಕೂ ಗಮನ ಸೆಳೆಯಲಿದೆ. ಸುದ್ದಿಗೋಷ್ಠಿಯಲ್ಲಿ 'ಚೇಸ್' ಚಿತ್ರ ತಂಡದ ಕಲಾವಿದರಾದ ಶ್ವೇತಾ, ಪ್ರಶಾಂತ್, ಶಿವಶೆಟ್ಟಿ, ಅರ್ಜುನ್ ಯೋಗಿ ಹಾಜರಿದ್ದರು.

ಕಾಂಗ್ರೆಸ್ ಮುಖಂಡ ಹರೀಶ್‌ಗೌಡರ ಹುಟ್ಟುಹಬ್ಬದ ಅಂಗವಾಗಿ ಉದ್ಯೋಗ ಮೇಳ



ಮೈಸೂರು,ಜು.6(ಎಂಟಿವೈ)– ಕಾಂಗ್ರೆಸ್ ಮುಖಂಡ ಕೆ. ಹರೀಶ್‌ಗೌಡ ಅವರ ಜನ್ಮ ದಿನದ ಅಂಗವಾಗಿ ಜು.28ರಂದು ಗೋಕುಲಂನ ಡಾಕ್ಟರ್ಸ್ ಕಾರ್ನರ್ ಮೈದಾನದಲ್ಲಿ ಬೃಹತ್ ಉದ್ಯೋಗ ಮೇಳ ಆಯೋಜಿಸಿದ್ದು, ಈ ವೇಳೆ ಸುಮಾರು 5000ಕ್ಕೂ ಹೆಚ್ಚು ಮಂದಿ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಕಲ್ಪಿಸುವ ಗುರಿ ಹೊಂದಲಾಗಿದೆ ಎಂದು ಕೆ.ಹರೀಶ್‌ಗೌಡ ಸ್ನೇಹ ಬಳಗದ ಅನಂತನಾರಾಯಣ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಾಮರಾಜ ಕ್ಷೇತ್ರದಲ್ಲಿ ಹಲವು ವರ್ಷಗಳಿಂದ ಸಮಾಜ ಸೇವೆ ಮಾಡುತ್ತಿರುವ ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ ಚಾಮರಾಜ ಕ್ಷೇತ್ರದಲ್ಲಿ ಈ ಹಿಂದೆ ಎರಡು ಉದ್ಯೋಗ ಮೇಳ ಏರ್ಪಡಿಸಿದ್ದು, ಈ ಬಾರಿಯೂ 5 ಸಾವಿರಕ್ಕೂ ಹೆಚ್ಚು ಮಂದಿಗೆ ಉದ್ಯೋಗ ಕಲ್ಪಿಸಲು ಪ್ರಯತ್ನ ಮಾಡುತ್ತಿದ್ದಾರೆ. ಈ ಮೇಳದಲ್ಲಿ 130ಕ್ಕೂ ಹೆಚ್ಚು ಪ್ರತಿಷ್ಠಿತ ಕಂಪನಿಗಳು ಪಾಲ್ಗೊಳ್ಳುತ್ತಿದ್ದು, ಅರ್ಹ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲಿವೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಡಿಪ್ಲೊಮಾ, ಬಿಇ ಸೇರಿದಂತೆ ಇನ್ನಿತರ ಶಿಕ್ಷಣ ಪಡೆದಿರುವ 18ರಿಂದ 35 ವರ್ಷ ವಯಸ್ಸಿನೊಳಗಿನವರು ಮೇಳದಲ್ಲಿ ಪಾಲ್ಗೊಂಡು ತಮ್ಮ ವಿದ್ಯಾರ್ಹತೆಗೆ ಅನುಗುಣವಾಗಿ ಉದ್ಯೋಗಗಿಟ್ಟಿಸಿಕೊಳ್ಳಬಹುದಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಉದ್ಯೋಗದಾತ ಸಂಸ್ಥೆಯ ರುಕ್ಮಾಂಗದ, ಮಹದೇಶ್, ಜಿ. ಯೋಗೇಶ್, ಸುರೇಂದ್ರಕುಮಾರ್, ಎನ್.ಮಹದೇವ, ರಾಜೇಶ್ ಉಪಸ್ಥಿತರಿದ್ದರು.

ಸ್ಕೂಟರ್ ಡಿಕ್ಕಿಯಲ್ಲಿದ್ದ 3 ಲಕ್ಷ ರೂ. ಕಳವು

ಬ್ಯಾಂಕ್ ಮುಂದೆಯೇ ಖದೀಮರ ಕರಾಮತ್ತು

ಚನ್ನರಾಯಪಟ್ಟಣ, ಜು.6– ಸ್ಕೂಟರ್ ಡಿಕ್ಕಿಯಲ್ಲಿದ್ದ 3 ಲಕ್ಷ ರೂ. ಬ್ಯಾಂಕ್‌ನ ಮುಂಭಾಗವೇ ಕಳವಾಗಿರುವ ಬಗ್ಗೆ ಚನ್ನರಾಯಪಟ್ಟಣದಿಂದ ವರದಿಯಾಗಿದೆ.

ಚನ್ನರಾಯಪಟ್ಟಣ ಟೌನ್ ನಿವಾಸಿ ಎಸ್.ಬಿ.ಲೋಕೇಶ್ ಹಣ ಕಳೆದುಕೊಂಡವರಾಗಿದ್ದು, ಜುಲೈ 4ರಂದು ಮಧ್ಯಾಹ್ನ ಪತ್ನಿ ಲಕ್ಷ್ಮಿಯವರೊಂದಿಗೆ ಮೈಸೂರು ರಸ್ತೆಯಲ್ಲಿರುವ ಕೆನರಾ ಬ್ಯಾಂಕ್ ಶಾಖೆಗೆ ತೆರಳಿ, ಪತ್ನಿ ಖಾತೆಯಿಂದ 3 ಲಕ್ಷ ರೂ.ಗಳನ್ನು ಡ್ರಾ ಮಾಡಿ, ಅದನ್ನು ಬ್ಯಾಂಕ್ ಮುಂಭಾಗ ನಿಲ್ಲಿಸಿದ್ದ ಸ್ಕೂಟರ್‌ನ ಡಿಕ್ಕಿಯಲ್ಲಿಟ್ಟು, ಬ್ಯಾಂಕ್ ಒಳಗೆ ಇದ್ದ ಪತ್ನಿಯನ್ನು ಕರೆತರುವಷ್ಟರಲ್ಲಿ ಹಣ ಕಳವು ಮಾಡಲಾಗಿದೆ. ಈ ಸಂಬಂಧ ಚನ್ನರಾಯಪಟ್ಟಣ ಟೌನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೃಹಿಣಿಯ ಎಟಿಎಂ ಕದ್ದು ಹಣ ಡ್ರಾ: ನೆರೆಮನೆ ನಿವಾಸಿ ವಿರುದ್ಧ ಪ್ರಕರಣ ದಾಖಲು

ಹಾಸನ, ಜು.6–ನೆರೆಮನೆ ನಿವಾಸಿಯೋರ್ವ ಗೃಹಿಣಿಯೊಬ್ಬರ ಎಟಿಎಂ ಕಾರ್ಡ್ ಕದ್ದು 74 ಸಾವಿರ ರೂ. ಡ್ರಾ ಮಾಡಿಕೊಂಡ ಬಗ್ಗೆ ಹಾಸನ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಹಾಸನದ ತೆಲುಗರ ಬೀದಿ ನಿವಾಸಿ ಹೆಚ್.ಕೆ.ಬಿಂದು(35) ಹಣ ಕಳೆದುಕೊಂಡವರಾಗಿದ್ದು, ಮೇ ತಿಂಗಳಿನಲ್ಲಿ ಇವರ ತಾಯಿ ಲಕ್ಷ್ಮಮ್ಮ ಅವರನ್ನು ಅನಾರೋಗ್ಯ ನಿಮಿತ್ತ ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ ಮೇ 23ರಂದು ಚಿಕಿತ್ಸೆ ಫಲಕಾರಿಯಾಗದೇ ಅವರು ಮೃತಪಟ್ಟಿದ್ದಾರೆ.

ನಂತರ ತಮ್ಮ ಹಾಗೂ ತಾಯಿಯ ಜಂಟಿ ಖಾತೆಯಲ್ಲಿದ್ದ ಹಣ ಡ್ರಾ ಮಾಡಲು ಬಿಂದು ಅವರು ಬ್ಯಾಂಕ್‌ಗೆ ಹೋದಾಗ ಖಾತೆಯಲ್ಲಿ ಹಣವೇ ಇರಲಿಲ್ಲ. ಈ ಸಂಬಂಧ ಬ್ಯಾಂಕ್ ಅಧಿಕಾರಿಗಳು ಪರಿಶೀಲನೆ ನಡೆಸಿದಾಗ ಬಿಂದು ಅವರ ನೆರೆಮನೆಯಲ್ಲಿ ವಾಸವಿರುವ ವಿದ್ಯಾರ್ಥಿ ಪಿಂಟೋರಾಜ್ ಎಂಬಾತ ಎಟಿಎಂನಲ್ಲಿ ಇವರ ಕಾರ್ಡ್ ಬಳಸಿ 4 ಬಾರಿ ಹಣ ಡ್ರಾ ಮಾಡಿರುವುದು ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಈ ಹಿನ್ನೆಲೆಯಲ್ಲಿ ಸಿಸಿ ಕ್ಯಾಮರಾ ಫುಟೇಜ್ ಮತ್ತು ಬ್ಯಾಂಕ್‌ನ ಸ್ಟೇಟ್‌ಮೆಂಟ್‌ನೊಂದಿಗೆ ಬಿಂದು ಅವರು ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ನಾಳೆ 'ತೂತು ಮಡಕೆ' ಚಿತ್ರ ಬಿಡುಗಡೆ



ಮೈಸೂರು, ಜು.6(ಎಂಟಿವೈ)– 'ಆಸೆಯೇ ದುಃಖಕ್ಕೆ ಮೂಲ' ಗಾದೆ ಮಾತಿಗೆ ಅನುಗುಣವಾದ ಕಥಾ ಹಂದರ ಹೊಂದಿರುವ 'ತೂತು ಮಡಕೆ' ಚಲನ ಚಿತ್ರ ಜು.8ರಂದು ಬಿಡುಗಡೆಯಾಗುತ್ತಿದೆ ಎಂದು ನಿರ್ದೇಶಕ ಚಂದ್ರಕೀರ್ತಿ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಸೆಯೆಂಬುದು ಒಂದು ತೂತು ಮಡಕೆಯಾಗಿದ್ದು, ಅದರ ಹಿಂದೆ ಹೋದವರು ಏನಾಗುತ್ತಾರೆ ಎಂಬ ಹಾಸ್ಯಮಿಶ್ರಿತ ಕುತೂಹಲಕಾರಿ ಕಥೆಯುಳ್ಳ ಚಿತ್ರ 'ತೂತು ಮಡಕೆ'ಯಾಗಿದೆ. ಈ ಚಿತ್ರದ ಚಿತ್ರೀಕರಣ 2019ರಲ್ಲಿ ಆರಂಭವಾಗಿತ್ತು. ಕೊರೊನಾ ಹಿನ್ನೆಲೆಯಲ್ಲಿ ಇದುವರೆಗೂ ಚಿತ್ರ ಬಿಡುಗಡೆಯಾಗಿರಲಿಲ್ಲ. ಇದು ವಿಶಿಷ್ಟವಾದ ಕಥೆ ಹಂದರ ಆಧರಿಸಿದ್ದು, ಬೆಂಗಳೂರಿನ ಸ್ಲಮ್‌ವೊಂದರಲ್ಲಿಯೂ ಚಿತ್ರೀಕರಿಸಲಾಗಿದೆ. ಕುಟುಂಬ ಸದಸ್ಯರೊಂದಿಗೆ ಒಟ್ಟಾಗಿ ಕುಳಿತು ನೋಡಬಹುದಾದ ಚಿತ್ರವಾಗಿದ್ದು, ಪ್ರೇಕ್ಷಕರು ಮೆಚ್ಚುವ ಭರವಸೆಯಿದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ನಾಯಕಿ ನಟಿ ಪಾವನಗೌಡ, ತಂಡದ ಗಿರೀಶ್, ಶಿವಣ್ಣ, ಮಧುಸೂದನ್ ಹಾಜರಿದ್ದರು.

ಡಲ್ಲಾಸ್‌ನ ಜಾನವಿ ಅವರಿಂದ ಮೈಸೂರಿನಲ್ಲಿ ಕೊಳಲು ವಾದನ



ಮೈಸೂರು, ಜು. 6– ಮೈಸೂರಿನ ಶ್ರೀರಾಂಪುರ 2ನೇ ಹಂತದಲ್ಲಿರುವ ಶಿವ ದೇವಸ್ಥಾನದಲ್ಲಿ ಸಂಗೀತ ಭಾರತಿ ಅಮೇರಿಕಾ ಇಂಕ್ ವತಿಯಿಂದ ಕಿರಿಯ ಮತ್ತು ಹಿರಿಯ ಕಲಾವಿದರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಡಲ್ಲಾಸ್‌ನ 7ನೇ ಗ್ರೇಡರ್ ಜಾನವಿ ಶಿವಕುಮಾರ್ ಅವರು ಕೊಳಲು ವಾದನ ನಡೆಸಿಕೊಟ್ಟರೆ, ಹಿರಿಯ ವಿದ್ವಾನ್ ವಿಜಯ್ ಸೂರ್ಯ ನಾದಸ್ವರ ನುಡಿಸಿದರು.

ಜಾನವಿ ಅವರು ವಿದ್ವಾನ್ ದಿವಂಗತ ಎ.ವಿ.ಪ್ರಕಾಶ್ ಮತ್ತು ವಿದ್ವಾನ್ ಕೃಷ್ಣ ಪ್ರಸಾದ್ ಅವರ ಶಿಷ್ಯೆ. ಕಾರ್ಯಕ್ರಮದಲ್ಲಿ ವಿದ್ವಾನ್ ವಿಕ್ರಂ ಮೃದಂಗದಲ್ಲಿ ಮತ್ತು ತುಮಕೂರು ಹೆಚ್.ಯಶಸ್ವಿ ವಯೋಲಿನ್ ಸಹಕಾರ ನೀಡಿದರು. ಖ್ಯಾತ ಕಲಾವಿದ ಗಂಜೀಫಾ ರಘುಪತಿ ಭಟ್ ಅವರು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಸ್ಮರಣಿಕೆಯನ್ನು ವಿತರಿಸಿದರು.

ಸಂಗೀತ ಭಾರತಿ ಅಮೇರಿಕ ಒಂದು ಲಾಭರಹಿತ ಸಂಘವಾಗಿದ್ದು, ಟೆಕ್ಸಾಸ್ ರಾಜ್ಯದಲ್ಲಿ ನೋಂದಣಿಯಾಗಿದೆ. ಅಮೇರಿಕಾದಲ್ಲಿ ಭಾರತೀಯ ಸಂಗೀತವನ್ನು ಪ್ರೋತ್ಸಾಹಿಸಲು, ಭಾರತೀಯ ಶಾಸ್ತ್ರೀಯ ಕಲೆ ಪ್ರಕಾರದಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುತ್ತಿದೆ. ಅಲ್ಲದೆ ಈ ಸಂಸ್ಥೆಯು ಇ–ಬುಕ್ಸ್ ಅನ್ನು ಪ್ರಕಟಿಸಿದ್ದು, ಅವರ ವೆಬ್‌ಸೈಟ್ http://sangeet-bharati.org/- ನಲ್ಲಿ ಉಚಿತವಾಗಿ ಡೌನ್‌ಲೋಡ್ ಮಾಡಬಹುದು ಎಂದು ಸಂಸ್ಥೆ ಕಾರ್ಯದರ್ಶಿ ಶಿವಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ


07.07.2022 ಗುರುವಾರ, ಮಳೆ ನಕ್ಷತ್ರ : ಪುನರ್ವಸು 06.07.2022 ರಿಂದ 19.07.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ
ತಿಥಿ: ಅಷ್ಟಮೀ, ನಕ್ಷತ್ರ : ಹಸ್ತ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಅರ್ಬನ್ ಹಾತ್ :** ಗುಜರಾತ್ ಕರಕುಶಲ ಮೇಳ–2022, ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ರಿಂಗ್ ರೋಡ್, ಬೆಳಗ್ಗೆ 10 ಗಂಟೆಯಿಂದ ರಾತ್ರಿ 9 ಗಂಟೆವರೆಗೆ.

■ **ಇಂಡಿಯನ್ ಆರ್ಟ್ ಅಂಡ್ ಕ್ರಾಫ್ಟ್–ಹೌಸ್ ಅಂಡ್ ಫೆಸ್ಟಿ ವರ್ಲ್ಡ್ :** ಹ್ಯಾಂಡ್‌ಲೂಮ್ ಮತ್ತು ಹ್ಯಾಂಡಿಕ್ರಾಫ್ಟ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಅಪೋಲೋ ಆಸ್ಪತ್ರೆ ಬಳಿಯಿರುವ ಮೈದಾನದಲ್ಲಿ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 10 ಗಂಟೆಯಿಂದ ರಾತ್ರಿ 9.30 ರವರೆಗೆ.

■ **ಧಾರ್ಮಿಕ ದತ್ತಿ ಇಲಾಖೆ :** ಶ್ರೀ ಗಿರಿಜಾ ಕಲ್ಯಾಣ ಮಹೋತ್ಸವ, ರಾತ್ರಿ ಔಪಾಸನೆ ಉಯ್ಯಾಲೋತ್ಸವ, ಸ್ಥಳ: ಅರಮನೆ ಆವರಣದಲ್ಲಿರುವ ಕೋಟೆ ತ್ರಿಣೇಶ್ವರ ದೇವಾಲಯ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ– ಬಾನುಲಿ ಸರಣೀ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40 ಭಾವಗೀತೆ, 6.50 ವನ ಮಹೋತ್ಸವ, ಪ್ರಾಯೋಜಕರು– ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳುವಳಿಯ ಪಯಣ–ಆಕಾಶವಾಣಿಯೊಂದಿಗೆ", 10.00 ಡಾ.ಮೈಸೂರು ಎಂ. ಮಂಜುನಾಥ್–ವಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.05ವನಿತಾ ವಿಹಾರ, 12.30 ದೇವರನಾಮ–ರಕ್ಷಣಾ ಆರ್, 12.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ್ ಮತ್ತು ಕೆ.ಬಿ. ಮೀನಾ, 1.20ಭಾವಗೀತೆ– ಅಜಯ್ ಜಿ. ಪ್ರಸಾದ್, 3.00 ರಾಗಲಹರಿ, ಪ್ರಸ್ತುತಿ– ಜಿ. ಪುಷ್ಪಲತಾ, 4.00 ಹಳ್ಳಿ ಹಾಡು– ಭಾಗವಹಿಸುವವರು ಮೈಸೂರು ಜಿ. ಗುರುರಾಜ್ ಮತ್ತು ತಂಡ, 4.30 ಸಂಗೀತ ಸಂಜೋಜಕಿ, ಗೀತ ರಚನೆ ಹಾಗೂ ಸುಗಮ ಸಂಗೀತ ಲೋಕದ ಜನಪ್ರಿಯ ಗಾಯಕಿ ಹೆಚ್.ಆರ್. ಲೀಲಾವತಿ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್‌ವಾಣಿ – ಒಳನಾಡು ಮೀನುಗಾರಿಕೆಗೆ ಇರುವ ಅವಕಾಶಗಳು ಕುರಿತು ಡಾ.ವೆಂಕಟಪ್ಪ ಅವರೊಂದಿಗೆ ಸಂದರ್ಶನ, 9.00 ಯುವವಾಣಿ–ಯುವಪ್ರತಿಭೆ –ಕೊಳಲು ಮತ್ತು ಶಾಸ್ತ್ರೀಯ ಸಂಗೀತ ಕಲಾವಿದ ನಿಹಾಲ್ ಪಿ. ಪತಂಗೆ ಅವರೊಂದಿಗೆ ಮಾತುಕತೆ, 10.00 ನಾಟಕ, 10.30 ಸವಿನೆನಪು

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ವಿದ್ವಾಂಸರಾದ ಪಂಡಿತ್ ಖೇಡಾ ವೇದವ್ಯಾಸ ಚಾರ್ಯರಿಂದ ಶ್ರೀ ವಾದಿರಾಜ ಗುರುಗಳ ವಿರಚಿತ 'ಶ್ರೀ ರುಕ್ಮಿಣೀಶ ವಿಜಯ' ಕುರಿತು ವಿಶೇಷ ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮೀಪುರಂ, ಸಂಜೆ 5 ರಿಂದ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಮೈಸೂರಲ್ಲಿ ವಿವೇಕ ಸ್ಮಾರಕಕ್ಕೆ ಅಡಿಗಲ್ಲು

ಒಂದನೇ ಪುಟದಿಂದ

ವಿಶ್ವಾದ್ಯಂತ ಪಸರಿಸಲಿ, ಯುವಕರನ್ನು ಸನ್ಮಾರ್ಗದಲ್ಲಿ ನಡೆಸಲಿ ಎಂದು ಶುಭ ಕೋರಿದರು. ಮೈಸೂರು ಒಡೆಯರೊಂದಿಗೆ ಅನನ್ಯ ಸಂಬಂಧ ಹೊಂದಿದ್ದ ಸ್ವಾಮಿ ವಿವೇಕಾ ನಂದರು 1893 ರಲ್ಲಿ ವಿಶ್ವ ಧರ್ಮಗಳ ಸಂಸತ್ತಿ ನಲ್ಲಿ ಭಾರತ ಮತ್ತು

ಹಿಂದೂ ಧರ್ಮವನ್ನು ಪ್ರತಿನಿಧಿಸಲು ಚಿಕಾಗೋಗೆ ಭೇಟಿ ನೀಡಲು ನಿರ್ಧರಿಸಿದ್ದು ನಮ್ಮ ಮೈಸೂರಿನಲ್ಲಿ. 10ನೇ ಚಾಮರಾಜ ಒಡೆಯರ್ ಅವರು ಚಿಕಾಗೋ ಪ್ರಯಾಣವನ್ನು ಪ್ರಾಯೋಜಿಸಲು ಮುಂದಾದರು. ಸ್ವಾಮಿ ವಿವೇಕಾನಂದರು ನಯವಾಗಿ ನಿರಾಕರಿಸಿದರು. ಅವರು ತಮ್ಮ ತಾಯಿಯ ಆಜ್ಞೆಯನ್ನು ಅನುಸರಿಸಿ ಪ್ರಯಾಣವನ್ನು ನಿರ್ಧರಿಸಿದರು. ಮಹಾರಾಜರಿಂದ ಹಣ ಸ್ವೀಕರಿಸಲು ಅವರು ತಮ್ಮ ತಾಯಿಯ ಅನುಮೋದನೆಯನ್ನು ಪಡೆಯಬೇಕಾಗಿದೆ ಎಂದು ಹೇಳಿ, ನೆರವನ್ನು ನಯವಾಗಿ ನಿರಾಕರಿಸಿದರು. ಆದರೆ ಕೆಲವು ದಿನಗಳ ಬಳಿಕ ಸ್ವಾಮಿ ವಿವೇಕಾನಂದರು ಮೈಸೂರಿಗೆ ಹಿಂತಿರುಗಿ, ತಮ್ಮ ಚಿಕಾಗೋ ಪ್ರಯಾಣಕ್ಕಾಗಿ ಮಹಾರಾಜರಿಂದ ಹಣವನ್ನು ಸ್ವೀಕರಿಸಿದರು ಎಂದು ಸುತ್ತೂರು ಸ್ವಾಮೀಜಿ ವಿವರಿಸಿದರು.

ವಿವೇಕ ಸ್ಮಾರಕ ನಿರ್ಮಾಣಕ್ಕೆ ಕೇಂದ್ರ, ರಾಜ್ಯ ಸರ್ಕಾರಗಳ ಸಹಕಾರ: ಶಂಕುಸ್ಥಾಪನೆ ನೆರವೇರಿಸಿದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಮಾತನಾಡಿ, ವಿವೇಕ ಸ್ಮಾರಕ ನಿರ್ಮಾಣಕ್ಕೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಎಲ್ಲ ಸಹಕಾರ ನೀಡಲಿವೆ. ಸ್ಮಾರಕ ನಿರ್ಮಾಣ ಯಾವುದೇ ಅಡೆತಡೆಗಳಾಗದಂತೆ ನಮಗೆ ಕೇಂದ್ರ, ರಾಜ್ಯ ಸರ್ಕಾರಗಳಿಂದ ಆದೇಶ ಬಂದಿದೆ. ಏಕೆಂದರೆ ಇದು ರಾಷ್ಟ್ರ ನಿರ್ಮಾಣದ ಮಹತ್ಕಾರ್ಯವಾಗಿದೆ. ಯುವಕರಿಗೆ ಅಪಾರ ಪ್ರಯೋಜನವೂ ಆಗಲಿದೆ. ಇಲ್ಲಿ ರಾಜಕೀಯಕ್ಕೆ ಸ್ಥಾನವಿಲ್ಲ ಎಂದು ಹೇಳಿದರು.

ದಶಕದ ಹೋರಾಟ ಸ್ಮರಿಸಿದ ಸ್ವಾಮಿ ಮುಕ್ತದಾನಂದಜೀ: ಮೈಸೂರು ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜಿ ಮಾತನಾಡಿ, ಸ್ಮಾರಕ ನಿರ್ಮಾಣಕ್ಕೆ ನಡೆದ 10 ವರ್ಷದ ಹೋರಾಟವನ್ನು ಸ್ಮರಿಸಿದರು. ಮೈಸೂರಿಗರ 10 ವರ್ಷಗಳ ಸಂಕಲ್ಪ ಇಂದು ನಿಜವಾಗಿದೆ. ನಾವು ಅನೇಕ ಅಡೆತಡೆಗಳನ್ನು ಎದುರಿಸಿದ್ದೇವೆ. ಆದರೆ ನಾವು ತಾಳ್ಮೆಯಿಂದಿದ್ದೇವೆ. ಸತ್ಯ ಮತ್ತು ಉದಾತ್ತ ಕಾರಣವು ಮೇಲುಗೈ ಸಾಧಿಸುತ್ತದೆ ಎಂಬುದು ನಮ್ಮ ನಂಬಿಕೆ. ಹಾಗಾಗಿ ಸಾವಿರಾರು ಜನರು ನಮ್ಮೊಂದಿಗೆ ಕೈಜೋಡಿಸಿದ್ದಾರೆ. ದಶಕಗಳಿಂದ ನಿರ್ಲಕ್ಷಿಸಲ್ಪಟ್ಟ ಸ್ಥಳವು ಸ್ಮರಣೀಯ ಸಾಂಸ್ಕೃತಿಕ ಕೇಂದ್ರವಾಗಿ ರೂಪುಗೊಳ್ಳಲಿದೆ ಎಂದು ಹೇಳಿದರು. ಎಲ್ಲರನ್ನು ಒಳಗೊಂಡ ಕೇಂದ್ರವಾಗಿರುವ ಇದು ಭಾರತೀಯ ಯುವಕರಿಗೆ ಸ್ವಾಮಿ ವಿವೇಕಾನಂದರ ಸಂಕಲ್ಪದಂತೆ, ಅವರ ಉದ್ದೇಶಗಳನ್ನು ಸಾಧಿಸುತ್ತದೆ ಎಂದು ತಿಳಿಸಿದರು.

ವಿವೇಕ ಸ್ಮಾರಕ– ಮತ್ತೊಂದು ಇತಿಹಾಸ ನಿರ್ಮಾಣ: ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್ ಮಾತನಾಡಿ, ವಿವೇಕ ಸ್ಮಾರಕ ನಿರ್ಮಾಣದಿಂದ ಇತಿಹಾಸದ ನೆನಪು ಮಾಡುವ ಜೊತೆಗೆ ಮೈಸೂರಿನಲ್ಲಿ ಮತ್ತೊಂದು ಇತಿಹಾಸ ನಿರ್ಮಾಣವಾಗಲಿದೆ. ಇದು ಕಲಿಕೆಯ ಸ್ಥಳವಾಗಲಿದೆ. ಸಮೀಪದಲ್ಲಿಯೇ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಭವನ ಇದೆ. ಮೈಸೂರು ಅರಮನೆಗೆ ಭೇಟಿ ನೀಡುವ ಪ್ರವಾಸಿಗರು ಇಲ್ಲಿಗೂ ಭೇಟಿ ನೀಡುವ ಪ್ರಮುಖ ಸ್ಥಳವಾಗಲಿದೆ ಎಂದು ಅಭಿಪ್ರಾಯಪಟ್ಟರು.

ಇಲ್ಲಿಯ ಬಡ ಮಕ್ಕಳಿಗೆ ಜ್ಞಾನ ಸಿಗುವಂತಾಗಲಿ: ಸ್ವಾಮೀಜಿಗಳಿಗೆ ಜಿಟಿಡಿ ಸಲಹೆ: ಚಾಮುಂಡೇಶ್ವರಿ ಶಾಸಕ ಜಿ.ಟಿ.ದೇವೇಗೌಡರು ಮಾತನಾಡಿ, ವಿವಾದದ ಸುಳಿಯಲ್ಲಿ ಸಿಲುಕಿದ್ದ ಈ ಜಾಗ ಹೋರಾಟದ ಕೇಂದ್ರ ಬಿಂದುವೂ ಆಗಿತ್ತು. ಕೆಲವೇ ಮತಗಳಿಗಾಗಿ ರಾಜಕೀಯ ಮಾಡಿ ಸ್ಮಾರಕ ನಿರ್ಮಾಣಕ್ಕೆ ಅಡ್ಡಿಪಡಿಸಲಾಗಿತ್ತು. ಕೆಲವರು ಪ್ರಚಾರಕ್ಕಾಗಿ ಸಮುದಾಯಗಳನ್ನು ವಿಭಜಿಸಲು ಮುಂದಾದರು. ಇಂದು ಎಲ್ಲ ಅಡೆತಡೆಗಳು ನಿವಾರಣೆಯಾಗಿದ್ದು, ಮೈಸೂರಿನಲ್ಲಿ ಸ್ಮಾರಕ ನಿರ್ಮಾಣವಾಗಲಿದೆ. ಒಂದು ವಿಗ್ರಹ ರೂಪುಗೊಳ್ಳಬೇಕಾದರೆ ಅದನ್ನು ಕೆತ್ತಿ, ತೀಡಿ ಸುಂದರವಾಗಿ ರೂಪುಗೊಳಿಸಲಾಗುತ್ತದೆ. ಅದೇ ರೀತ ಇದೂ ಕೂಡ ಹೊಳಪು ಪಡೆಯಲಿದೆ. ವಿವೇಕಾನಂದರು 'ಏಳಿ ಎದ್ದೇಳಿ.. ಗುರಿ ಮುಟ್ಟುವತನಕ ನಿಲ್ಲದಿರಿ... ಎಂದಿದ್ದರು. ಆ ಕೆಲಸ ಈಗ ಮೈಸೂರಿನಲ್ಲಿ ಆಗಿದೆ ಎಂದರು.

ಈ ಜಾಗದಲ್ಲಿದ್ದ ಶಾಲೆಯ ಎಲ್ಲಾ ಬಡ ಮಕ್ಕಳನ್ನು ಗುರುತಿಸಿ, ಪಟ್ಟಿ ಮಾಡಿ, ಈ ಕೇಂದ್ರದಿಂದ ಅವರ ಅಭ್ಯುದಯ ಆಗಬೇಕು. ಅಷ್ಟೂ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದನ್ನು ಸವಾಲಾಗಿ ಸ್ವೀಕರಿಸಬೇಕು. ಈ ಕೇಂದ್ರದಿಂದ ಎಷ್ಟು ಹೂವುಗಳು ಅರಳಿವೆ ಎಂಬುದನ್ನು ತೋರಿಸಬೇಕು. ಹೋರಾಟ ಮಾಡಿದವರಿಗೂ ಒಳ್ಳೆಯ ಜ್ಞಾನೋದಯ ಆಗಬೇಕು ಎಂದು ಆಶ್ರಮದ ಸ್ವಾಮೀಜಿಯವರ ಗಮನ ಸೆಳೆದರು.

ಅಧ್ಯಕ್ಷತೆ ವಹಿಸಿದ್ದ ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಸ್ಮಾರಕದ ಸುತ್ತಮುತ್ತ ಅನೇಕ ಶಿಕ್ಷಣ ಸಂಸ್ಥೆಗಳಿದ್ದು, ಸುಮಾರು 25 ಸಾವಿರಕ್ಕೂ ಹೆಚ್ಚು ಹೆಣ್ಣು ಮಕ್ಕಳು ಓದುತ್ತಿದ್ದಾರೆ. ವಿವೇಕ ಸ್ಮಾರಕದಲ್ಲಿ ನಿರ್ಮಾಣವಾಗುವ ಗ್ರಂಥಾಲಯದಿಂದ ಅವರ ಜ್ಞಾನ ವೃದ್ಧಿಗೆ ಅನುಕೂಲವಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಸಂಸದ ಪ್ರತಾಪ್‌ಸಿಂಹ, ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಮಾಜಿ ಎಂಎಲ್‌ಸಿ ಡಿ.ಮಾದೇಗೌಡ, ವಿಶ್ರಾಂತ ಕುಲಪತಿ ಡಾ.ಚಿದಾನಂದಗೌಡ, ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತಕುಮಾರ್, 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕ ಕೆ.ಬಿ.ಗಣಪತಿ, ಮಾಜಿ ಶಾಸಕ ವಾಸು, ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಗದಗ ಮಾಜಿ ಶಾಸಕ ಬಿ.ಆರ್.ಪಾಟೀಲ, ಕಪ್ಪತಗುಡ್ಡ ಶಿವಕುಮಾರ ಮಹಾಸ್ವಾಮೀಜಿ, ತುಮಕೂರು ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ವೀರೇಶಾನಂದ ಸರಸ್ವತಿ, ಮೈಸೂರು ರಾಮಕೃಷ್ಣ ಆಶ್ರಮದ ಮಾಜಿ ಅಧ್ಯಕ್ಷ ಸ್ವಾಮಿ ಆತ್ಮವಿದಾನಂದಜೀ, ಸ್ವಾಮಿ ಯುಕ್ತೇಶಾನಂದಜೀ, ಮುಡಾ ಅಧ್ಯಕ್ಷ ಎಚ್.ವಿ.ರಾಜೀವ್, ಮೈಲ್ಯಾಕ್ ಅಧ್ಯಕ್ಷ ಎನ್.ವಿ.ಫಣೀಶ್, ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್ಸ್ ಅಧ್ಯಕ್ಷ ಎಂ.ಅಪ್ಪಣ್ಣ, ಕಾಡಾ ಅಧ್ಯಕ್ಷ ಎನ್.ಶಿವಲಿಂಗಯ್ಯ, ನಗರಪಾಲಿಕೆ ಸದಸ್ಯೆ ಪ್ರಮೀಳಾ ಭರತ್, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಯೋಜನೆಯ ಮೂಲ ಮಾದರಿ ರೂಪಿಸಿದ ವಿನ್ಯಾಸಕಾರ ರವೀಂದ್ರ ಇನ್ನಿತರರು ಉಪಸ್ಥಿತರಿದ್ದರು.



ವಿವೇಕ ಸ್ಮಾರಕ ಶಂಕುಸ್ಥಾಪನೆ ಸಮಾರಂಭದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ಮಾತನಾಡುವಾಗ ಹಿರಿಯ ಸಾಹಿತಿ ಡಾ.ಎಸ್.ಎಲ್.ಭೈರಪ್ಪ, ಶಾಸಕ ಜಿ.ಟಿ.ದೇವೇಗೌಡ, ಕಪ್ಪತಗುಡ್ಡ ಶಿವಕುಮಾರ ಮಹಾಸ್ವಾಮೀಜಿ, ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ, ಸಚಿವ ಎಸ್.ಟಿ.ಸೋಮಶೇಖರ್, ಶಾಸಕರಾದ ಎಲ್.ನಾಗೇಂದ್ರ, ಎಸ್.ಎ.ರಾಮದಾಸ್, ಡಾ.ಯತೀಂದ್ರ ಸಿದ್ದರಾಮಯ್ಯ, ಮೈವಿವಿ ಕುಲಪತಿ ಪ್ರೊ.ಹೇಮಂತ್‌ಕುಮಾರ್, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಮೈಲ್ಯಾಕ್ ಅಧ್ಯಕ್ಷ ಫಣೀಶ್ ಇನ್ನಿತರರಿದ್ದರು.





ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿ ನಡೆದ ವಿವೇಕ ಸ್ಮಾರಕ ಶಂಕುಸ್ಥಾಪನೆ ಸಮಾರಂಭದಲ್ಲಿ ಭಾಗವಹಿಸಿದ್ದ ಮಠಾಧೀಶರು, ಜನಪ್ರತಿನಿಧಿಗಳು ಹಾಗೂ ಗಣ್ಯರನ್ನು ಚಿತ್ರದಲ್ಲಿ ಕಾಣಬಹುದು.

ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರ-ವಿವೇಕ ಸ್ಮಾರಕದ ಪ್ರಮುಖ ಅಂಶಗಳು



ವಿವೇಕ ಸ್ಮಾರಕದ ಮಾದರಿ ಚಿತ್ರ.

ಮೈಸೂರು: ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿ 36.23 ಕೋಟಿ ಅಂದಾಜು ವೆಚ್ಚದಲ್ಲಿ ನಿರ್ಮಾಣವಾಗಲಿರುವ ಎರಡು ನೆಲ ಮಾಳಿಗೆ ಹಾಗೂ ಮೂರು ಮಹಡಿಗಳನ್ನು ಒಳಗೊಂಡಿರುವ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರ–ವಿವೇಕ ಸ್ಮಾರಕ ಕಟ್ಟಡವು ಯುವಕರಿಗಾಗಿ ಹಲವು ಸೌಲಭ್ಯಗಳನ್ನು ಒದಗಿಸಲಿದೆ.

ಸ್ವಾಮಿ ವಿವೇಕಾನಂದರ ಜೀವನ ಮತ್ತು ಅವರ ಉಪದೇಶಗಳನ್ನು ತಿಳಿಸುವ ಅಲ್ಪಾವಧಿ ತರಗತಿಗಳು, ವ್ಯಕ್ತಿತ್ವ ವಿಕಸನ ಶಿಬಿರ, ಕನ್ನಡ ಮತ್ತು ಆಂಗ್ಲ ಭಾಷೆಯ ಕೌಶಲ್ಯ ಶಿಬಿರಗಳು, ಗ್ರಾಮೀಣ ಯುವಕರಿಗೆ ಗ್ರಾಮೀಣ ಅಭಿವೃದ್ಧಿ ಚಟುವಟಿಕೆಗಳ ತರಬೇತಿ ಶಿಬಿರಗಳು, ಭಾರತೀಯ ಆಧ್ಯಾತ್ಮಿಕ ಸಂಸ್ಕೃತಿಯ ಬಗೆಗಿನ ತಿಳುವಳಿಕೆ, ಮೌಲ್ಯ ಶಿಕ್ಷಣ, ಯೋಗಾಭ್ಯಾಸ ಮತ್ತು ಮನಸ್ಸಿನ ನಿರ್ವಹಣೆ, ಕಲೆ ಮತ್ತು ಸಂಗೀತದ ತರಬೇತಿ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಓದಲು ಕೊಠಡಿ ಹಾಗೂ ಸುಸಜ್ಜಿತ ಗ್ರಂಥಾಲಯವನ್ನು ವಿದ್ಯಾರ್ಥಿಗಳಿಗೆ ಒದಗಿಸಲಾಗುವುದು. ಸ್ವಾಮಿ ವಿವೇಕಾನಂದರ ಮ್ಯೂಸಿಯಂ, ಶ್ರೀರಾಮಕೃಷ್ಣರ ಹಾಗೂ ಸ್ವಾಮಿ ವಿವೇಕಾನಂದರ ಬಗೆಗಿನ ಪುಸ್ತಕಗಳ ಪ್ರದರ್ಶನ ಹಾಗೂ ಮಾರಾಟ ಇನ್ನಿತರೆ ಸೌಲಭ್ಯಗಳು ಇಲ್ಲಿ ದೊರೆಯುವಂತೆ ಯೋಜನೆ ರೂಪಿಸಲಾಗಿದೆ.

1892ರಲ್ಲಿ ಸ್ವಾಮಿ ವಿವೇಕಾನಂದರು ಮೈಸೂರಿಗೆ ಭೇಟಿ ನೀಡಿದ ಸಮಯದಲ್ಲಿ ನೆಲೆಸಿದ್ದ ಆವರಣದಲ್ಲಿ ವಿವೇಕ ಸ್ಮಾರಕ ನಿರ್ಮಿಸಲಾಗುತ್ತಿದ್ದು, ಯುವ ಜನತೆಯ ಸೇವೆಗಾಗಿ ಕಟ್ಟಡವನ್ನು ಮೀಸಲಿರಿಸಲಾಗಿದೆ. ಕಟ್ಟಡವು ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರ, ವಿವೇಕ ಸ್ಮಾರಕ, ಆಂಫೀಥಿಯೇಟರ್(ತೆರೆದ ಸಭಾಂಗಣ)ಗಳನ್ನು ಒಳಗೊಂಡಿರುತ್ತದೆ. ಸ್ಥಳೀಯ ನಗರಪಾಲಿಕೆ, ಅಗ್ನಿಶಾಮಕ ಹಾಗೂ ಪುರಾತತ್ವ ಇಲಾಖೆಗಳ ಕಾಯ್ದೆ ಮತ್ತು ನಿಯಮಗಳ ಅನ್ವಯ ನಿರ್ಮಿಸಲಾಗುತ್ತಿದೆ ಎಂದು ರಾಮಕೃಷ್ಣ ಆಶ್ರಮದ ಪ್ರಕಟಣೆ ತಿಳಿಸಿದೆ.

ಪ್ರಗತಿ ನೋಡಲು ಇಷ್ಟವಿಲ್ಲದ ಜನರು ಒಳ್ಳೆಯ ಕೆಲಸಕ್ಕೆ ಅಡ್ಡಿಪಡಿಸುತ್ತಲೇ ಇರುತ್ತಾರೆ

ತಾಳ್ಮೆಯಿಂದ ಅಂತಹ ಜನರ ನಿರ್ಲಕ್ಷಿಸುವುದು ಸೂಕ್ತ: ನಾಡಿನ ಹಿರಿಯ ಸಾಹಿತಿ ಡಾ.ಎಸ್.ಎಲ್.ಭೈರಪ್ಪ ಅಭಿಮತ




ಮೈಸೂರು,ಜು.6 (ಆರ್‌ಕೆಬಿ)– ಭಾರತದಲ್ಲಿ ಒಳ್ಳೆಯ ಕೆಲಸಗಳಿಗೆ ಯಾವಾಗಲೂ ಅಡೆತಡೆಗಳು ಇದ್ದೇ ಇರುತ್ತವೆ. ಎಂದು ಖ್ಯಾತ ಲೇಖಕ ಮತ್ತು ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತ ಡಾ. ಎಸ್.ಎಲ್.ಭೈರಪ್ಪ ವಿಷಾದಿಸಿದರು.

ನಗರದಲ್ಲಿ ಸ್ವಾಮಿ ವಿವೇಕಾನಂದ ಸ್ಮಾರಕ ಸಾಂಸ್ಕೃತಿಕ ಯುವ ಕೇಂದ್ರ–ವಿವೇಕ ಸ್ಮಾರಕಕ್ಕೆ ಶಂಕುಸ್ಥಾಪನಾ ಸಮಾರಂಭದಲ್ಲಿ ಮಾತನಾಡಿದ ಅವರು, ಯಾರಾದರೂ ಸಮಾಜಕ್ಕೆ ಒಳ್ಳೆಯ ಕೆಲಸ ಮಾಡುವಾಗ ಸದಾ ಅಡ್ಡಿಪಡಿಸುವವರು ಇರುತ್ತಾರೆ. ಅದು ವಿವೇಕ ಸ್ಮಾರಕವಾಗಲೀ ಅಥವಾ ರಂಗಾಯಣವಾಗಲೀ ಅದೇ ಜನರು ಪ್ರತಿಭಟನೆಯಲ್ಲಿ ಇರುತ್ತಾರೆ. ಅವರು ಪ್ರಗತಿಯನ್ನು ನೋಡಲು ಇಷ್ಟಪಡುವುದಿಲ್ಲ. ಒಳ್ಳೆಯ ಕೆಲಸಕ್ಕೆ ಅಡ್ಡಿಪಡಿಸುವ ಮೂಲಕ, ಈ ಜನರು ನಕಾರಾತ್ಮಕತೆಯನ್ನು ಹರಡುತ್ತಾರೆ. ಈ ಮನೋಭಾವ ಹೋಗಬೇಕು ಎಂದರು.

ಈ ಜನರು ಎಲ್ಲೆಡೆ ಇದ್ದಾರೆ. ಅವರು ಪ್ರತಿ ಕೆಲಸಕ್ಕೂ ಅಡೆತಡೆಗಳನ್ನು ಹಾಕುತ್ತಾರೆ. ನಾವು ತಾಳ್ಮೆಯಿಂದಿದ್ದು, ಇಂತಹ ಜನರನ್ನು ನಿರ್ಲಕ್ಷಿಸಿ ಏಕಮನಸ್ಸಿನ ಸಮರ್ಪಣೆ ಮತ್ತು ಪರಿಶ್ರಮದಿಂದ ಮುಂದುವರಿಯಬೇಕು. ಅಂತಿಮವಾಗಿ, ಯಾರು ಸರಿ ಎಂಬುದನ್ನು ಜನರೇ ಅರಿತುಕೊಳ್ಳುತ್ತಾರೆ. ಎಲ್ಲಾ ನಕಾರಾತ್ಮಕತೆಗಳಿಗೆ ಯಾವುದೇ ಮೌಲ್ಯವಿಲ್ಲ. ಇದು ಬಲವಾದ ಸಂದೇಶವಾಗಿದೆ ಎಂದರು.

ರಾಮಕೃಷ್ಣ ಆಶ್ರಮದಲ್ಲಿ ಕನ್ನಡ ಪುಸ್ತಕಗಳು ಮಾರಾಟವಾಗುತ್ತಿಲ್ಲ ಎಂಬ ದೂರುಗಳಿರುವ ಬಗ್ಗೆ ಪ್ರಸ್ತಾಪಿಸಿದ ಅವರು, ರಾಮಕೃಷ್ಣ ಆಶ್ರಮವು ಕನ್ನಡದಲ್ಲಿ 600ಕ್ಕೂ ಹೆಚ್ಚು ಪುಸ್ತಕಗಳನ್ನು ಹೊರತಂದಿದೆ. ಅವುಗಳು ಅತೀ ಹೆಚ್ಚು ಮಾರಾಟವಾದ ಪುಸ್ತಕಗಳಾಗಿವೆ. ಉದಾಹರಣೆಗೆ ಸ್ವಾಮಿ ಜಗದಾತ್ಮಾನಂದಜೀ ಬರೆದ 'ಬದುಕಲು ಕಲಿಯಿರಿ' ಪುಸ್ತಕವನ್ನು ತೆಗೆದುಕೊಳ್ಳಿ. ಇದರ ಲಕ್ಷಾಂತರ ಪ್ರತಿಗಳು ಮಾರಾಟವಾಗಿವೆ. ವಿವಿಧ ಭಾಷೆಗಳಿಗೂ ಅನುವಾದಗೊಂಡಿದೆ ಎಂದರು.



ಬುಧವಾರ ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿ ಶಂಕುಸ್ಥಾಪನೆ ನೆರವೇರಿದ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರ–ವಿವೇಕ ಸ್ಮಾರಕದ ಪ್ರವೇಶ ದ್ವಾರ.



ಮೈಸೂರಲ್ಲಿ ಧಾರಾಕಾರ ಮಳೆ

ಮೈಸೂರು, ಜು.6(ಎಸ್‌ಪಿಎನ್)– ಮೈಸೂರು ವಿವಿಧೆಡೆ ಧಾರಾಕಾರ ಮಳೆ ಸುರಿದು ಜನಜೀವನ ಅಸ್ತವ್ಯಸ್ತಗೊಂಡಿದ್ದು, ವಾಹನ ಸವಾರರಿಗೆ ತೀವ್ರ ತೊಂದರೆಯಾಗಿದೆ.

ಸಯ್ಯಾಜಿರಾವ್ ರಸ್ತೆಯ ತಿಲಕನಗರದ ಸಿಗ್ನಲ್ ಬಳಿ ಯುಜಿಡಿ ನೀರು ರಸ್ತೆಯಲ್ಲಿ ಮಂಡಿಯುದ್ದ ನಿಂತು ವಾಹನ ಸವಾರರಿಗೆ ತೀವ್ರ ತೊಂದರೆ ಉಂಟು ಮಾಡಿತು. ಆರ್‌ಎಂಪಿ ಬಳಿ ಖಾಸಗಿ ಬಸ್ ನಿಲ್ದಾಣ ಬಳಿ(ದಿವಾನ್ ಶೇಷಾದ್ರಿ ಅಯ್ಯರ್ ರಸ್ತೆ) ರಸ್ತೆಯಲ್ಲಿ ನೀರು ನಿಂತು ಮಿನಿ ಕೆರೆ ನಿರ್ಮಾಣವಾಗಿತ್ತು. ಕೆ.ಆರ್. ವೃತ್ತ, ಚತುರಂಗ ರಸ್ತೆ, ಎಸ್‌ಜೆಸಿಇ ಮುಂಭಾಗದ ರಸ್ತೆಯಲ್ಲಿ ನೀರು ನಿಂತು ಈ ಮಾರ್ಗದ ವಾಹನ ಸವಾರರಿಗೆ ತೀವ್ರ ತೊಂದರೆ ಉಂಟಾಯಿತು. ಮಧ್ಯಾಹ್ನ 2.30ರಿಂದಲೇ ಮಳೆ ಸುರಿದರೆ, ಅಲ್ಲಲ್ಲಿ ಚರಂಡಿ ನೀರು ತುಂಬಿ ರಸ್ತೆಗಳು ಮಿನಿ ಹೊಂಡಗಳಾಗಿದ್ದವು. ಎಡೆಬಿಡದೇ ಸುರಿದ ಮಳೆಗೆ ಬೀದಿಬದಿ ವ್ಯಾಪಾರಿಗಳು ವ್ಯಾಪಾರವಿಲ್ಲದೆ ತೀವ್ರ ನಿರಾಸೆಗೊಂಡಿದ್ದರು. ಸದಾ ಗಿಜಿಗುಡುತ್ತಿದ್ದ ಕೆ.ಆರ್.ವೃತ್ತ, ಅಕ್ಕ–ಪಕ್ಕದ ರಸ್ತೆಗಳಲ್ಲೂ ಗ್ರಾಹಕರಿಲ್ಲದೆ, ಮಳಿಗೆಗಳು ಬಿಕೋ ಎನ್ನುತ್ತಿದ್ದವು. ಕುವೆಂಪುನಗರ, ಶ್ರೀರಾಂಪುರ, ವಿದ್ಯಾರಣ್ಯಪುರಂ, ಅಗ್ರಹಾರ ಎಡೆಬಿಡದೇ ಸುರಿದ ಮಳೆಯಿಂದಾಗಿ ವಾಹನ ಸವಾರರ ಓಡಾಟಕ್ಕೆ ತೊಂದರೆಯಾಗಿದಲ್ಲದೆ, ಈ ಭಾಗದ ರಸ್ತೆಗಳಲ್ಲಿ ಗುಂಡಿ ಬಿದ್ದು, ಅಲ್ಲಲ್ಲಿ ಮಿನಿ ಹೊಂಡಗಳೇ ನಿರ್ಮಾಣವಾಗಿದ್ದವು.

ದಲಿತರ ಮೇಲಿನ ದೌರ್ಜನ್ಯ ಖಂಡಿಸಿ ಮೈಸೂರಲ್ಲಿ ಪ್ರತಿಭಟನೆ



ಮೈಸೂರು,ಜು.6(ಪಿಎಂ)–ಇತ್ತೀಚೆಗೆ ಜಿಲ್ಲೆಯ ಪಿರಿಯಾಪಟ್ಟಣ ತಾಲೂಕು ಕಗ್ಗುಂಡಿ ಗ್ರಾಮದಲ್ಲಿ ನಡೆದ ಮರ್ಯಾದಾಗೇಡು ಹತ್ಯೆ ಹಾಗೂ ದಲಿತರ ಮೇಲಿನ ದೌರ್ಜನ್ಯ ಖಂಡಿಸಿ ದಲಿತ ಹಕ್ಕುಗಳ ಸಮಿತಿ ವತಿಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು ಡಿಸಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ರಾಜ್ಯದಲ್ಲಿ ಇತ್ತೀಚೆಗೆ ದಲಿತರ ಮೇಲಿನ ದೌರ್ಜನ್ಯ ಹೆಚ್ಚಾಗುತ್ತಿದೆ. ಆದರೆ ದೌರ್ಜನ್ಯ ನಡೆಸಿದವರ ವಿರುದ್ಧ ಯಾವುದೇ ಕಾನೂನು ಕ್ರಮಗಳು ಸಮರ್ಪಕವಾಗಿ ಕೈಗೊಳ್ಳುತ್ತಿಲ್ಲ. ದೌರ್ಜನ್ಯಕ್ಕೆ ಒಳಗಾದವರಿಗೆ ಪರಿಹಾರವೂ ಸರಿಯಾಗಿ ದೊರೆಯುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹೂವಿನಹಡಗಲಿ ತಾಲೂಕು ದಾಸನಹಳ್ಳಿ ಪಂಚಾಯಿತಿಯಲ್ಲಿ ಕೆಲಸ ಮಾಡುತ್ತಿದ್ದ ದೇವದಾಸಿ ಪುತ್ರನಿಗೆ ಜಾತಿ ಮತ್ತು ಮಾತೃನಿಂದನೆ ಮಾಡಿದ ಘಟನೆ ನಡೆದಿದೆ. ಕೊಪ್ಪಳ ಜಿಲ್ಲೆ ಕಾರಟಗಿಯಲ್ಲಿ ಪರಿಶಿಷ್ಟ ಜಾತಿ ಸಮುದಾಯದ ಮೇಲೆ ಮಾರಣಾಂತಿಕ ಹಲ್ಲೆ ನಡೆಸಲಾಗಿದೆ. ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕು ಪೆದ್ದ ಗ್ರಾಮದಲ್ಲಿ ಇಬ್ಬರು ದಲಿತ ಯುವಕರ ಹತ್ಯೆ ಮಾಡಲಾಗಿದೆ. ಆದರೆ ಹಂತಕರ ಬಂಧನವೂ ಆಗಿಲ್ಲ. ಯುವಕರ ಕುಟುಂಬಕ್ಕೆ ಪರಿಹಾರ ಸಹ ನೀಡಿಲ್ಲ ಎಂದು ಕಿಡಿಕಾರಿದರು.

ಇತ್ತೀಚೆಗೆ ಪಿರಿಯಾಪಟ್ಟಣ ತಾಲೂಕು ಕಗ್ಗುಂಡಿ ಗ್ರಾಮದಲ್ಲಿ ಮರ್ಯಾದಾಗೇಡು ಹತ್ಯೆ ನಡೆದಿದೆ. ದಲಿತ ಯುವಕನ್ನು ಪ್ರೀತಿಸಿದ ಕಾರಣಕ್ಕೆ ತಂದೆಯೇ ಮಗಳ ಹತ್ಯೆ ಮಾಡಿದ್ದಾನೆ. ಪ್ರಕರಣ ಸಂಬಂಧ ಹತ್ಯೆಯಾದ ಯುವತಿಯ ತಂದೆ ಮತ್ತು ತಾಯಿಯನ್ನು ಬಂಧಿಸಲಾಗಿದೆ. ಅಂತೆಯೇ ಕೊಲೆಗೆ ಕುಮ್ಮಕ್ಕು ನೀಡಿದವರನ್ನೂ ಬಂಧಿಸಬೇಕು ಎಂದು ಆಗ್ರಹಿಸಿದರು. ಸಮಿತಿಯ ಜಿಲ್ಲಾ ಸಂಚಾಲಕ ವೆಂಕಟೇಶ ಬೆಳ್ತೂರು, ರಾಜ್ಯ ಸಹ ಸಂಚಾಲಕರಾದ ರಾಜಣ್ಣ, ಶಿವಣ್ಣ, ಜಯಲಕ್ಷ್ಮೀ, ಸಮಿತಿ ಮುಖಂಡರಾದ ರಾಜೆಂದ್ರ, ಹೆಚ್.ಎಂ.ಬಸವಯ್ಯ, ಶಿವರಾಮ, ಶಕುಂತಲಾ, ಮುಖಂಡರಾದ ಕೆ.ಬಸವರಾಜ್, ಲ.ಜಗನ್ನಾಥ್, ಜಗದೀಶ್ ಸೂರ್ಯ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಇಂದು ಪಂಜಾಬ್ ಸಿಎಂ ಭಗವಂತ್ ಮಾನ್ 2ನೇ ಮದುವೆ

ಚಂಡೀಗಢ: ಆಮ್ ಆದ್ಮಿ ಪಕ್ಷದ ಪಂಜಾಬ್ ಸಿಎಂ ಭಗವಂತ್ ಮಾನ್ ನಾಳೆ (ಗುರುವಾರ) 2ನೇ ಬಾರಿಗೆ ಹಸೆಮಣೆ ಏರಲು ಸಜ್ಜಾಗಿದ್ದು, ಮತ್ತೆ ದಾಂಪತ್ಯ ಜೀವಕ್ಕೆ ಕಾಲಿಡುತ್ತಿದ್ದಾರೆ.




ಭಗವಂತ್ ಮಾನ್ ಡಾ.ಗುರುಪ್ರೀತ್ ಕೌರ್ ಅವರನ್ನು ವರಿಸಲಿದ್ದು, ಚಂಡೀಗಢದಲ್ಲಿ ಮದುವೆ ಕಾರ್ಯಕ್ರಮ ನಡೆಯಲಿದೆ. ಸರಳವಾಗಿ ನಡೆಯುವ ಸಮಾರಂಭದಲ್ಲಿ ಕುಟುಂಬಸ್ಥರು, ಹತ್ತಿರದ ಸಂಬಂಧಿಗಳು ಹಾಗೂ ವಿಶೇಷ ಆಹ್ವಾನಿತರು ಪಾಲ್ಗೊಳ್ಳಲಿದ್ದಾರೆ. ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಸಹ ಮಾನ್ ಅವರ ವಿವಾಹ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. 48 ವರ್ಷ ವಯಸ್ಸಿನ ಮಾನ್ ಅವರು 2ನೇ ಬಾರಿಗೆ ಮದುವೆಯಾಗುತ್ತಿದ್ದಾರೆ. ತಮ್ಮ ಮೊದಲ ಪತ್ನಿ ಇಂದರ್‌ಪ್ರೀತ್ ಕೌರ್ ನಿಂದ ವಿಚ್ಛೇದನ ಪಡೆದಿದ್ದಾರೆ. ಮಾನ್ ಅವರಿಗೆ ಇಬ್ಬರು ಮಕ್ಕಳಿದ್ದು, ಮೊದಲ ಪತ್ನಿಯೊಂದಿಗೆ ಅಮೆರಿಕದಲ್ಲಿ ವಾಸಿಸುತ್ತಿದ್ದಾರೆ.

ಬಾಬೂಜಿಗೆ ಸಿದ್ದರಾಮಯ್ಯ ಪುಷ್ಪನಮನ

ಮೈಸೂರು,ಜು.6(ಜಿಎ)–ಜಡಿ ಮಳೆಯ ನಡುವೇ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೈಸೂರು ನಗರ ಹಾಗೂ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಆಯೋಜಿಸಿದ್ದ, ಬಾಬು ಜಗಜೀವನ್ ರಾವ್ ಅವರ 36ನೇ ಸಂಸ್ಮರಣೆ ಹಿನ್ನೆಲೆಯಲ್ಲಿ ಮೈಸೂರಿನ ರೈಲ್ವೆ ನಿಲ್ದಾಣ ಮುಂಭಾಗದಲ್ಲಿರುವ ಅವರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದರು.

ಈ ವೇಳೆ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಮಾತನಾಡಿ, ಬಾಬು ಜಗಜೀವನ್ ರಾಮ್ ಅವರ ಕೊಡುಗೆ ದೇಶಕ್ಕೆ ಅಪೂರ್ವವಾದದ್ದು. ದೇಶದ ಸ್ವಾತಂತ್ರ್ಯಕ್ಕೂ ಹೋರಾಡಿದ ಅವರು ನಂತರ ನೆಹರು ಅವರ ಮೊದಲ ಸಂಪುಟದಲ್ಲಿ ಕಾರ್ಮಿಕ ಸಚಿವರು. ನಂತರವೂ ದೀರ್ಘಕಾಲ ವಿವಿಧ ಖಾತೆಗಳನ್ನು ನಿರ್ವಹಿಸಿ, ದೇಶಕ್ಕೆ ಕೊಡುಗೆಗಳನ್ನು ನೀಡಿದ್ದಾರೆ ಎಂದರು.

ದೇಶದಲ್ಲಿ ಒಮ್ಮೆ ಆಹಾರ ಸಮಸ್ಯೆ ಭೀಕರವಾಗಿತ್ತು, ಆ ವೇಳೆ ಅಮೆರಿಕಾ ದೇಶದಿಂದ ಗೋಧಿಯನ್ನು ಆಮದು ಮಾಡಿಕೊಂಡು ದೇಶದ ಜನತೆಗೆ ನೀಡುವ ಸ್ಥಿತಿ ಇತ್ತು. ಇಂತಹ ಒಂದು ಸಂದರ್ಭದಲ್ಲಿ ಇಂದಿರಾ ಗಾಂಧಿ ಅವರು ಪ್ರಧಾನ ಮಂತ್ರಿಗಳಾಗಿದ್ದರು. ಅವರ ಸಂಪುಟದಲ್ಲಿ ಬಾಬು ಜಗಜೀವನ್ ರಾಮ್ ಕೃಷಿ ಸಚಿವರಾಗಿದ್ದರು. ಆಧುನಿಕ ತಂತ್ರಜ್ಞಾನ ಅಳವಡಿಸಿ ಅಧಿಕ ಇಳುವರಿ ನೀಡುವ ತಳಿಗಳನ್ನು ಕಂಡು ಹಿಡಿದ್ದು, ಸ್ವಾವಲಂಬಿ ದೇಶ ಮಾಡಿದ ಹೆಗ್ಗಳಿಕೆ ಅವರಿಗೆ ಸಲುತ್ತದೆ ಎಂದರು.



ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡಾ. ಬಾಬು ಜಗಜೀವನರಾಂ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಪುಷ್ಪ ನಮನ ಸಲ್ಲಿಸಿದರು.

ಈ ವೇಳೆ ಸಿದ್ದರಾಮೋತ್ಸವ ಪರ–ವಿರೋಧ ವಿಚಾರವಾಗಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮೋತ್ಸವ ಯಾವುದೇ ರೀತಿಯ ಬಲ ಪ್ರದರ್ಶನ ಅಲ್ಲ. ಮೈಸೂರು ಸೇರಿ ರಾಜ್ಯಕ್ಕೆ ಇದೊಂದು ಹೆಮ್ಮೆ ವಿಚಾರವಾಗಲಿದೆ. ಇದರಿಂದ ಪಕ್ಷಕ್ಕೂ ಉಪಯುಕ್ತವಾಗಲಿದೆ. ಸಿದ್ದರಾಮಯ್ಯ ಅವರು ತಮ್ಮ ಸುದೀರ್ಘ ರಾಜಕೀಯ ಜೀವನದಲ್ಲಿ ಯಾವುದೇ ಕಪ್ಪು ಚುಕ್ಕೆ ಇಲ್ಲದೆ ಕೆಲಸ ಮಾಡಿದ್ದಾರೆ. ಆದ್ದರಿಂದ ಸಿದ್ದರಾಮೋತ್ಸವದಲ್ಲಿ ಭಾಗಿಯಾಗುವುದು ನಮಗೆಲ್ಲರಿಗೂ ಸಂತೋಷದ ವಿಚಾರವಾಗಿದ್ದು, ಪಕ್ಷಾತೀತವಾಗಿ ನಾಯಕರು ಭಾಗವಹಿಸುತ್ತಾರೆ. ಸಿದ್ದರಾಮೋತ್ಸವದ ಸಮಿತಿಯಲ್ಲಿ ಎಲ್ಲಾ ನಾಯಕರಿಗೂ ಜವಾಬ್ದಾರಿಯನ್ನು ನೀಡಿದ್ದು, ನನಗೂ ಯುವ ವಿದ್ಯಾರ್ಥಿ ಸಂಘಟನಾ ಸಮಿತಿಯ ಜವಾಬ್ದಾರಿ ನೀಡಿದ್ದಾರೆ ಎಂದರು. ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಖಂಡರಾದ ಕೆ.ಮರಿಗೌಡ, ಕೆ.ಹರೀಶ್‌ಗೌಡ ಮತ್ತಿತರರಿದ್ದರು.

> "ಚಾಮುಂಡಿಬೆಟ್ಟದ ಮನೆಗಳ ಸ್ಥಳಾಂತರಕ್ಕೆ ಮುಂದಾದರೆ, ಉಗ್ರ ಪ್ರತಿಭಟನೆ ಮಾಡುತ್ತೇವೆ. ಚಾಮುಂಡಿಬೆಟ್ಟ ಮೀಸಲು ಅರಣ್ಯ ಪ್ರದೇಶವಲ್ಲ. ಹಲವಾರು ವರ್ಷಗಳಿಂದ ಅಲ್ಲಿನ ನಿವಾಸಿಗಳು ಬದುಕನ್ನು ರೂಪಿಸಿಕೊಂಡು ಬಂದಿದ್ದಾರೆ. ಚಾಮುಂಡಿಬೆಟ್ಟ ರಕ್ಷಣೆಗೆ ಹಲವಾರು ಪರ್ಯಾಯ ಮಾರ್ಗಗಳಿವೆ. ಅವರನ್ನು ಒಕ್ಕಲೆಬ್ಬಿಸುವುದು ಎಷ್ಟರ ಮಟ್ಟಿಗೆ ಸರಿ.
> –ಆರ್.ಧ್ರುವನಾರಾಯಣ್, ಕಾರ್ಯಾಧ್ಯಕ್ಷ, ಕೆಪಿಸಿಸಿ

ನಕ್ಕರೆ ಅದೇ ಸ್ವರ್ಗ

ಮಿತ್ರ : "ನಿಮ್ಮ ಹೊಸಾ ಸಿನೆಮಾ ಟ್ರ್ಯಾಜಿಡೀನೋ ಕಾಮಿಡೀನೋ"?

ನಿರ್ಮಾಪಕ : "ಕಲೆಕ್ಷನ್ ಚೆನ್ನಾಗಿದ್ರೆ ಕಾಮಿಡಿ. ಇಲ್ಲಾಂದ್ರೆ ಟ್ರ್ಯಾಜಿಡಿ"

ಮೈಸೂರು ಮಿತ್ರ

ಗುರುವಾರ, 7 ಜುಲೈ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ತಪ್ಪುಗಳು ನೀರಿನ ಮೇಲೆ ತೇಲುವ ಹುಲ್ಲಿನಂತೆ ಎದ್ದು ಕಾಣುತ್ತವೆ. ಸದ್ಗುಣಗಳು ಮುತ್ತಿನಂತೆ ಒಳಗಡೆ ಇರುತ್ತವೆ. – ಡ್ರೈಡನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಪುಣ್ಯವಂತ ಮಾಡಿದ್ದೇ ಯಾಗ, ವೈದ್ಯ ಹೇಳಿದ್ದೇ ರೋಗ

ನಿಮ್ಮ ಪತ್ರಗಳು

ರಸ್ತೆ ಕಾಮಗಾರಿಗೆ ಇದೇ ಸುಸಮಯವೇ?



ಮಾನ್ಯರೆ,

ಹಠ ಬಿಡದ ತ್ರಿವಿಕ್ರಮ ಕಟ್ಟಿರುಳ ರಾತ್ರಿಯಲ್ಲಿ ಬೇತಾಳವನ್ನು ತನ್ನ ಹೆಗಲ ಮೇಲೆ ಹಾಕಿಕೊಂಡು ಮೌನವಾಗಿ ಸ್ಮಶಾನದ ಕಡೆಗೆ ನಡೆದನಂತೆ. ನಮ್ಮ ಮೈಸೂರು ನಗರ ಪಾಲಿಕೆ ಹಾಗೂ ಅದರ ಇಂಜಿನಿಯರ್‌ಗಳ ಕಥೆ ಕೂಡ ಇದೇ ಆಗಿದೆ. ಅವರೂ ಕೂಡ ಯಾವಾಗಲೂ ಹಠಕ್ಕೆ ಬಿದ್ದವರಂತೆ ಬೇಸಿಗೆ ಕಾಲದಲ್ಲಿ ರಸ್ತೆಗಳ ರಿಪೇರಿ ಮಾಡದೆ, ಆ ಕೆಲಸವನ್ನು ಆಷಾಢದ ಮಳೆ ಪ್ರಾರಂಭವಾದ ಮೇಲೆನೇ ಪ್ರಾರಂಭಿಸುವುದು. ಅದು ಅವರ ಜಾಯಮಾನ. ಇದೇ ಅವರಿಗೂ ತ್ರಿವಿಕ್ರಮನಿಗೂ ಇರುವ ನೆಂಟು. ಅಷ್ಟೇ ಅಲ್ಲಾ ಅದು ಅವರ ಬುದ್ಧಿ ಮತ್ತೆಯ ಪ್ರಮಾಣ. ಮೇಲಾಗಿ ಇಂತಹ ಪಾಲಿಕೆ ಮತ್ತು ಇಂಜಿನಿಯರ್‌ಗಳನ್ನು ಪಡೆದ ಮೈಸೂರು ಜನತೆಯೇ ಧನ್ಯ. ಸಮಯ ಪಾಲನೆ ಇಲ್ಲದ, ಕೆಲಸದಲ್ಲಿ ನಿಸ್ಪೃಹತೆ ಇಲ್ಲದ, ಇಂತಹ ವ್ಯವಸ್ಥೆಯಲ್ಲಿ ಒಳ್ಳೆಯದನ್ನು ಏನಾದರೂ ನಿರೀಕ್ಷಿಸಲು ಸಾಧ್ಯವೆ? ಇವರಿಗೆ ಸಮಯ ಪ್ರಜ್ಞೆ, ಕರ್ತವ್ಯ ನಿಷ್ಠೆ ಏನಾದರೂ ಇದೆಯೇ?

– ಪ್ರೊ. ಕೇಶವಮೂರ್ತಿ, ಜ್ಯೋತಿಷಿ, ಮೈಸೂರು.

ಚಂದ್ರಶೇಖರ ಗೂರೂಜಿ ಹತ್ಯೆ ಅಮಾನವೀಯ ಕೃತ್ಯ

ಮಾನ್ಯರೆ,



ಸರಳ ವಾಸ್ತು ಖ್ಯಾತಿಯ ಚಂದ್ರಶೇಖರ ಗೂರೂಜಿ ಅವರನ್ನು ಹತ್ಯೆ ಮಾಡಿರುವುದು ನಾಗರಿಕ ಸಮಾಜ ತಲೆತಗ್ಗಿಸುವಂತಹ ಕೃತ್ಯವಾಗಿದೆ. ವಿವಾದ ಯಾವುದೇ ಇರಬಹುದು, ಜಗಳ, ಮನಸ್ತಾಪ ಸಮಾಜದಲ್ಲಿ ವ್ಯಕ್ತಿಗಳ ನಡುವೆ ಸಾಮಾನ್ಯ. ಬೇನಾಮಿ ಅಸ್ತಿಯ ವ್ಯಾಜ್ಯ ಗೂರೂಜಿಯ ಹತ್ಯೆಯಲ್ಲಿ ಕೊನೆಯಾಗಿರುವುದು ದುರದೃಷ್ಟಕರವಾಗಿದೆ. ಸರಳ ವಾಸ್ತುವನ್ನು ನಂಬುವುದು ಬಿಡುವುದು ಜನರಿಗೆ ಬಿಟ್ಟ ವಿಚಾರ. ಜನ ವಾಸ್ತು, ಭವಿಷ್ಯದ ವಿಚಾರವಾಗಿ ಸಂಬಂಧಪಟ್ಟವರ ಬಳಿ ಪರಿಹಾರಕ್ಕೆ ಹೋಗದಿದ್ದರೆ, ಯಾರು ಇಂತಹ ವಿಚಾರದಲ್ಲಿ ಯಾರನ್ನು ಒತ್ತಾಯ ಮಾಡುವುದಿಲ್ಲ. ಯಾವುದೇ ಮನಸ್ತಾಪಗಳಿದ್ದರೂ, ಮನುಷ್ಯ ಕೋಪಕ್ಕೆ ಅಸ್ಪದ ಕೊಡಬಾರದು. ಒಬ್ಬ ವ್ಯಕ್ತಿಯನ್ನು ಪ್ರಾಣಿಗಳಂತೆ ಕೊಲ್ಲುವುದು ಸರಿಯಾದ ವಿಚಾರವಲ್ಲ. ಇದು ಶಿಲಾಯುಗದ ಸಮಯವಲ್ಲ. ಯಾವುದೇ ವಿಚಾರವಾಗಲಿ ತಪ್ಪು, ಸರಿ ಎಂದು ಪರಗಣಿಸಿ ಶಿಕ್ಷೆ ವಿಧಿಸಲು ನ್ಯಾಯಾಲಯಗಳಿವೆ. ಸರ್ಕಾರ ಇಂತಹ ಕೃತ್ಯಗಳಿಗೆ ಕಡಿವಾಣ ಹಾಕಬೇಕು.

–ರಾಸುಮ ಭಟ್, ಚಿಕ್ಕಮಗಳೂರು.

ಕಾಡೊಳಗಿನ ಕುಗ್ರಾಮಗಳ ಸಮಸ್ಯೆಗಳಿಗೆ ಸ್ಪಂದಿಸಲಿ

ಮಾನ್ಯರೆ,

ಇತ್ತೀಚೆಗೆ ಚಾಮರಾಜನಗರ ಜಿಲ್ಲೆ ಹನೂರು ತಾಲೂಕಿನ ದೊಡ್ಡಾಣೆ ಕುಗ್ರಾಮದಲ್ಲಿ ನಡುರಾತ್ರಿ ನಡೆದ ಕರುಣಾಜನಕ ಘಟನೆ ಎಂಥ ವರಿಗೂ ಕಣ್ಣಂಚಿನಲ್ಲಿ ನೀರು ತರಿಸುತ್ತದೆ. ಬಡವರಿಗೆ ಕಷ್ಟಬಂದರೆ ಸಹಾಯಕ್ಕೆ ಬರುವವರು ತೀರಾ ಕಡಿಮೆ. ಬಡವನ ಕೋಪ ದವಡೆಗೆ ಮೂಲ ಎಂಬ ಗಾದೆಯಂತೆ ಆ ಗ್ರಾಮದಲ್ಲಿ ವಾಹನಗಳ ಸೌಲಭ್ಯಗಳಿಲ್ಲದೆ ತುಂಬು ಗರ್ಭಿಣಿಯನ್ನು ನಡುರಾತ್ರಿ ಸುಮಾರು 15 ಕಿಲೋ ಮೀಟರ್ ದೂರ ದಟ್ಟಾರಣ್ಯದಲ್ಲಿ ಕಾಡು ಪ್ರಾಣಿಗಳ ಉಪಟಳದ ನಡುವೆ ಸಾಕಷ್ಟು ಆತಂಕದಲ್ಲಿ ಗ್ರಾಮಸ್ಥರು ಡೋಲಿ ಸಹಾಯದಿಂದ ಆಸ್ಪತ್ರೆಗೆ ದಾಖಲು ಮಾಡಲು ಪಟ್ಟಂತಹ ಕಷ್ಟ ಅಷ್ಟಿಷ್ಟಲ್ಲ. ನಿಜಕ್ಕೂ ಸರ್ಕಾರ ತಲೆ ತಗ್ಗಿಸುವಂತಹ ಪ್ರಸಂಗವಾಗಿದೆ. ಇಂತಹ ಅಪ್‌ಡೇಟ್ ದಿನಗಳಲ್ಲೂ ಈ ಸಂಗತಿ ನಡೆದಿದೆ ಎಂದರೆ ಬೇಸರವಾಗುತ್ತದೆ. ಈ ಭಾಗದ ಗ್ರಾಮಸ್ಥರ ಅನುಕೂಲಕ್ಕಾಗಿ "ಜನವನ" ಸಾರಿಗೆ ವ್ಯವಸ್ಥೆ ಇದ್ದರೂ ಪ್ರಯೋಜನಕ್ಕೆ ಬಾರದಾಗಿದೆ. ಅವರು ಕೂಡ ನಮ್ಮಂತೆ ಮನುಷ್ಯರಲ್ಲವೇ ಎಂಬುದನ್ನು ಅರ್ಥ ಮಾಡಿಕೊಂಡು, ಮಾನವೀಯತೆಯ ನೆಲೆಗಟ್ಟಿನ ಮೇಲೆ, ಈ ವಾಹನಗಳ ಚಾಲಕರು ಮೊಬೈಲ್ ಸ್ವಿಚ್ ಆಫ್ ಮಾಡದೆ ನಿರಂತರ ಸಂಪರ್ಕದಲ್ಲಿದ್ದರೆ, ಇಂತಹ ಘಟನೆಗಳು ಸಂಭವಿಸುವುದಿಲ್ಲ. ಇನ್ನಾದರೂ ಎಚ್ಚೆತ್ತುಕೊಂಡು ರಾತ್ರಿಯ ವೇಳೆಯಲ್ಲಿ ಕಾಡಂಚಿನ ಗ್ರಾಮಸ್ಥರ ಕಷ್ಟ ಕಾರ್ಪಣ್ಯಗಳ ಬವಣೆಯನ್ನು ಚಾಲಕರು, ಅಧಿಕಾರಿಗಳು ಅರಿತುಕೊಂಡು ಕೆಲಸ ಮಾಡಿದರೆ ಸಾಕು. ಜೊತೆಗೆ ಸರ್ಕಾರವು ಕೂಡ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಿ ಸ್ಪಂದಿಸಬೇಕೆಂಬುದೇ ಸಾರ್ವಜನಿಕರ ಒತ್ತಾಸೆಯಾಗಿದೆ.



–ಪರಶಿವಮೂರ್ತಿ ಎನ್.ಪಿ, ಸರಗೂರು ತಾ.

ಅಳಿಯಲಿ ದ್ವೇಷದ ಜ್ವಾಲೆ!

ಮಾನ್ಯರೆ,

ಜಾತಿ ಮತ ಧರ್ಮಗಳ ಹೆಸರಿನಲ್ಲಿ
ಬರ್ಬರ ಹತ್ಯೆಗಳು ಆಗುತ್ತಿದ್ದರೆ...
ಮಾನವೀಯ ಮೌಲ್ಯಗಳಿಗೆ ಬೆಲೆ ಎಲ್ಲಿದೆ?
ಕೋಮು ದಳ್ಳೂರಿಯಿಂದ ಸಮಾಜ ಹೊತ್ತಿ ಉರಿದರೆ
ಮನುಷ್ಯ ಪ್ರೀತಿಗೆ ಅರ್ಥವೇನಿದೆ?
ಅಳಿಯಬೇಕಿದೆ ಸಮಾಜಕ್ಕೆ ಕಿಚ್ಚು ಹಚ್ಚುವ
ದ್ವೇಷ ಅಸೂಹೆಯ ಜ್ವಾಲೆ...
ಬೆಳಗಬೇಕಿದೆ ಶಾಂತಿ ಸಹನೆ ಪ್ರೀತಿ ಸಾರುವ
ದೀಪದ ಹೂಮಾಲೆ..!

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.


ಸಮಾಜಮುಖಿ



ಪ್ರೊ. ಆರ್. ಇಂದಿರಾ
ಸಮಾಜ ಶಾಸ್ತ್ರಜ್ಞೆ
ramaraoindira@gmail.com

ಬಾಲ್ಯ ವಿವಾಹ ತಡೆ ಕಾಯ್ದೆ ಬಂದು ಶತಮಾನವಾದರೂ

ಬಾಲ್ಯ ವಿವಾಹಕ್ಕೆ ಬೀಳಲಿಲ್ಲ ಬ್ರೇಕ್



ರಾಷ್ಟ್ರೀಯ ಅಪರಾಧ ದಾಖಲಾತಿ ಪ್ರಾಧಿಕಾರ ಇತ್ತೀಚೆಗೆ ಬಿಡುಗಡೆ ಮಾಡಿದ ಅಂಕಿ–ಅಂಶಗಳ ಪ್ರಕಾರ ನಮ್ಮ ದೇಶದಲ್ಲಿ ಬಾಲ್ಯ ವಿವಾಹಗಳ ಸಂಖ್ಯೆ 2020 ರಲ್ಲಿ, ಹಿಂದಿನ ವರ್ಷಕ್ಕಿಂತ ಶೇಕಡಾ 50 ರಷ್ಟು ಏರಿಕೆಯಾಗಿ, ಬಾಲ್ಯ ವಿವಾಹ ನಿಷೇಧ ಕಾಯಿದೆಯನ್ನು ಉಲ್ಲಂಘಿಸಿದ 785 ಪ್ರಕರಣಗಳು ದಾಖಲಾಗಿದ್ದವು. ಇದರಲ್ಲಿ ಅತೀ ಹೆಚ್ಚಿನ ಪ್ರಕರಣಗಳು, ಎಂದರೆ 184 ನಡೆದಿರುವುದು ಕರ್ನಾಟಕದಲ್ಲೇ ! ಮತ್ತೊಂದು ಆಘಾತಕಾರಿ ವಿಚಾರವೆಂದರೆ ಪ್ರಪಂಚದಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಬಾಲ್ಯ ವಿವಾಹಗಳು ನಡೆಯುವ 5 ದೇಶಗಳಲ್ಲಿ ಭಾರತವೂ ಸೇರಿರುವುದು.

ಈ ಹೆಚ್ಚಳಕ್ಕೆ ಎರಡು ಪ್ರಮುಖ ಕಾರಣಗಳಿವೆ. ಮೊದಲನೆಯದಾಗಿ, ಹಿಂದೆಂದಿಗಿಂತ ಇಂದು ಬಾಲ್ಯ ವಿವಾಹದ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾಗುತ್ತಿರುವುದು. ಎರಡನೆಯದಾಗಿ, ಕೋವಿಡ್‌ನಿಂದ ಶಾಲೆಗಳನ್ನು ಮುಚ್ಚಿದಾಗ ಅಪ್ರಾಪ್ತ ವಯಸ್ಸಿನ ಮಕ್ಕಳ ವಿವಾಹಗಳ ಸಂಖ್ಯೆ ಹೆಚ್ಚಾದದ್ದು. ಇತ್ತೀಚಿನ ವರ್ಷಗಳಲ್ಲಿ ಶಾಲಾ ಶಿಕ್ಷಣದ ಮೇಲಿನ ತರಗತಿಗಳಲ್ಲಿ ಹೆಣ್ಣು ಮಕ್ಕಳ ದಾಖಲಾತಿ–ಹಾಜರಾತಿ ಗಮನಾರ್ಹವಾದ ಹೆಚ್ಚಳವನ್ನು ಕಂಡು, ಅಪ್ರಾಪ್ತ ವಯಸ್ಸಿನ ವಿವಾಹಗಳ ಸಂಖ್ಯೆ ಕಡಿಮೆಯಾಗಿತ್ತು. ಎಲ್ಲಿಯವರೆಗೂ ಮಕ್ಕಳು, ಅದರಲ್ಲೂ ಹೆಣ್ಣು ಮಕ್ಕಳು ಶಾಲೆಗಳಲ್ಲಿ ಮುಂದುವರೆಯುತ್ತಾರೋ ಅಲ್ಲಿಯವರೆಗೂ ಅವರ ವಿವಾಹದ ವಯಸ್ಸು ಏರಿಕೆಯಾಗುತ್ತದೆ, ಫಲಿತತೆಯ ದರ ಕಡಿಮೆಯಾಗಿ ಅವರ ದೈಹಿಕ–ಮಾನಸಿಕ ಆರೋಗ್ಯ ಸುಧಾರಿಸುತ್ತದೆ. ಆದರೆ ಮಕ್ಕಳು ಶಾಲೆಗಳಿಂದ ದೂರ ಉಳಿದಿದ್ದರಿಂದ ಅವರಲ್ಲನೇಕರ ಶಿಕ್ಷಣಕ್ಕೆ ಹಿನ್ನಡೆಯಾಗಿ ಕಳೆದೆರಡು ವರ್ಷಗಳಲ್ಲಿ ಬಾಲ್ಯ ವಿವಾಹಗಳ ಸಂಖ್ಯೆ ಏರುತ್ತಾ ಹೋಯಿತು.

ಸೇವ್ ದಿ ಚಿಲ್ಡ್ರನ್ ಎಂಬ ಸ್ವಯಂಸೇವಾ ಸಂಸ್ಥೆ ನೀಡಿರುವ ಮಾಹಿತಿಯ ಅನ್ವಯ ಕೋವಿಡ್ ಕಾರಣದಿಂದಾಗಿ ಅನೇಕ ವರ್ಷಗಳ ಕಾಲ ಬಾಲ್ಯ ವಿವಾಹದ ಒಂದು ಪ್ರಕರಣವನ್ನೂ ಕಾಣದ ಗ್ರಾಮಗಳಲ್ಲೂ ಮಕ್ಕಳ ವಿವಾಹಗಳು ನಡೆದವು. ಶಾಲೆಗಳು ಮುಚ್ಚಿದ್ದರಿಂದ ಮಕ್ಕಳು ಇಡೀ ದಿನ ಮನೆಯಲ್ಲೇ ಇರುವಂತಾಗಿದ್ದು, ಕೆಲವೆಡೆಗಳಲ್ಲಿ ಅವರ ಮೇಲೆ ಮನೆಯ ಒಳಗೆ ಅಥವಾ ನೆರೆಹೊರೆಯಲ್ಲಿ ನಡೆದ ಲೈಂಗಿಕ ದೌರ್ಜನ್ಯ, ಮಧ್ಯಾಹ್ನದ ಊಟದ ವ್ಯವಸ್ಥೆ ನಿಂತು ಹೋದಾಗ ಅದನ್ನೇ ಅವಲಂಬಿಸಿದ್ದ ಅನೇಕ ಬಡ ಕುಟುಂಬಗಳಿಗೆ ಮನೆಯಲ್ಲಿ ಪರ್ಯಾಯ ವ್ಯವಸ್ಥೆ ಮಾಡುವುದು ಕಷ್ಟವಾಗಿದ್ದು–ಇವೆಲ್ಲವೂ ಹೆಣ್ಣು ಮಕ್ಕಳನ್ನು ವಿವಾಹದ ಕೂಪಕ್ಕೆ ತಳ್ಳಲು ಮುಖ್ಯ ಕಾರಣಗಳಾದವು.

ಬಾಲ್ಯ ವಿವಾಹಗಳಿಗೆ ಕಾರಣವಾದ ಮತ್ತೊಂದು ಅಂಶವೆಂದರೆ ಲಾಕ್‌ಡೌನ್ ಸಮಯದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ವಿವಾಹಗಳನ್ನು ನಡೆಸುವುದರ ಮೇಲೆ ವಿಧಿಸಿದ ನಿರ್ಬಂಧಗಳು. ಆ ಸಮಯದಲ್ಲಿ ಮನೆಗಳ ಮುಚ್ಚಿದ ಬಾಗಿಲುಗಳ ಹಿಂದೆ ಬಾಲ್ಯ ವಿವಾಹಗಳನ್ನು ನಡೆಸಲು ಅನೇಕ ಕುಟುಂಬಗಳಿಗೆ ಪರವಾನಗಿ ದೊರೆತಂತಾಗಿದ್ದು ಕೂಡ ಅಪ್ರಾಪ್ತ ವಯಸ್ಸಿನ ವಿವಾಹಗಳ ಸಂಖ್ಯೆ ಹೆಚ್ಚಾಗಲು ಕಾರಣವಾಯಿತು. ಬಹುತೇಕ ಸಾಮಾಜಿಕ ಕಾರ್ಯಕರ್ತರು, ಅಂಗನವಾಡಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹೋದರಿಯರು ಮತ್ತು ತನಿಖಾಧಿಕಾರಿಗಳು ಕೋವಿಡ್ ಸಂಬಂಧಿ ಕರ್ತವ್ಯ ನಿರ್ವಹಣೆಗಾಗಿ ನಿಯೋಜನೆಗೊಂಡಿದ್ದು ಬಾಲ್ಯ ವಿವಾಹಗಳಿಗೆ ತಡೆಯೊಡ್ಡುವವರೇ ಅನೇಕ ಕಡೆಗಳಲ್ಲಿ ಇಲ್ಲದಂತಾಗಿದ್ದು ಈ ನ್ಯಾಯ ಬಾಹಿರ ವಿವಾಹಗಳಿಗೆ ಇಂಬು ನೀಡಿದಂತಾಯಿತು.

ಈ ಹೊತ್ತು ನಮ್ಮ ಮುಂದಿರುವ ಬಹು ದೊಡ್ಡ ಸವಾಲುಗಳಲ್ಲಿ ಅಕ್ರಮ ವಿವಾಹ ಬಂಧನಗಳಲ್ಲಿ ಸಿಲುಕಿಕೊಂಡಿರುವ ಅಪ್ರಾಪ್ತ ವಯಸ್ಸಿನ ಮಕ್ಕಳನ್ನು ಗುರುತಿಸಿ–ರಕ್ಷಿಸಿ–ಹೊರತರುವುದು ಹೇಗೆ? ಅವರನ್ನು ಮತ್ತೆ ಶಾಲೆಗಳಿಗೆ ಕಳುಹಿಸಲು ಹೊರಟಾಗ ಕುಟುಂಬ ಹಾಗೂ ನೆರೆಹೊರೆ ತಂದೊಡ್ಡಬಹುದಾದ ಅಡಚಣೆಗಳನ್ನು ಎದುರಿಸುವುದು ಹೇಗೆ? ಇವು ಮುಖ್ಯವಾದುವು. ಒಮ್ಮೆ ವಿವಾಹವಾಗಿ ಬಿಟ್ಟರೆ ಅದು ಜೀವಮಾನದ ಬಂಧ ಎಂಬ ನಂಬಿಕೆಗೆ ಇಂದಿಗೂ ಬಹು ಮಂದಿ ಅಂಟಿಕೊಂಡು ಕುಳಿತಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ಆ ಮಕ್ಕಳು ತಮ್ಮದಲ್ಲದ ತಪ್ಪಿಗೆ ಜೀವವಿರುವವರೆಗೂ ಅನುಭವಿಸ ಬೇಕಾದ ಬವಣೆಗಳಿಗೆ ಯಾರು ಹೊಣೆಯಾಗುತ್ತಾರೆ?

ಕೋವಿಡ್‌ನ ಕಾರಣದಿಂದಾಗಿ ಬಾಲ್ಯ ವಿವಾಹಗಳ ಸಂಖ್ಯೆಯಲ್ಲಿ ಏರಿಕೆಯಾಗಿದ್ದು ಕಳೆದ ಎರಡು ವರ್ಷಗಳಲ್ಲಿ ನಾವು ಕಂಡಂಥ ಒಂದು ಪ್ರವೃತ್ತಿಯಾಗಿರಬಹುದು. ಆದರೆ ಬಾಲ್ಯ ವಿವಾಹಕ್ಕೆ ಈ ದೇಶದಲ್ಲಿ ಶತಮಾನಗಳ ಇತಿಹಾಸವೇ ಇದೆ. 1929ರಲ್ಲಿ ಬಾಲ್ಯ ವಿವಾಹ ತಡೆಗಟ್ಟುವ ಕಾಯಿದೆ ಜಾರಿಯಾಗುವವರೆಗೂ ಮಕ್ಕಳು ತೊಟ್ಟಿಲುಗಳಲ್ಲಿ ಇರುವಾಗಲೇ ವಿವಾಹ ಸಂಬಂಧಗಳನ್ನು ಬೆಸೆದು, 4 ಅಥವಾ 5ನೇ ವಯಸ್ಸಿನಲ್ಲೇ ಅವರಿಗೆ ವಿವಾಹವನ್ನು ಮಾಡುತ್ತಿದ್ದುದು, ಅವರ ಇಡೀ ಬದುಕನ್ನು ಈ ಬಂಧನದಲ್ಲಿ ಕಟ್ಟಿ ಹಾಕಿ ಅವರಿಗೆ ವಿದ್ಯೆಯನ್ನಾಗಲೀ, ಯಾವುದೇ ಬಗೆಯ ಜೀವ ಕೌಶಲಗಳನ್ನಾಗಲಿ ಕಲಿಯಲು ಅವಕಾಶ ನೀಡದಿರುವುದು, ಆಕೆಯ ಪತಿಯಾದವನು ಏನಾದರೂ ಮರಣ ಹೊಂದಿದರೆ ಆಕೆಗೆ ವಿಧವೆಯ ಹಣೆಪಟ್ಟಿ ಕಟ್ಟಿ ಅವಳನ್ನು ಗೃಹ ಬಂಧಿಯನ್ನಾಗಿ ಮಾಡುವುದು, ಸ್ತ್ರೀಯಾದವಳಿಗೆ ಮರು ವಿವಾಹದ ಹಕ್ಕನ್ನು ನೀಡದಿರುವುದು–ಇವೇ ಮುಂತಾದ ಆಚರಣೆಗಳು ಈ ಸಮಾಜದ ಪಿತೃಪ್ರಧಾನ– ಊಳಿಗಮಾನ್ಯ ಸಂಸ್ಕೃತಿಯ ಪ್ರತೀಕಗಳಾಗಿ, ಚರಿತ್ರೆಯ ಭಾಗವಾಗಿ ನಿಂತಿವೆ. ಹೆಣ್ಣು ಮಕ್ಕಳಿಗೆ ಶಿಕ್ಷಣಾವಕಾಶಗಳೂ ಇಲ್ಲ, ಪತಿ ಗತಿಸಿದರೆ ಮತ್ತೆ ವಿವಾಹವಾಗುವ ಹಕ್ಕೂ ಇಲ್ಲ, ಅಷ್ಟೇ ಅಲ್ಲದೆ ಆಕೆಯ ಮೇಲೆ ವಸ್ತ್ರ ಸಂಹಿತೆಯನ್ನು ಬೇರೆ ವಿಧಿಸಿ ಹೊರ ಪ್ರಪಂಚದ ಸಂಪರ್ಕವನ್ನೇ ಕಡಿದು ಹಾಕಿ, ಮನೆಯಿಂದಲೂ ಹೊರಹಾಕಿ, ಇಲ್ಲವೇ ವಿಧವಾ ಗೃಹಗಳಿಗೆ ಬಲಾತ್ಕಾರವಾಗಿ ಸೇರಿಸಿ ಕುಟುಂಬಗಳು ತಮ್ಮ ಜವಾಬ್ದಾರಿ ಮುಗಿದು ಹೋದಂತೆ ನಡೆದುಕೊಳ್ಳುತ್ತಿದ್ದುದು ಇವೆಲ್ಲ ನಮಗೆ ತಿಳಿದೇ ಇದೆ. ಹೆಣ್ಣಿಗೆ ಬದುಕುವ ಆಯ್ಕೆ ಇಲ್ಲದೆ ಹೋದರೂ ಸಾಯುವ ಆಯ್ಕೆ ಇತ್ತು, ದಿನವೂ ಸಾಯುವ ಬದಲು ಒಮ್ಮೆ ಪತಿಯ ಚಿತೆಯನ್ನೇರಿಯೋ, ನದಿಗೆ ಹಾರಿಯೋ ಜೀವ ಹರಣ ಮಾಡಿಕೊಂಡರೆ ಅದಕ್ಕೆ ಸಮರ್ಥನೆ ಬೇರೆ– ಅವಳು ಬದುಕಿ ತಾನೇ ಏನು ಮಾಡಬೇಕು ಎಂದು. ಎಂಥಾ ಲಿಂಗ ಪಕ್ಷಪಾತಿ ದ್ವಂದ್ವ ನಿಲುವುಗಳು ಈ ಸಮಾಜದಲ್ಲಿದೆ? ಈ ಕಾರಣಕ್ಕೆಂದೇ 19ನೇ ಶತಮಾನದಲ್ಲಿಯೇ ಸಮಾಜ ಸುಧಾರಕರು ಸತಿ ಪದ್ಧತಿಯ ವಿರುದ್ಧ, ಬಾಲ್ಯ ವಿವಾಹದ ವಿರುದ್ಧ ಹಾಗೂ ವಿಧವಾ ವಿವಾಹವನ್ನು ಮಾನ್ಯ ಮಾಡುವ ಕಾಯಿದೆಗಳ ಅನುಷ್ಠಾನಕ್ಕೆ ಹೋರಾಟವನ್ನು ಆರಂಭಿಸಿದ್ದು.

> ಕೋವಿಡ್ ಕಾರಣದಿಂದಾಗಿ ಅನೇಕ ವರ್ಷಗಳ ಕಾಲ ಬಾಲ್ಯ ವಿವಾಹದ ಒಂದು ಪ್ರಕರಣವನ್ನೂ ಕಾಣದ ಗ್ರಾಮಗಳಲ್ಲೂ ಮಕ್ಕಳ ವಿವಾಹಗಳು ನಡೆದವು. ಶಾಲೆಗಳು ಮುಚ್ಚಿದ್ದರಿಂದ ಮಕ್ಕಳು ಇಡೀ ದಿನ ಮನೆಯಲ್ಲೇ ಇರುವಂತಾಗಿದ್ದು, ಕೆಲವೆಡೆಗಳಲ್ಲಿ ಅವರ ಮೇಲೆ ಮನೆಯ ಒಳಗೆ ಅಥವಾ ನೆರೆಹೊರೆಯಲ್ಲಿ ನಡೆದ ಲೈಂಗಿಕ ದೌರ್ಜನ್ಯ, ಮಧ್ಯಾಹ್ನದ ಊಟದ ವ್ಯವಸ್ಥೆ ನಿಂತು ಹೋದಾಗ ಅದನ್ನೇ ಅವಲಂಬಿಸಿದ್ದ ಅನೇಕ ಬಡ ಕುಟುಂಬಗಳಿಗೆ ಮನೆಯಲ್ಲಿ ಪರ್ಯಾಯ ವ್ಯವಸ್ಥೆ ಮಾಡುವುದು ಕಷ್ಟವಾಗಿದ್ದು–ಇವೆಲ್ಲವೂ ಹೆಣ್ಣು ಮಕ್ಕಳನ್ನು ವಿವಾಹದ ಕೂಪಕ್ಕೆ ತಳ್ಳಲು ಮುಖ್ಯ ಕಾರಣಗಳಾದವು.

1929ರ ಬಾಲ್ಯ ವಿವಾಹ ತಡೆಗಟ್ಟುವ ಕಾಯಿದೆ ಜಾರಿಯಾಗಿ 93 ವರ್ಷಗಳೇ ಕಳೆದಿವೆ. ತೊಟ್ಟಿಲು ಮಕ್ಕಳನ್ನು ವಿವಾಹ ಮಾಡುತ್ತಿದ್ದ ಆ ಕಾಲಘಟ್ಟದಲ್ಲಿ ವಿವಾಹದ ವಯಸ್ಸನ್ನು ಹೆಣ್ಣಿಗೆ 14 ವರ್ಷ ಮತ್ತು ಗಂಡಿಗೆ 18 ವರ್ಷ ಎಂದು ನಿಗದಿಪಡಿಸಿದಾಗ ಸಂಪ್ರದಾಯ ವಲಯದಿಂದ ಸಾಕಷ್ಟು ಪ್ರತಿಭಟನೆಗಳು ವ್ಯಕ್ತವಾದವು. ಈ ಕಾಯಿದೆಗೆ 1978ರಲ್ಲಿ ತಂದ ತಿದ್ದುಪಡಿ, ವಿವಾಹದ ಕನಿಷ್ಠ ವಯಸ್ಸನ್ನು ಹೆಣ್ಣಿಗೆ 18 ಮತ್ತು ಗಂಡಿಗೆ 21 ಎಂತಲೂ ನಿಗದಿಪಡಿಸಿತು. ಮತ್ತೆ 2006ರಲ್ಲಿ ಜಾರಿಯಾದ ಕಾಯಿದೆ ಬಾಲ್ಯ ವಿವಾಹ 'ತಡೆಗಟ್ಟುವಿಕೆ'ಯನ್ನು 'ನಿಷೇಧ' ಎಂದು ಬದಲಿಸಿತು. ಇದನ್ನು ಉಲ್ಲಂಘನೆ ಮಾಡಿದವರಿಗೆ 2 ವರ್ಷಗಳ ಕಠಿಣ ಸಜೆ ಅಥವಾ ಒಂದು ಲಕ್ಷ ರೂಪಾಯಿಗಳವರೆಗೂ ದಂಡ ವಿಧಿಸಲು ಅವಕಾಶವಿದೆ. ಆದಾಗ್ಯೂ ಬಾಲ್ಯ ವಿವಾಹಗಳು ದೇಶದ ನಾನಾ ಭಾಗಗಳಲ್ಲಿ ನಡೆಯುತ್ತಲೇ ಇವೆ. ಇದಕ್ಕೆ ಕಾರಣರಾದವರಿಗೆ ಶಿಕ್ಷೆಯಾಗಿರುವುದಾಗಲೀ, ಅಂತಹ ವಿವಾಹಗಳು ರದ್ದಾಗಿರುವುದಾಗಲೀ ತೀರಾ ಕಡಿಮೆ ನಿದರ್ಶನಗಳು ನಮ್ಮ ಮುಂದಿರುವುದು. ಇನ್ನೂ ಈ ಕಾನೂನು ಬಾಹಿರ ವಿವಾಹಗಳನ್ನು ಸಮರ್ಥಿಸಿ, ಅದನ್ನು ವಿರೋಧಿಸಿದವರಿಗೆ ತೊಂದರೆಯನ್ನು ಕೊಟ್ಟಿರುವಂಥ ಪ್ರಕರಣಗಳು ಸಾಕಷ್ಟಿವೆ.

ಭಾರತೀಯ ಸಮಾಜದಲ್ಲಿ ನಾವು ಇಂದು ಕಾಣುತ್ತಿರುವುದು ಒಂದು ರೀತಿಯ ವೈರುಧ್ಯ. ಒಂದೆಡೆ ಹೆಚ್ಚುತ್ತಿರುವ ಶಿಕ್ಷಣ ಮತ್ತು ಉದ್ಯೋಗಾವಕಾಶಗಳು, ಇಡೀ ಜಗತ್ತಿನಲ್ಲೇ ಅತೀ ವೇಗವಾಗಿ ಸಾಗುತ್ತಿದೆ ಎಂದು ಹೇಳಲಾಗುತ್ತಿರುವ ಆರ್ಥಿಕ ಬೆಳವಣಿಗೆ ಹಾಗೂ ಅತ್ಯಂತ ಆಧುನಿಕ ಮಟ್ಟದ ವೈಜ್ಞಾನಿಕ–ತಾಂತ್ರಿಕ ಪ್ರಗತಿ; ಮತ್ತೊಂದೆಡೆ, ಪ್ರತಿ ವರ್ಷವೂ 18ನೇ ವಯಸ್ಸನ್ನು ತಲುಪುವ ಮುನ್ನವೇ 15 ಲಕ್ಷ ಹೆಣ್ಣು ಮಕ್ಕಳ ವಿವಾಹವಾ ಗುತ್ತಿರುವುದು, ಹಾಗೂ 15–19ರ ವಯೋಗುಂಪಿನಲ್ಲಿರುವ ಶೇಕಡಾ 16 ರಷ್ಟು ಹೆಣ್ಣು ಮಕ್ಕಳು ಈಗಾಗಲೇ ವಿವಾಹವಾಗಿ ಬಿಟ್ಟಿರುವುದು. ಪುರುಷರ ಸರಾಸರಿ ವಿವಾಹ ವಯಸ್ಸು ಮಾತ್ರ 21 ಅಥವಾ ಅದಕ್ಕಿಂತ ಹೆಚ್ಚಾಗಿಯೇ ಇದೆ.

ಕೋವಿಡ್ ಹಾಗೂ ಇತರ ಸಾಂಸ್ಕೃತಿಕ ಅಡೆತಡೆಗಳು, ಭಾರತವೇ ಅಲ್ಲದೆ ಏಷ್ಯಾ ಹಾಗೂ ಆಫ್ರಿಕಾದ ಕೆಲ ದೇಶಗಳಲ್ಲೂ ಬಾಲ್ಯ ವಿವಾಹಗಳ ಹೆಚ್ಚಳಕ್ಕೆ ಕಾರಣವಾಗುತ್ತಿವೆ. ಈ ದಶಕ ಕೊನೆಗೊಳ್ಳುವ ವೇಳೆಗೆ 130 ಲಕ್ಷ ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳ ವಿವಾಹಗಳು ನಡೆದು ಹೋಗಿರುತ್ತವೆ ಎಂದು ಅಂದಾಜು ಮಾಡಲಾಗಿದೆ. ಈಗಲಾದರೂ ನಾವು ಎಚ್ಚೆತ್ತು ಕೊಳ್ಳದಿದ್ದರೆ ಈ ದಿಶೆಯಲ್ಲಿ ಮಾಡಿದ ಧನಾತ್ಮಕ ಪ್ರಯತ್ನಗಳು ವ್ಯರ್ಥವಾಗುವುದರಲ್ಲಿ ಸಂದೇಹವಿಲ್ಲ.

ಸಂಸ್ಕೃತಿ ಚಿಂತನಾ



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಶಾಸ್ತ್ರೀಯ ಕನ್ನಡ ಸಾಹಿತ್ಯದ ವರ್ಣಪಟಲ

ಭಾರತ ಜನನಿಯ ತನುಜಾತೆ ಕರ್ನಾಟಕ ಮಾತೆ ಲೋಕಕ್ಕೆ ಕೊಟ್ಟಿರುವ ಸಾಹಿತ್ಯ ಅಪಾರ ಅನಂತ, ಅದ್ಭುತ, ಅಪೂರ್ವ. ಇದರಲ್ಲಿ ಶಾಸ್ತ್ರೀಯ ಎಂದರೆ Classical ಎನಿಸಿಕೊಂಡ ಸಾಹಿತ್ಯವೂ ಇದೆ, ಜಾನಪದ ಸಾಹಿತ್ಯವೂ ಇದೆ, ಆಧುನಿಕ ಸಾಹಿತ್ಯವೂ ಇದೆ. ಇಂದಿನ ಸಾಮಾನ್ಯ ಜನರಿಗೆ ಪ್ರಾಚೀನ ಎನಿಸುವ ಶಾಸ್ತ್ರೀಯ ಕನ್ನಡ ಕೃತಿಗಳನ್ನು ಅಧ್ಯಯನ ಮಾಡುವ, ಅದಕ್ಕಾಗಿ ಪರಿಶ್ರಮಪಡುವ, ತಲಸ್ಪರ್ಶಿ ಪಾಂಡಿತ್ಯವನ್ನು ಗಳಿಸುವ ಜನರು ವಿರಳ. ನಮ್ಮ ಭಾಷೆಯ ಸಾಹಿತ್ಯದ ಔನ್ನತ್ಯ ನಮಗೇ ತಿಳಿದಿಲ್ಲ ಎನ್ನುವಂತಾಗಿದೆ. ಜಗತ್ತಿನ ಸಾವಿರಾರು ಭಾಷೆಗಳಲ್ಲಿ ಕನ್ನಡದ ಸ್ಥಾನವೇನು, ಅದರ ಸಾಹಿತ್ಯದ ಶ್ರೀಮಂತಿಕೆ ಇತರ ಯಾವ ಭಾಷೆಯದಕ್ಕಿಂತ ಕಡಿಮೆಯಾದುದಲ್ಲ–ಎಂದು ವಿಶ್ವ ವೇದಿಕೆಗಳಲ್ಲಿ ಧೈರ್ಯದಿಂದ ತರ್ಕಬದ್ಧವಾಗಿ ಪ್ರತಿಪಾದಿಸಬಲ್ಲ ಮನೀಷಿಗಳು ಯಾರೆಂದು ಹುಡುಕಬೇಕಾದ ಪರಿಸ್ಥಿತಿಯಿದೆ. ಈ ಸಂದರ್ಭದಲ್ಲಿ ಕನ್ನಡಿಗರಿಗೆ ಮಾತ್ರವಲ್ಲ, ಬೇರೆ ರಾಜ್ಯಗಳ ಇತರ ಭಾರತೀಯ ಭಾಷೆಗಳನ್ನಾಡುವ ಜನರಿಗೂ ಪ್ರಪಂಚದ ನಾನಾ ಭಾಷೆಗಳನ್ನಾಡುವವರಿಗೂ, ಎಲ್ಲ ಜಿಜ್ಞಾಸುಗಳಿಗೂ ಕಣ್ಣನ್ನು ತೆರೆಸುವ ಒಂದು ಪಂಚ ಸಂಪುಟಗಳಿರುವ ಬೃಹದ್ ಗ್ರಂಥವನ್ನು ಇಂಗ್ಲೀಷಿನಲ್ಲಿ ಬರೆದಿದ್ದಾರೆ. ನಾಡೋಜ, ಕನ್ನಡದ ವಿಶ್ರಾಂತ ಪ್ರಾಧ್ಯಾಪಕ ಹಂಪನಾ (ಹಂ.ಪ. ನಾಗರಾಜಯ್ಯ) ಅವರು. ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಇದೊಂದು ಅಭೂತಪೂರ್ವ ಘಟನೆ. ಕನ್ನಡಿಗರೆಲ್ಲರೂ ಹೆಮ್ಮೆ ಪಡಬೇಕಾದ ಸಂದರ್ಭ. ಐದು ಸಂಪುಟಗಳ ಬಿಡುಗಡೆಯ ಸಮಾರಂಭ ಒಂಬತ್ತನೆಯ ತಾರೀಖು (9–7–2022) ಬೆಂಗಳೂರಿನಲ್ಲಿ ಸಂಪನ್ನಗೊಳ್ಳಲಿದೆ. ಹಂಪನಾ ಅವರ ಕನ್ನಡ ಪ್ರೇಮ, ಕನ್ನಡ ಸಾಹಿತ್ಯದ ಅಧ್ಯಯನದಲ್ಲಿ ಅವರ ಇಳಿದಿರುವ ಆಳ, ಬಹುಭಾಷಾವಿದರಾಗಿ ಅವರು ಸಾಧಿಸಿಕೊಂಡಿರುವ ದೃಷ್ಟಿ ವೈಶಾಲ್ಯ–ಇವೆಲ್ಲವೂ ಈ ಗ್ರಂಥರತ್ನದ ನಿರ್ಮಾಣದಲ್ಲಿ ಅಡಕಗೊಂಡಿವೆ.

ಅನೇಕ ಕನ್ನಡಿಗರಿಗೆ ಶ್ರೀವಿಜಯ, ಪಂಪ, ರನ್ನ, ಪೊನ್ನ, ಜನ್ನ, ನಾಗವರ್ಮ ಇತ್ಯಾದಿ ಎಲ್ಲೋ ಕೇಳಿದ ಹೆಸರುಗಳು ಮಾತ್ರವಾಗಿವೆ. ಕವಿರಾಜಮಾರ್ಗ, ವಿಕ್ರಮಾರ್ಜುನ ವಿಜಯ, ಸಾಹಸ ಭೀಮ ವಿಜಯ ಎಂಬ ಹೆಸರುಗಳನ್ನು ಎಷ್ಟು ಜನರು ಬಲ್ಲರೋ ಹೇಳು ವುದು ಕಷ್ಟ. ಕನ್ನಡ ಸಾಹಿತ್ಯವು ನಿರ್ದಿಷ್ಟ ರೂಪವನ್ನು ಪಡೆದುಕೊಳ್ಳುವುದರಲ್ಲಿ ಸಂಸ್ಕೃತದ ಮತ್ತು ಪ್ರಾಕೃತದ ಪ್ರಭಾವ ಎಷ್ಟಿತ್ತು ಎಂಬುದೂ ವಿಮರ್ಶನೀಯ. ಜೈನ, ವೈದಿಕ, ವೀರಶೈವ ಮುಂತಾದ ಧರ್ಮಗಳು ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ವಹಿಸಿದ ಪಾತ್ರ ವಿಚಾರಾರ್ಹ. ಇದೆಲ್ಲವನ್ನೂ ನಿರೂಪಿಸುವಾಗ ಸ್ವಮತ ಪಕ್ಷಪಾತವನ್ನು ಬದಿಗಿಟ್ಟು ಸಂಶೋಧನ ಸತ್ಯಾನ್ವೇಷಣೆಯ ದೃಷ್ಟಿಯನ್ನು ರಕ್ಷಿಸಿಕೊಂಡು ಗ್ರಂಥವನ್ನು ರಚಿಸುವುದು ಸುಲಭವಲ್ಲ. ಹಂಪನಾ ಇದೆಲ್ಲವನ್ನೂ ಸಾಧಿಸಿ ವಿಶ್ವ ಮಾನ್ಯವಾಗುವಂತೆ ಗ್ರಂಥ ರಚನೆಯನ್ನು ಮಾಡಿರು ವುದಕ್ಕೆ ಅವರಿಗೆ ಪ್ರಣಾಮ ಸಲ್ಲುತ್ತದೆ.

ಮೊದಲನೆಯ ಸಂಪುಟದಲ್ಲಿ ಪಂಪಪೂರ್ವ ಮತ್ತು ಪಂಪ ಎಂಬ ಶೀರ್ಷಿಕೆಗಳ ಅಡಿಯಲ್ಲಿ ಲೇಖಕರು ವಿಚಾರ ಮಂಥನವನ್ನು ಮಾಡಿದ್ದಾರೆ. ಜೈನ ಮುನಿಗಳು ಪ್ರಾಕೃತ ಮತ್ತು ಸಂಸ್ಕೃತ ಭಾಷೆಗಳಲ್ಲಿದ್ದ ಆಧ್ಯಾತ್ಮಿಕ ಜ್ಞಾನವನ್ನು ಕನ್ನಡದಲ್ಲಿ ಹೇಳಲು ಆರಂಭಿಸಿದಾಗ ಕನ್ನಡ ಭಾಷೆಗೆ ಹೊಸ ಅಭಿವ್ಯಕ್ತಿ ಸಾಮರ್ಥ್ಯ ಉಂಟಾಯಿತು. ಕ್ರಿ.ಶ. ಏಳನೆಯ ಶತಮಾನದಲ್ಲಿ ಜೈನ ಮುನಿಗಳು ಮತ್ತು ಕವಿಗಳು 'ನಿ.ಶಿಧಿ'ಗಳನ್ನು ಬರೆಯಲಾರಂಭಿಸಿದರು. ಶ್ರವಣಬೆಳುಗೊಳದ ಚಂದ್ರಗಿರಿಯು ಒಂದು ಪ್ರಯೋಗ ಶಾಲೆಯಂತೆ, ಕಮ್ಮಟದಂತೆ ರೂಪಗೊಂಡಿತು. ಶಾಮಕುಂದಮತ್ತು ತುಂಬಲೂರ ಎಂಬ ವಿದ್ವಾಂಸರನ್ನು ಇಲ್ಲಿ ನೆನೆಯ ಬೇಕು ಎಂಬ ಅಪೂರ್ವ ಮಾಹಿತಿಯನ್ನು ಹಂಪನಾ ಕೊಟ್ಟಿದ್ದಾರೆ. (Samakunda and Tumbalura deserve special mention because they dared to write in Kannada and expose it to the world of spiritual experience. Volume-I p17)

ಶ್ರೀ ವಿಜಯನು ಕವಿರಾಜ ಮಾರ್ಗವನ್ನು ಬರೆದನೆಂಬುದ ಸಾಮಾನ್ಯ ಜನರ ಗ್ರಹಿಕೆ. ಆದರೆ ಅವನ ಸಾಹಿತ್ಯ ನಿರ್ಮಾಣ ಇನ್ನೂ ಹೆಚ್ಚು ವ್ಯಾಪಕವಾಗಿತ್ತು. ಅವನು ರಘುವಂಶ ಪುರಾಣವನ್ನೂ ಚಂದ್ರಪ್ರಭ ಪುರಾಣವನ್ನು ರಚಿಸಿದ್ದನೆಂಬುದನ್ನೂ ಹಂಪನಾ ತಿಳಿಸಿದ್ದಾರೆ.

ಪಂಪನ ಮಹತ್ತ್ವದ ಬಗೆಗೆ ಬೇರೆ ಹೇಳಬೇಕಾಗಿಲ್ಲ. ಹಂಪನಾ ಅವರು ಪಂಪನನ್ನು ಅತಿಶಯವಾಗಿ ಹೊಗಳಿರುವುದರಲ್ಲಿ ಆಶ್ಚರ್ಯವೇನಿಲ್ಲ. ಹತ್ತನೆಯ ಶತಮಾನದಲ್ಲಿ ಅವನು ಉದಿಸಿದುದು ಮತ್ತು ಸಂಸ್ಕೃತದಲ್ಲಿ ಅಗಾಧ ಪಾಂಡಿತ್ಯವನ್ನು ಪಡೆದಿದ್ದರೂ ಕನ್ನಡದಲ್ಲಿ ತನ್ನ ಮೇರು ಕೃತಿಗಳನ್ನು ರಚಿಸಿದುದು ನಮ್ಮ ಸೌಭಾಗ್ಯ–ಆದಿಪುರಾಣದಲ್ಲಿ ಪಂಪನು ವರ್ಣಿಸಿರುವ ನೀಲಾಂಜನೆಯ ನೃತ್ಯವನ್ನು ಸರಿಗಟ್ಟುವ ನೃತ್ಯವರ್ಣನೆ. ವಿಶ್ವ ಸಾಹಿತ್ಯದಲ್ಲಿ ಬೇರೆಲ್ಲೂ ಇಲ್ಲ. ಅದನ್ನು ಟಿ.ಆರ್.ಎಸ್. ಶರ್ಮಾ ಇಂಗ್ಲೀಷಿಗೆ ಅನುವಾದಿಸಿ ಕೊಟ್ಟಿದ್ದಾರೆ (ಪು. 153–157) ಇದೇ ರೀತಿಯಲ್ಲಿ ವಿಕ್ರಮಾರ್ಜುನ ವಿಜಯದಲ್ಲಿ ಮಾದ್ರಿಯ ಮನೋಹರ ರೂಪದ ಸೆಳೆತಕ್ಕೆ ಒಳಗಾಗಿ ಪಾಂಡು ಅವಳನ್ನು ಆಲಂಗಿಸಿ ಸಾವಿಗೆ ಈಡಾಗುವ ಸಂದರ್ಭವನ್ನು ಎಸ್.ಎಸ್. ರಘುನಾಥ್ ಅವರು ಅಂಗ್ಲಭಾಷೆಗೆ ಅನುವಾದಿಸಿದ್ದರೆ. ಕನ್ನಡದ ಶ್ರೇಷ್ಠ ಕೃತಿಗಳ ಶ್ರೇಷ್ಠ ಭಾಗವನ್ನು ಜಗತ್ತಿಗೆ ಪರಿಚಯ ಮಾಡಿಕೊಟ್ಟಿರುವುದು ಸ್ತುತ್ಯರ್ಹ.

ಎರಡನೆಯ ಸಂಪುಟ ಪಂಪೋತ್ತರ ಸಾಹಿತ್ಯದ ಪರಿಚಯ ಮತ್ತು ವಿಮರ್ಶೆಗಳಿಗೆ ಮೀಸಲಾಗಿದೆ. ಹತ್ತನೆಯದಲ್ಲಿದ್ದ ಪೊನ್ನ ಭುವನೈಕ ರಾಮಾಭ್ಯುದಯ, ಶಾಂತಿ (ನಾಥ) ಪುರಾಣ, ಜಿನಾಕ್ಷರಮಾಲೆಗಳನ್ನು ರಚಿಸಿದ್ದ ಕವಿಚಕ್ರವರ್ತಿ. ಇವನು 'ಗತಪ್ರತ್ಯಾಗತ' ಕಾವ್ಯವನ್ನು ರಚಿಸಿದ್ದನಂತೆ. ಮೂರನೆಯ ಕೃಷ್ಣನ ಆಸ್ಥಾನದಲ್ಲಿದ್ದ ಪೊನ್ನ ರಾಮಾಭ್ಯುದಯದ ಹದಿನಾಲ್ಕು ಆಶ್ವಾಸಗಳು ಚತುರ್ದಶ ಭುವನಗಳಿಗೆ ಸಮ ಎಂದು ಹೇಳಿದ್ದಾನೆ. ಇವನು ರಚಿಸಿದ ಶಾಂತಿ ಪುರಾಣದ ಸಹಸ್ರ ಪ್ರತಿಗಳನ್ನು ಮಾಡಿಸಿ ಭಕ್ತರಿಗೆ ಹಂಚಿ ಅತ್ತಿಮಬ್ಬೆ ದಾನಚಿಂತಾಮಣಿಯಾದಳು. ಈ ವಿಚಾರಗಳನ್ನೆಲ್ಲ ಹಂಪನಾ ಚೆನ್ನಾಗಿ ನಿರೂಪಿಸಿದ್ದಾರೆ. ಅಸಗನು ಸಂಸ್ಕೃತದಲ್ಲಿ ರಚಿಸಿದ್ದ ಶಾಂತಿಪುರಾಣಕ್ಕೆ ಪೊನ್ನ ಋಣಿಯಾಗಿದ್ದಾನೆ ಎಂಬುದನ್ನು ತಿಳಿಸಿದ್ದಾರೆ.

ಚಾಲುಕ್ಯ ಚಕ್ರವರ್ತಿ ರೈಲಪನು (973 – 997) ರನ್ನನಿಗೆ ಕವಿಚಕ್ರವರ್ತಿ ಎಂಬ ಬಿರುದನ್ನು ನೀಡಿ ಗೌರವಿಸಿದನು. ಅತ್ತಿಮಬ್ಬೆ ರನ್ನನಲ್ಲಿ ಅಭಿಮಾನವನ್ನಿಟ್ಟು ಪ್ರೋತ್ಸಾಹಿಸಿದಳು. ರನ್ನನು ಅಜಿತತೀರ್ಥಂಕರ ಪುರಾಣ ತಿಲಕದಲ್ಲಿ ಅತ್ತಿಮಬ್ಬೆಗೆ ಕೃತಜ್ಞತಾಪೂರ್ವಕ ಗೌರವವನ್ನು ಅರ್ಪಿಸಿದ್ದಾನೆ. ಈ ಭಾಗವನ್ನು ಡಾ. ಡಿ.ಆರ್. ಶಶಿಧರ ಇಂಗ್ಲೀಷಿಗೆ ಅನುವಾದ ಮಾಡಿಕೊಟ್ಟಿದ್ದಾರೆ. (ಎರಡನೆಯ ಸಂಪು ಪು. 278–282) ಹೀಗೆಯೇ ಈ ಸಂಪುಟದಲ್ಲಿ ಕನ್ನಡದ ಮಹಾಕವಿಗಳಾದ ದುರ್ಗಸಿಂಹ, ನಾಗವರ್ಮ, ನಾಗಚಂದ್ರ ಮುಂತಾದವರ ಪಾಂಡಿತ್ಯ ಪೂರ್ಣ ವಿಮರ್ಶೆಯಿದೆ.

ಮೂರನೆಯ ಸಂಪುಟದಲ್ಲಿ ಹನ್ನೆರಡನೆಯ ಶತಮಾನದಿಂದ ಈಚೆಗೆ ಬೆಳಗಿದ ನೇಮಿಚಂದ್ರ (1140 – 1190 ಸಿಇ) ಮುಂತಾದ ಕವಿವರೇಣ್ಯರ ವಿಮರ್ಶಾತ್ಮಕ ಪರಿಚಯವಿದೆ. "ಕರ್ನಾಟಕ ಕೃತಿಗೆ ನೇಮಿಜನ್ನ ಮರೀಚ್ವರೆ ಸೀಮಾಪುರುಷರ್" ಎಂಬ ಮಧುರ ಕವಿಯ ಮಾತಿನಿಂದ ಆರಂಭವಾಗುವ ಸಂಪುಟ ಅನೇಕ ಕವಿಗಳ ಮತ್ತು ಕೃತಿಗಳ ನಿಮರ್ಶೆಯನ್ನು ಮಾಡಿದೆ. ನೇಮಿಚಂದ್ರ ಪ್ರಾಕೃತ ಭಾಷಾಪ್ರಿಯ. ಅವನ ಲೀಲಾವತೀ ಪ್ರಬಂಧದ ಮೂಲಸ್ಫೂರ್ತಿ ಕೌಹಲನ ಲೀಲಾವಈ ಎಂಬ ಪ್ರಾಕೃತ ಕಾವ್ಯ ಎಂದು ಹಂಪನಾ ಸೂಚಿಸಿದ್ದ ಜನ್ನ ಅಥವಾ ಜನಾರ್ಧನ ದೇವ (1160–1240) ಅನುಭವ ಮುಕುರ, ಯಶೋಧರ ಚರಿತೆ, ಅನಂತನಾಥ ಪುರಾಣಗಳಿಂದ ಪ್ರಸಿದ್ಧನಾಗಿ ದ್ದಾನೆ. ಹದಿನಾರನೆಯ ಶತಮಾನದ ಮಹಾಕವಿರತ್ನಾಕರ ವರ್ಣಿಯನ್ನು ವರ್ಣಿಸಲು ಪದಗಳು ಸಾಲವು. ಅವನನ್ನು ಹಂಪನಾ A prolific writer, rationalist and a radical thinker ಎಂದು ಕರೆದಿದ್ದಾರೆ. ಶತಕಗಳ ಬಗೆಗೆ ಹೇಳುವಾಗ ಅವರ ಮಾತು – The Shatakas of Harihara are poetic, of Moggeya Mayidera are philosophical and of Puligere Somanatha are ethical.

ಈ ವಿಭಾಗದ ಕೊನೆಯ ಪರಿಚ್ಛೇದದಲ್ಲಿ ಹಂಪನಾ ಹೇಳಿರುವುದು ಇಷ್ಟು, ಕನ್ನಡ ಸಾಹಿತ್ಯದ ವೈಭವವು ಎಲ್ಲ ಧರ್ಮಗಳ ಲೇಖಕರ ಒಟ್ಟು ಕೊಡುಗೆಯನ್ನೊಳಗೊಂಡಿದೆ. ಮಹಾಕವಿಗಳು ಮಹತ್ತ್ವವನ್ನು ಪಡೆದಿರುವುದು ಅವರ ಮತ–ಧರ್ಮದಿಂದಲ್ಲ, ಅವರು ದೊಡ್ಡ ಸ್ಥಾನವನ್ನು ಪಡೆದುದು ಅವರ ಸೃಷ್ಟ್ಯಾತ್ಮಕ ಪ್ರತಿಭೆಯಿಂದಲೇ. ಪಂಪ, ಜನ್ನ, ರುದ್ರಭಟ್ಟ, ಹರಿಹರ, ರಾಘವಾಂಕ, ಕುಮಾರವ್ಯಾಸ, ಲಕ್ಷ್ಮೀಶ, ರತ್ನಾಕರವರ್ಣಿ ಇವರೆಲ್ಲ ಸೀಮಾತೀತರು, ಎಲ್ಲಾ ಯುಗಗಳಿಗೂ ಸೇರಿದವರು.

ನಾಲ್ಕನೆಯ ಸಂಪುಟವನ್ನು, ಹಂಪನಾ ಕನ್ನಡ ಸಾಹಿತ್ಯದ ಮೇಲೆ ಪ್ರಭಾವವನ್ನು ಬೀರಿದ ಸಂಸ್ಕೃತ, ಪ್ರಾಕೃತ, ಅಪಭ್ರಂಶ ಸಾಹಿತ್ಯಗಳ ಅವಲೋಕನಕ್ಕಾಗಿ ತೆಗೆದಿರಿಸಿದ್ದಾರೆ. ಆದಿಕವಿ ಪಂಪನು ಅರಿಕೇಸರಿಯ ಆಸ್ಥಾನದಲ್ಲಿದ್ದಾಗ ಅಲ್ಲಿಯೇ ಇದ್ದ ಸೋಮದೇವ ಸೂರಿ ಯಶಸ್ತಿಲಕ ಚಂಪೂವನ್ನು ಸಂಸ್ಕೃತದಲ್ಲಿ ರಚಿಸಿದನು. ಆ ಚಂಪೂ ಸಂಸ್ಕೃತದ ಶ್ರೇಷ್ಠ ಕವಿ. ಅಂತಹ ಸಂದರ್ಭದಲ್ಲಿ ಒಬ್ಬರ ಪ್ರಭಾವ ಇನ್ನೊಬ್ಬರ ಮೇಲೆ ಬೀಳದಿರುವುದು ಸಾಧ್ಯವೇ? ಕರ್ನಾಟಕ ಆಗ ಕನ್ನಡ, ಸಂಸ್ಕೃತ, ಪ್ರಾಕೃತ ಎಂಬ ಮೂರು ಸಾಹಿತ್ಯಗಳ ನಿರ್ಮಾಣವನ್ನು ಕಂಡ ಕಮ್ಮಟವಾಗಿತ್ತು.

ಆದಿಯಲ್ಲಿ ಜೈನರು ಪ್ರಾಕೃತವನ್ನೇ ಬಳಸಿದರೂ ಅಖಿಲ ದೇಶ ವ್ಯಾಪ್ತಿಗಾಗಿ ಸಂಸ್ಕೃತವನ್ನು ಅಳವಡಿಸಿಕೊಂಡರು. ಇದರಲ್ಲಿ ಉಮಾಸ್ವಾತಿ ಮತ್ತು ಸಿದ್ಧಸೇನ ದಿವಾಕರರು ಮುಖ್ಯ ಪಾತ್ರ ವಹಿಸಿದರು ಎಂಬುದನ್ನು ಹಂಪನಾ ನಿರೂಪಿಸಿದ್ದಾರೆ. ಕ್ರಿ.ಶ. 634ರಲ್ಲಿ ರಚಿತವಾದ ರವಿಕೀರ್ತಿ ಪ್ರಕಾಶನವು ಅತ್ಯುತ್ತಮ ಸಂಸ್ಕೃತದಲ್ಲಿದ್ದು ಕಾಳಿದಾಸ ಭಾರವಿಗಳನ್ನು ಹೆಸರಿಟ್ಟು ಉಲ್ಲೇಖಿಸಿರುವ ಪ್ರಾಚೀನತಮ ಶಾಸನ ಆಗಿದೆ.

ಆರನೆಯ ಶತಮಾನದಲ್ಲಿದ್ದ ಮಹಾಮೇಧಾವಿ ದೇವನಂದಿ ಅಥವಾ ಪೂಜ್ಯಪಾದನಿಂದ ರಚಿತ ವಾದ ಗ್ರಂಥಗಳು ಶಾರದೆಯ ಭಂಡಾರದಂತಿವೆ. ವ್ಯಾಕರಣ, ಆಯುರ್ವೇದ, ದರ್ಶನ ಮುಂತಾದ ಶಾಖೆಗಳಲ್ಲಿ ಅವು ಪಸರಿಸಿವೆ ಗಂಗರಸ ದುರ್ವಿನೀತ, ದ್ವಿಸಂಧಾನ ಕಾವ್ಯವನ್ನು ಬರೆದ ಧನಂಜಯ, ಭಟ್ಟಾಕಲಂಕದೇವ–ಒಬ್ಬರೇ ಇಬ್ಬರೇ, ಇವರು ಕರ್ನಾಟಕಕ್ಕೆ ಮಾತ್ರವಲ್ಲ, ಸಮಸ್ತ ಭಾರತಕ್ಕೆ ಪೂಜ್ಯರು. ಪೂರ್ವ ಪುರಾಣವನ್ನು ಬರೆದ ಜಿನಸೇನರು ಆದಿಪಂಪನಿಗೂ ಉಪಜೀವ್ಯರು. ಉಭಯ ಭಾಷಾ ನಿಪುಣ ಅಸಗ ಕರ್ನಾಟಕ ಕುಮಾರ ಸಂಭವವನ್ನು ರಚಿಸಿದ್ದನು. ಸಂಸ್ಕೃತದಲ್ಲಿ ಎಂಟು ಕೃತಿಗಳು ಇವನದು ಇದ್ದು ವೆಂದು ಹೇಳಲಾಗಿದೆ.

ಕೊನೆಯದಾದ ಐದನೆಯ ಸಂಪುಟದಲ್ಲಿ ಗಮನವನ್ನು ಶಾಸನಗಳ ಮೇಲೆ ಕೇಂದ್ರೀಕರಿಸಲಾಗಿದೆ. ಹಲ್ಮಿಡಿ ಶಾಸನದಿಂದ ಆರಂಭಿಸಿ ಅನೇಕ ಶಾಸನ ಗಳನ್ನು ಅಧ್ಯಯನ ಮಾಡಿ ಹಂಪನಾ ವಿಷಯಗಳ ಪ್ರತಿಪಾದನೆ ಮಾಡಿದ್ದಾರೆ. ಇದಕ್ಕಾಗಿ ಪ್ರಾಚೀನ ಪಂಡಿತರ ಸಂಶೋಧನೆಗಳನ್ನು ಅವರು ಬಳಸಿಕೊಂಡಿದ್ದಾರೆ. ವಿಶ್ವ ವೇದಿಕೆಗಳಲ್ಲಿ ಕನ್ನಡದ ಹಿರಿಮೆಯನ್ನು ಪ್ರಶಂಸಿಸಿರುವ ಶೆಲ್ಡನ್ ಪೊಲಕ್ ಅವರ Language of the Gods in the world of Men ಎಂಬ ಪುಸ್ತಕದ ಸವಿಮರ್ಶೆ ವಿವೇಚನೆಯನ್ನು ಹಂಪನಾ ಮಾಡಿದ್ದಾರೆ. ಅದರಲ್ಲಿ ಕಂಡು ಬರುವ ಲೋಪ ದೋಷಗಳನ್ನೂ ತೋರಿಸಿದ್ದಾರೆ.

ಕನ್ನಡ ಸಾಹಿತ್ಯ ಚರಿತ್ರೆಯನ್ನು ಅಭ್ಯಸಿಸುವ ಎಲ್ಲರೂ ಗಮನಿಸಬೇಕಾದ ಅಂಶಗಳನ್ನು ಒಳಗೊಂಡಿರುವ ಈ ಗ್ರಂಥವನ್ನು ರಚಿಸಿ ಹಂಪನಾ ವಂದನೀಯರಾಗಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

WANTED LAB TECHNICIAN
with at least 5 years experience, should be a Diploma / Degree holder of Lab Technicians Course. Interested can contact :
Mob: 8123804048
Location: Mysore

SITES FOR SALE
20x30 - 12.60 Lakhs
30x40 - 25.20 Lakhs
Bank Loan upto 75%, Ready for Registration, Near Gurur Bus Stop, Ramabainagar, Mysore, DTCP approved, (Corporation Limits) 1.5 kms from J P Nagar Ring Road.
8660105902

BUNGALOW FOR SALE
50x80 MUDA Allotted
N/F Site, E/F Door, 4 BHK Duplex Furnished, 3 Car Parking with Garden, 60 ft Road, Full Teak, Marble flooring with Modern amenities at Gokulam 3rd Stage. Prime Location, Rs.4.75 Cr. Brokers Excuse.
8660105902

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
7829668666

ನಿಮ್ಮ ಕಾರಿನ ಮೇಲೆ ಹಣ ಬೇಕೆ?
ನಿಮ್ಮ ಕಾರಿನ ಮೇಲೆ ಹಣ ಸಾಲ ಬೇಕೆ? ಅಥವಾ ಮಾರಾಟ ಮಾಡಬೇಕೆ? ಅಥವಾ ಸೆಕೆಂಡ್ಸ್ ಕಾರ್ ಬೇಕೆ? ಸಂಪರ್ಕಿಸಿ.
8884848773

ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ – ಯುವತಿಯರು ಬೇಕಾಗಿದ್ದಾರೆ. Salary: 13,000 - 21,000 + ESI, PF, ವಿದ್ಯಾರ್ಹತೆ: 10th, PUC, ITI, Diploma and Any Degree, ಇಂದೇ ಸಂಪರ್ಕಿಸಿ:
9035734821

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದ ಕಂಪನಿ ಒಂದಕ್ಕೆ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ತಕ್ಷಣ ಬೇಕಾಗಿದ್ದಾರೆ. ESI, PF ಸೌಲಭ್ಯ ಇರುತ್ತದೆ. 8 Hour ಪಾಳಿಯಲ್ಲಿ 26 ದಿನಕ್ಕೆ ಶಾಸನ ಬದ್ಧ ಸಂಬಳ ದೊರೆಯುತ್ತದೆ.
SRF Security Service (Pvt., Ltd)
#46, HIG - G.4, K.H.B, Hootagalli, Mysore ಸರಸ್ವತಿ ಕನ್ವೆನ್ಷನ್ ಹಾಲ್ ಹಿಂಭಾಗ
9900066478 / 9900066284
0821-2001661

ಬೇಕಾಗಿದ್ದಾರೆ
SSLC, PUC, ITI, JOC, Dip, Any Degree, MBA ಆದಂತಹ 97 ಅಭ್ಯರ್ಥಿಗಳನ್ನು "Action World Group" of ಕಂಪನಿಯೊಂದಕ್ಕೆ Direct Oppointment ಮಾಡಿಕೊಳ್ಳಲಾಗುತ್ತಿದೆ. ವಯೋಮಿತಿ– 18 to 39 years, ತಿಂಗಳಿಗೆ: 27000-34000(ಉಚಿತ ವಸತಿ +Incentives)
8494828606
9663481922

PART TIME WORK
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ
ಕೆಲಸ / JOB
ವಾರದ ಸಂಬಳ 3000/– ರಿಂದ 5000/– ಮೇಲ್ಪಟ್ಟು ಕೊರಿಯರ್ ಸೌಲಭ್ಯವಿದೆ.
9743217566
9108418233

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಶೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

Gem Selections
(A Part of Khanna Gems Group)
100% Natural Govt. Lab Certified Gemstones
ಶೇಕಡಾ 100 ರಷ್ಟು ನೈಸರ್ಗಿಕ ಸರ್ಕಾರಿ ಪ್ರಯೋಗಾಲಯದಿಂದ ಪ್ರಮಾಣಿಕೃತ ರತ್ನದ ಹರಳುಗಳು ದೊರೆಯುತ್ತವೆ.
HIG-3, Near Akshaya Bhandar, New Kantharaju Urs Rd. Kuvempu Nagar, Mysuru, Karnataka-570023
8152066999

ಶ್ರೀ ಗೌರಿಶಂಕರ ಟ್ರಾವೆಲ್ಸ್
12/8/22 (7/11 ದಿನ): ಅಂಯೋಧ್ಯ, ಕಾಶಿ, ಪ್ರಯಾಗ್‌ರಾಜ್, ಗಯಾ, ಬುದ್ಧಗಯಾ ಇತ್ಯಾದಿ.
8/10/22 (14/18 ದಿನ) : ಗಂಗೋತ್ರಿ, ಯಮುನೋತ್ರಿ, ಕೇದಾರ್‌ನಾಥ್, ಬದರಿನಾಥ್, ಹರಿದ್ವಾರ್, ದೆಹಲಿ ಇತ್ಯಾದಿ
(ವಿಮಾನ ಟ್ರೈನ್ ಮತ್ತು ಎ.ಸಿ. ಬಸ್ಸು)
ಊಟ, ವಸತಿ ಸೇರಿರುತ್ತದೆ.
9620002114



V-GUARD GEYSER
BEST OFFER PRIZE
Solar Water Heater SALES & SERVICE
SUNZONE SOLAR SYSTEM
VM Double Road, Kuvempunagar, Mysuru
9845175443

ROOMS FOR RENT
Sharing Accomodation avaliable for Rent, Location: Near Sterling Talkies, Vidyaranyapuram. Contact by Messaging on whatsapp
9676887643

ಒರಿಜಿನಲ್ ಪ್ರತಿ ಕಳೆದಿರುವ ಬಗ್ಗೆ
ಶಿವು.ಎಂ ಆದ ನಾನು ದಿನಾಂಕ: 28/06/22 ರಂದು ಖಾಸಗಿ ಬಸ್‌ನಲ್ಲಿ ಸಿಟಿ ಬಸ್ ನಿಲ್ದಾಣದಿಂದ ಜೆ.ಪಿ.ನಗರಕ್ಕೆ ಚಲಿಸುವೇಕಾದರೆ ನನ್ನ (ಶಿವು) ಮತ್ತು ನನ್ನ ಸಹೋದರಿ (ಮೀನಾಕ್ಷಿ) ಹೆಸರಿನಲ್ಲಿದ್ದ ದಾನಪತ್ರವು ನಂಬರ್ MYN-1-07007-2016-17 ಆಗಿ ಸಿಡಿ ನಂಬರ್ MYND409 ನೇದ್ದರಲ್ಲಿ ದಿನಾಂಕ:25–1–2017 ರುದು ನೋಂದಾಯಿಸಲಾಗಿದ್ದು ಕಳೆದಿದೆ ಯಾರಿಗಾದರೂ ಸಿಕ್ಕಿದ್ದಲ್ಲಿ 7 ದಿನದ ಒಳಗೆ ನನ್ನ ಈ ವಿಳಾಸಕ್ಕೆ ತಲುಪಿಸತಕ್ಕದ್ದು. ರಾಮಚಂದ್ರ– 9448773612, #1134, SBI Building, Ballal Circle, Chamarajapurm, Mysore - 570005

S.M GOLD
ಗಿರವಿ ಚಿನ್ನಾಭರಣ ಖರೀದಿ
ಯಾವುದೇ ಕಾರಣಕ್ಕೂ ಮೋಸದ ಜಾಹಿರಾತನ್ನು ನೋಡಿ ಮೋಸ ಹೋಗಬೇಡಿ, ಚಿನ್ನದ ಬೆಲೆಯ ಬಗ್ಗೆ ಸರಿಯಾದ ಮಾಹಿತಿ ಬೇಕೆಂದರೆ ನಮ್ಮ ನಂಬರ್‌ಗೆ ಕರೆ ಮಾಡಿ. ಒಳ್ಳೆ ಬೆಲೆಗೆ ನಿಮ್ಮ ಅಡವಿಟ್ಟ ಚಿನ್ನವನ್ನು ನಾವೇ ನಮ್ಮ ಕಂಪನಿಯ ಹಣದಿಂದ ಬಿಡಿಸಿ ಖರೀದಿಸುತ್ತೇವೆ. ಕೂಡಲೇ ಸಂಪರ್ಕಿಸಿ–(T&C)
8050518881

WANTED
1. Accountant (Tally Trained)
2. Designer & DTP Operator Fresher & Experienced
3. Printing machine helpers
4. Helper Boys
9448067939 9739569260

Personal Loan
For Salaried (ROI - 1% Less, if already having)
& Business Loan
99454 14974

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ವಯಸ್ಸು: 18 ರಿಂದ 30 ವರ್ಷ. ವಿದ್ಯಾರ್ಹತೆ: 7ನೇ ತರಗತಿಯಿಂದ PUC, ITI ಮತ್ತು Diploma (Mechanical). PF ಮತ್ತು ESI ಸೌಲಭ್ಯವಿರುತ್ತದೆ. ಉಚಿತ ಊಟ ಮತ್ತು ರಿಯಾಯಿತಿ ದರದಲ್ಲಿ ವಸತಿ ಸೌಲಭ್ಯವಿರುತ್ತದೆ. (ಯಾವುದೇ ಶುಲ್ಕವಿರುವುದಿಲ್ಲ). ಸಂಪರ್ಕಿಸಿ:
Mob: 9035381989

SDJ JEWELERS
ಪುರುಷರು ಮತ್ತು ಮಹಿಳೆಯರು Tele Callers ಮತ್ತು Sales Executive ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000
8884304444

ತಕ್ಷಣ ಬೇಕಾಗಿದ್ದಾರೆ
ವಯಸ್ಸಾದವರನ್ನು, ರೋಗಿಗಳನ್ನು ನೋಡಿಕೊಳ್ಳಲು ಅನುಭವವಿರುವ / ಇಲ್ಲದಿರುವ ಯುವಕ, ಯುವತಿಯರು, ಮಹಿಳೆಯರು, ವಿಧವೆಯರು, ವಿಚ್ಛೇದಿತೆಯರು ತಕ್ಷಣ ಸಂಪರ್ಕಿಸಿ. ಮೊದಲು ಬಂದವರಿಗೆ ಆದ್ಯತೆ. (ಸರ್ಕಾರಿ ನೊಂದಾಯಿತ ಸಂಸ್ಥೆ)
9035113222 / 9513203333

FOR SALE
30x40 Duplex Vijayanagar 2nd Stage
9741628964

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

We are Hiring!

SERVICE ADVISOR
TELE CALLING
DIRECT MARKETING
WATER WASH
ACCOUNTANT (WITH TALLY)
INTERVIEW ON SATURDAY 09.07.2022
JOIN OUR TEAM
+91 8970353332 | 9148572010
No. 237/3, M.G.Koppal, Vijay Nagar Main Rd, Near Abhishek Circle, Hebbal 2rd Stage, Mysuru | Karnataka - 570016

Join ASFT Fashion Design Courses
* Certification Course
* Diploma Course
* Advance Diploma Course
Alpha School of Fashion Technology & Interior Design
AT: SRIRAMPURA, GOKULAM, UDAYAGIRI, MYSORE
Mob: 7829937469, 9901803394

ಸೋಲಾರ್ ವಾಟರ್ ಹೀಟರ್ Solar Water Heater

ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

FOR SALE
Sriramapura 2nd Stage, BEML 30x20 New Duplex Hose for Sale
9900251194 / 9611537157

ಮನೆ ಸಾಲ
ಜನಮಿತ್ರ ಫಿನ್ ಸರ್ವ್ ಪ್ರೈ.ಲಿ.
2921/ಎ, ಸರಸ್ವತಿಪುರಂ, ಮೈಸೂರು
11B, 9&11A ಖಾತಾಗಳಿಗೂ ಮುಡಾ & ಕಾರ್ಪೊರೇಷನ್ ಖಾತೆ ಇದ್ದರು, ಇಲ್ಲದಿದ್ದರೂ ಹಾಗೂ 15,000 ಮೇಲ್ಪಟ್ಟು ಸಂಬಳ ಇರುವವರಿಗೆ ಪರ್ಸನಲ್ ಲೋನ್ ಹಾಗೂ ಇಂಡಸ್ಟ್ರಿಯಲ್ ಮಾರ್ಟ್‌ಗೇಜ್ ಲೋನ್ ಸೌಲಭ್ಯ ದೊರೆಯುತ್ತದೆ. ಸಂಪರ್ಕಿಸಿ.
8088647887

ಬೇಕಾಗಿದ್ದಾರೆ
ಕರ್ನಾಟಕದಾದ್ಯಂತ ಕಂಪನಿ ಹಾಗೂ ಆಫೀಸ್ ವರ್ಕ್‌ಗಳಿಗೆ ಯುವಕ, ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ, ವೇತನ+ಓ.ಟಿ, 18,000 ರಿಂದ 30,000 (ESI+PF)
9513330919
9513330920

LOST
I, Prakash Nelogal, No. 376, 1st Phase, 4th Stage, Vijayanagar, Mysore-570 018, have lost my son's "Diploma in Tool & Dye making" original course certificate of year July 2001, Holder Name Mr. Prashanth. P.
Finders please contact
Mob: 9731563688

ಬೋಳು ತಲೆಯ ಸಮಸ್ಯೆಯೇ?


ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Aniketana Road, kuvempunagar, Mysuru
MYSURU 9611028523 MANGALORE 9343142258

ಬೇವಿನ ಹಿಂಡಿ
ಉತ್ತಮ ದರ್ಜೆಯ ಪರಿಶುದ್ಧವಾದ ಗಾಣದ ಬೇವಿನ ಹಿಂಡಿ (COLD PRESSED) ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ.
ಶ್ರೀ ಕಾಮಾಕ್ಷಿ ಬಯೋ – ನೀಮ್
ನಂ.203, ಬನ್ನಿಮಂಟಪ ಬಡಾವಣೆ, ಮೈಸೂರು – 570015
8088887802

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ
7795560970

ಸೈಟುಗಳು ಮಾರಾಟಕ್ಕಿವೆ
30x40, 30x50, 40x60
ಮೈಸೂರಿನಲ್ಲಿ ಕೇವಲ 99 ಸಾವಿರ ಮುಂಗಡ ಹಣಕಟ್ಟಿ, ಪ್ರತಿ ತಿಂಗಳು 5 ಸಾವಿರದಂತೆ ಕಂತು ಕಟ್ಟಿ ಸೈಟುಗಳನ್ನು ನಿಮ್ಮದಾಗಿಸಿಕೊಳ್ಳಿ. ಮೈಸೂರಿನ Airport ಹತ್ತಿರ
6360955865
7406041847

LOAN
(5 ಲಕ್ಷದಿಂದ 100 ಲಕ್ಷದವರೆಗೆ) ಟಿ.ನರಸೀಪುರ ತಾಲ್ಲೂಕು ಹಾಗೂ ಮೈಸೂರು ಜಿಲ್ಲೆಯ ಎಲ್ಲಾ Business ಗಳಿಗೆ Stand Up Loan, Mudra Loan, Business Loan, Agricultural Loan, Farm (ಕೋಳಿ, ಕುರಿ, ಹೈನುಗಾರಿಕೆ ಹಾಗೂ ಹಂದಿ Farm ಗೆ) 20 ರಿಂದ 30% ಗೆ Subsidy Loan ಮಾಡಿಸಿಕೊಡಲಾಗುವುದು. ಎಲ್ಲಾ Project and Business documents ಅನ್ನು ಮಾಡಿಸಿಕೊಡಲಾಗುವುದು. ಮಹಿಳೆಯರಿಗೆ SC, ST ಗೆ ಮೊದಲ ಆದ್ಯತೆ. ಸಂಪರ್ಕಿಸಿ.
9591319191

30x40 S/F ಸೈಟು @ Rs.15 ಲಕ್ಷ
MUDA Approved Layout
ತಕ್ಷಣ ನೋಂದಣಿ / ಬ್ಯಾಂಕ್ ಲೋನ್ ಲಭ್ಯ. ಚಾಮುಂಡಿ ಬೆಟ್ಟದ ಹಿಂಭಾಗ, ಲಾಲ್ ಬಹದ್ದೂರ್ ಶಾಸ್ತ್ರಿನಗರ, ನಂತರ
9538583377

20x30 ಹೊಸ ಮನೆ–36 ಲಕ್ಷ
30x40 ಹಳೆ ಮನೆ–75 ಲಕ್ಷ
30x40 ಡುಪ್ಲೆಕ್ಸ್ ಮನೆ–88 ಲಕ್ಷ
20x30 ಡುಪ್ಲೆಕ್ಸ್ ಮನೆ–58 ಲಕ್ಷ
ಸೈಟು ಹಳೆ ಮನೆ, ಹೊಸಮನೆ ಮಾರುವವರು, ಕೊಳ್ಳುವವರು. ಸಂಪರ್ಕಿಸಿ
8618495118

WANTED
Office Work: Female Candidate with Basic Computer Knowledge. Min. Qualification: PUC (Pass / Fail) (Two Wheeler Driving knowledge Must) Location: Agrahara, Mysore.
9606062114

ತಕ್ಷಣವೇ ಬೇಕಾಗಿದ್ದಾರೆ
ಪ್ರತಿಷ್ಠಿತ ಫೈನಾನ್ಸ್ ಕಂಪನಿಯಲ್ಲಿ ಕೆಲಸ ಮಾಡಲು ಹುಡುಗ, ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ. ಹುದ್ದೆ:– 1) ಸೇಲ್ಸ್ ಮ್ಯಾನೇಜರ್ (ಪ್ರತಿ ತಾಲ್ಲೂಕು & ಜಿಲ್ಲೆ) 2) ಟೆಲಿಸೇಲ್ಸ್ ಎಕ್ಸಿಕ್ಯೂಟಿವ್, ಅನುಭವ: Fresher or Experience, ಸಂಬಳ: ಆಕರ್ಷಕ ಸಂಬಳ ಜೊತೆಗೆ ಇನ್ಸೆಂಟಿವ್ (Incentive), ವಿದ್ಯಾರ್ಹತೆ: SSLC to any ಡಿಗ್ರಿ ಇಂಟರ್‌ವ್ಯೂ ದಿನಾಂಕ: 07/07/22 & 08/07/22
8050923846 / 08214255550

WANTED
Computer Operator - (1/2 Year Exp)
A Reputed CSC Centre at Siddartha Nagar, Mysore, Looking for Dynamic personal for Data entry, PAN Card and Aadhar Card Corrections and Government related documentation work, Salary is in par with Industrial Standards.
9008027304 / 9008027308

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗ / ಹುಡುಗಿಯರು ಬೇಕಾಗಿದ್ದಾರೆ.
Age: 18 ರಿಂದ 40 ವರ್ಷ.
Qualn: 7th, 10th, ITI, Dip, Any Degree pass / fail.
9731271804

ಬೈಕ್ ರೈಡರ್ ಬೇಕಾಗಿದ್ದಾರೆ
ರಾಪಿಡೋ ರೈಡರ್ ಆಗಿ ಸೇರಿ ಹಾಗೂ ದಿನಕ್ಕೆ 1500/- ವರೆಗೂ ಸಂಪಾದಿಸಿ. ಅಗತ್ಯ ದಾಖಲೆಗಳು DL, ವಾಹನದ ದಾಖಲೆಗಳು ಮತ್ತು ಆಧಾರ್. ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ.
04045209698

ವಾಟರ್ ಪ್ರೂಫ್, ಮನೆ ರಿಪೇರಿ, 2D, 3D Plan, ಮತ್ತು ಸೆಂಟ್ರಿಂಗ್ ಮಾಡಿಕೊಡಲಾಗುವುದು.
ಸಂಪರ್ಕಿಸಿ: ಶಿವು
9108145181
8660845597

ಲೀಲಾ ಕನ್ವೆನ್ಷನ್ ಸೆಂಟರ್
ಮದುವೆ, ನಿಶ್ಚಿತಾರ್ಥ, ಜನ್ಮದಿನ ನಾಮಕರಣ ಹಾಗೂ ಇನ್ನಿತರ ಶುಭಸಮಾರಂಭಗಳಿಗೆ ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್, ಡಿಸೆಂಬರ್‌ಗೆ ಸಂಪರ್ಕಿಸಿ:
9448572056
9886551940

FREE LAPTOP
Exclusive Offer from "Diliber Foundation" (Mysore) Learn Laptop Repair/ Maintenance / Troubleshooting Course.
GET INTEL CORE-i3 LAPTOP FREE
Training with 100% Job assistance. contact:
9663579654 / 9902955544

ಜಮೀನು ಮಾರಾಟಕ್ಕಿದೆ
ಗದ್ದಿಗೆ ಮುಖ್ಯ ರಸ್ತೆಯಲ್ಲಿ ಮುದ್ದಯನಹುಂಡಿ ಗ್ರಾಮದಲ್ಲಿ 3 ಎಕರೆ, 4 ಗುಂಟೆ ತೆಂಗಿನತೋಟ ಮಾವಿನ ತೋಟ ಮಾರಾಟಕ್ಕಿದೆ.
8618848886
9945661696

ಜಮೀನು ಮಾರಾಟಕ್ಕಿದೆ
ಮೈಸೂರು ಹೆಚ್.ಡಿ.ಕೋಟೆ, ಮುಖ್ಯ ರಸ್ತೆಯಲ್ಲಿ 1 ಎಕರೆ 18 ಗುಂಟೆ ಹಾಗೂ ಅದೇ ಗ್ರಾಮದಲ್ಲಿ 19 ಗುಂಟೆ ಸುತ್ತಲು ಕಾಪೌಂಡ್ ಗೇಟ್ ತಂತಿ ಬೇಲಿ ಅಳವಡಿಸಲಾಗಿದೆ. ಪೂರ್ಣ ಅಬಿವೃದ್ಧಿ ಪಡಿಸಲಾಗಿದೆ.
9945661696
8618848886

WANTED TEACHERS
B.Sc., B.Ed., English Subject Primary School. Only ladies. Gurukula Academy, J.P. Nagar, Mysore. Contact
98861 42884

WANTED
Quantity Surveyor BE in Civil / Diploma. Female's only. Min 2-3 years exp. in construction work & Site Engineer Civil (Male) (with minimum 2-3 years of experience). Contact
7760135606, 7337888386
Call between 10 am to 6 pm
Mail your CV to: acpltd123@gmail.com

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160
6361056646

WANTED DTP OPERATOR
having good Kannada & English Typing skills Computer Knowledge Only for Female.
ಕಂಪ್ಯೂಟರ್ ಮತ್ತು ಡಿಟಿಪಿ ಆಪರೇಟರ್ ಬೇಕಾಗಿದ್ದಾರೆ. (ಕನ್ನಡ & ಇಂಗ್ಲೀಷ್ ಟೈಪಿಂಗ್ ಉತ್ತಮವಾಗಿ ತಿಳಿದಿರುವವರು)
8050473454 / 9945592228

JNB WORLD
ಗ್ಯಾಸ್ ಸ್ಟವ್, ಗ್ಯಾಸ್ ಗೀಸರ್, ಎಲೆಕ್ಟ್ರಿಕಲ್ ಚಿಮ್ನಿನಿ, ಹಾಬ್, ಸೇಲ್ಸ್ & ಸರ್ವೀಸ್‌ಗಾಗಿ ಸಂಪರ್ಕಿಸಿ.
ಮನೆಗಳಿಗೆ ಗ್ಯಾಸ್ ಲೈನಿಂಗ್ ಮಾಡಲಾಗುತ್ತದೆ.
9916168080 / 9731919195
ಯಾವುದೇ ರೀತಿಯ ಸರ್ವಿಸ್‌ಗೆ 1 ವರ್ಷದ ವಾರೆಂಟಿ ಇರುತ್ತದೆ.

ತಕ್ಷಣ ಸಂಪರ್ಕಿಸಿ
ಹೆಬ್ಬಾಳ್, ಹೂಟಗಳ್ಳಿ, ಮೇಟಗಳ್ಳಿ, ಸರಸ್ವತಿಪುರಂ, ನಂಜನಗೂಡು, ಎನ್.ಆರ್.ಮೊಹಲ್ಲಾ ಮುಂತಾದ ಏರಿಯಾಗಳಲ್ಲಿನ ಕಂಪನಿಗಳಿಗೆ, ಆಫೀಸ್‌ಗಳಿಗೆ, ಶೋ ರೂಂಗಳಿಗೆ ಕೆಲಸ ಮಾಡಲು ಯುವಕರ / ಯುವತಿಯರು ಬೇಕಾಗಿದ್ದಾರೆ. Any Qualification, ESI+PF+OT ಯೊಂದಿಗೆ, ಸಂಬಳ: 14,000/– to 36,000/–.
7892878915
9663704915

ಬೇಕಾಗಿದ್ದಾರೆ
ಮನೆ ಕೆಲಸಕ್ಕೆ ಲೇಡಿಸ್ ಬೇಕಾಗಿದ್ದಾರೆ. ಪಂಚಮುಖಿ ಗಣಪತಿ ದೇವಸ್ಥಾನದ ಹತ್ತಿರ, ಮಂಡಿ ಮೊಹಲ್ಲ, ಮೈಸೂರು ಸಂಪರ್ಕಿಸಿ:
9036890169
9380791511

KGN BUILDERS
Construct your Dream Home @ just 1,750/- per sq.ft. (G+2) Semi furnished.
7338226554

FOR SALE
1) 30x40 H.D. Kote Road.
2) 30x50 Sapthamatruke Layout, attach.
3) 40x60 Bannur Road, KBL Layout.
4) 30x40 House Raghavendra Nagar.
5) 30x40 Site and house J.P. Nagar.
Prakruthi Properties
9035990359, 9538690359

WANTED
NTT trained Teachers for Montessori School in Bogadi
9113257683

ಬೇಕಾಗಿದ್ದಾರೆ
Security Guards & Security Supervisor
Vidyaranyapuram, Lakshmipuram, J P Nagar Industrial Area, Hootagalli, Mysore Surroundings. ಸಂಪರ್ಕಿಸಿ:
9880056545 / 9620581899 / 9066540724
9886056545 / 9036321118

WANTED
We require Helpes, ITI Turner, Fitter and PUC, Commerce and B.Com fresh graduates and even failed Candidates can apply. Knowledge of tally and Computer
9035262498 / 9620480622
Address:- MYSTECH MACHINES #Q113, 4th Cross, 8th Main Hebbal Industrial Estate, Mysore - 570016

ಜಮೀನು, ಮನ ಮತ್ತು ಸೈಟು ಮಾರಾಟಕ್ಕಿದೆ
1) 1 ಎಕರೆ 4 ಗುಂಟೆ ಟಾರ್ ರಸ್ತೆಗೆ ಸೇರಿದಂತೆ 1.75 ಲಕ್ಷ ಒಂದು ಗುಂಟೆಗೆ, ಜಯಪುರ ಹೋಬಳಿ, ಮುರದಹಳ್ಳಿ ಗ್ರಾಮದ ಹತ್ತಿರ 12 km. 2) 15 ಗುಂಟೆ ವಸತಿ ಬಡಾವಣೆಗಳ ಮಧ್ಯ ಭಾಗದಲ್ಲಿ 4.50 ಲಕ್ಷ ಒಂದು ಗುಂಟೆಗೆ, ಜಯಪುರ ಹೋಬಳಿ, ಮುರದಹಳ್ಳಿ ಗ್ರಾಮದ ಹತ್ತಿರ 11 km. 3) 2 ಹಂತಸ್ತಿನ, 4 Rooms (Attached Bathroom), 2 Dinning Hall, Kitchen, Pooja Room ಉಳ್ಳ 20x30, ಮನೆ ಮಾರಾಟಕ್ಕಿದೆ. ಸ್ಥಳ: ಜೆ.ಪಿ.ನಗರ JSS Central School ಪಕ್ಕದಲ್ಲಿ 56 ಲಕ್ಷ. 4) ಹುಣಸೂರು ರಸ್ತೆ, ಇಲವಾಲಗೆ ಹೊಂದಿಕೊಂಡಂತೆ ನಿತ್ಯಾನಂದ ಬಡಾವಣೆಯಲ್ಲಿ ಮೈಸೂರಿನಿಂದ ಕೇವಲ 14 km ನಲ್ಲಿ 30x40 ಈಶಾನ್ಯ ಮುಖದ ಮೂಲೆ ನಿವೇಶನ ಮಾರಾಟಕ್ಕಿದೆ 28 ಲಕ್ಷ. ಈ ಕೂಡಲೇ ಕೊಳ್ಳಲು ಬಯಸುವವರು ಸಂಪರ್ಕಿಸಿ.
7996504996 / 9731673778

ಶ್ರೀ ರಾಮ್ ಟೂರ್
ಅದೃಷ್ಟಶಾಲಿ ಆದರೆ ಉಚಿತ ಪ್ರವಾಸ ವಿಮಾನದಲ್ಲಿ ಪಿತೃ ಪಕ್ಷ ಪ್ರಯುಕ್ತ ಗಯಾ, ಕಾಶಿ, ಪುರಿ 9/9/22 ರಿಂದ ಮತ್ತು ದಸರಾ ಪ್ರಯುಕ್ತ 29/9/22 ರಿಂದ ನೇಪಾಳ ಮುಕ್ತಿನಾಥ್ ಕಾಶಿ.
9108933383

SITES FOR SALE
DTCP and MUDA Approved Sites for sale.
9449089231

WANTED
Office Assistant / Accountant
MS Excel / Tally / GST Experience
Age 25 To 35 (Near Hebbal & Metagally)
House Keeping Supervisor / House Keeping
(Ladies & Gents) (Age 25 To 35 With Experience)
Security Guards / Field Supervisor
0821-4287049 / 9036745292

ನಿವೇಶನ ಮಾರಾಟಕ್ಕಿದೆ
ಬಿಳಿಕೆರೆಯಲ್ಲಿ 4200 ಚದರ ಅಡಿ ಅಳತೆಯಿರುವ ನಿವೇಶನ ಮಾರಾಟಕ್ಕಿದೆ. ಸಸ್ಯಹಾರಿಗಳು ಮಾತ್ರ. ಸಂಪರ್ಕಿಸಿ.
6364674533

ಬೇಕಾಗಿದ್ದಾರೆ
ನೂತನವಾಗಿ ಪ್ರಾರಂಭವಾಗಿರುವ ಸಸ್ಯಹಾರಿ ಹೋಟೆಲ್‌ಗೆ ಕೆಳಕಂಡ ಹುದ್ದೆಗಳಿಗೆ ಬೇಕಾಗಿದ್ದಾರೆ. ಮ್ಯಾನೇಜರ್ –1, ಸ್ಟೋರ್ ಮ್ಯಾನೇಜರ್–2, ಕಿಚನ್ ಸೂಪರ್‌ವೈಸರ್ –2, ಟೇಬಲ್ ಕ್ಲೀನರ್ –2, ಕಾಫಿ ಟೀ ಮೇಕರ್ಸ್ –2, ಜ್ಯೂಸ್ ಮೇಕರ್–1, ತಕ್ಷಣ ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ.
9986039421

PART TIME JOB
Timings 5 am to 8 am & 7 pm to 9pm Total 5 Hours, Salary Rs. 5000/-, Age above 18 years Males only. Kuvempunagar. Contact:
9845646800

ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರ ಕ್ಯಾಂಟೀನ್ ಅಡುಗೆ ಭಟ್ಟರು ಮತ್ತು Assistant Cooking Boy House Keeping ಮಹಿಳೆಯರು ಬೇಕಾಗಿದ್ದಾರೆ, ಮೈಸೂರು.
7829090366
8971662736

ಉಚಿತ ಉಚಿತ ಉಚಿತ
25Kg ಹಳೆಯ BT ರೈಸನ್ನು ಖರೀದಿಸಿದರೆ 5Kg ಬ್ರಾಂಡೆಡ್ ಗೋದಿಹಿಟ್ಟು, 2Kg ಸಕ್ಕರೆ, 1Kg ಫೈನ್ ತೊಗರಿಬೇಳೆ, ಅಥವಾ 2ಲೀ ಸನ್‌ಪ್ಯೂರ್ ಅಡುಗೆ ಎಣ್ಣೆ ಉಚಿತ
ಬೆಲೆ ರೂ 1350/-ಮಾತ್ರ (ಷರತ್ತು ಅನ್ವಯ)
ಸನ್‌ಶೈನ್ ಟ್ರೇಡರ್ಸ್, ಶಿವರಾಂಪೇಟೆಯ ಮೋರ್ ಹತ್ತಿರ
9206470833 ಮೈಸೂರು

ಗಾಯನ ಸ್ಪರ್ಧೆ
ಡಾ॥ ಶಿವರಾಜ್‌ಕುಮಾರ್ ರವರ 60ನೇ ವರ್ಷದ ಹುಟ್ಟುಹಬ್ಬದ ಪ್ರಯುಕ್ತ ಶಿವರಾಜ್ ಕಪ್
ತಾ॥ 10–07–2022. ಸಂಪರ್ಕಿಸಿ:
9902639553

ಮನೆ ಬಾಡಿಗೆಗೆ
30x40
ಡಬಲ್ ಬೆಡ್ ರೂಂ, ಅಟ್ಯಾಚ್ ಬಾತ್ ರೂಂ, ಕಾರು ಪಾರ್ಕಿಂಗ್. #1080, 3rd Stage, ಕೆಸರೆ, ಕಲ್ಪವೃಕ್ಷನಗರ.
9880753956 / 9880856696

ಮಂಜೂರಾತಿ ಹಾಗೂ ಸ್ವಾಧೀನ ಪತ್ರ ಕಳೆದಿದೆ
ದಿ. 28.06.2022 ರಂದು ಸೈಟ್ ನಂ. 350, ದೇವನೂರು ಬಡಾವಣೆ, 3ನೇ ಹಂತ, (40x60) ಅಡಿ. ಇದಕ್ಕೆ ಸಂಬಂಧಿಸಿದಂತೆ ಮಂಜೂರಾತಿ ಹಾಗೂ ಸ್ವಾಧೀನಪತ್ರ ಕಳೆದಿದೆ. ಯಾರಿಗಾದರೂ ಸಿಕ್ಕಲ್ಲಿ ಈ ನಂಬರ್‌ಗೆ ಸಂಪರ್ಕಿಸಿ.
8296793260

ಮಾಂತ್ರಿಕ ಕೇರಳ ಶ್ರೀ ಭಗವತಿ ಜೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ: 9731839596
ಇವರು ಕುಟ್ಟಿ ಚೇತನ್ ಮಾರ್ತಾಂಡ ದೇವಿ ಭಗವತಿ ಕಾಟೇರಿ ಪ್ರಯೋಗದಿಂದ, ಸ್ತ್ರೀ ಪುರುಷ ಪ್ರೇಮ, ವಿವಾಹ, ಸಂತಾನ, ದಾಂಪತ್ಯ ಸಮಸ್ಯೆ, ಶತ್ರು ಭಾಧೇ, ಪ್ರೇತಾ ಭಾದೇ, ಹಣದ ಸಮಸ್ಯೆ, ತನ್ನವರೇ ತನಗೆ ಶತ್ರು, ಕೌಟುಂಬಿಕ ಕಲಹ ನಿಮ್ಮ ಯಾವುದೇ ಸಮಸ್ಯೆಗಳಿಗೆ ಮಳಯಾಳಿ ಮಾಂತ್ರಿಕ ಶಕ್ತಿಯಿಂದ ತಕ್ಷಣ ಪರಿಹಾರ ಶತಸಿದ್ಧ.
ಖಾಯಂ ಮನೆ ವಿಳಾಸ: ಮನೆ ನಂ 68, ಸತ್ಯ ಮಾರ್ಗ, ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ.ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಕೊಳ್ಳೇಗಾಲ ಜ್ಯೋತಿಷ್ಯರು ನಂ. 01 ಮೋಡಿ ಮಾಂತ್ರಿಕರು
ಪಂ. ಎಸ್. ಕುಮಾರಸ್ವಾಮಿ
Mob: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರ ಶಕ್ತಿಯಿಂದ ಸ್ತ್ರೀ–ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಭಾಧೆ, ಆರೋಗ್ಯ, ಭೂಮಿ, ಕೋರ್ಟು, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಶಾಶ್ವತ ಪರಿಹಾರ ಶತಸಿದ್ಧ. ಕರೆ ಮಾಡಿ ಬನ್ನಿ.
ಖಾಯಂ ವಿಳಾಸ: ಎ.ಟಿ.ಎಂ. ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್), ಬಿ.ಎನ್. ರೋಡ್, ಕೆ.ಎಸ್.ಆರ್.ಟಿ.ಸಿ. ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು

ಮೈಸೂರು ಮಿತ್ರ 43 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

ಕೇಂದ್ರ ಸಚಿವ ಕ್ರಿಶನ್‌ಪಾಲ್ ಮಂಡ್ಯ ಜಿಲ್ಲಾ ಪ್ರವಾಸ

ಸಕಲ ಸಿದ್ಧತೆಗೆ ಸಚಿವ ಗೋಪಾಲಯ್ಯ ಸೂಚನೆ



ಮಂಡ್ಯ, ಜು.6(ಮೋಹನ್‌ರಾಜ್)– ಕೇಂದ್ರ ಸರ್ಕಾರದ ವಿದ್ಯುತ್ ಮತ್ತು ಭಾರೀ ಕೈಗಾರಿಕೆ ರಾಜ್ಯ ಸಚಿವ ಕ್ರಿಶನ್ ಪಾಲ್ ಗುರ್ಜರ್ ಜು. 8ರಂದು ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದು, ಯಾವುದೇ ಲೋಪ ಉಂಟಾಗದಂತೆ ಕಾರ್ಯಕ್ರಮ ಆಯೋಜಿಸಲು ಸಕಲ ಸಿದ್ಧತೆ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜು.8ರಂದು ನಿಮಿಷಾಂಬ ದೇವಸ್ಥಾನಕ್ಕೆ ಸಚಿವ ಕ್ರಿಶನ್ ಪಾಲ್ ಗುರ್ಜರ್ ಅವರು ಭೇಟಿ ನೀಡಿದ ನಂತರ ಬೆಳಗ್ಗೆ 11:30ಕ್ಕೆ ಡಾ.ಬಿ.ಆರ್ ಅಂಬೇಡ್ಕರ್ ಭವನದಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳ ಫಲಾನುಭವಿಗಳೊಂದಿಗೆ ಸಂವಾದ ನಡೆಸಲಿದ್ದಾರೆ. ಹಾಗಾಗಿ, ಮಂಡ್ಯ ತಾಲೂಕಿನ ಫಲಾನುಭವಿಗಳನ್ನು ಅಧಿಕಾರಿಗಳು ಡಾ.ಬಿ.ಆರ್.ಅಂಬೇಡ್ಕರ್ ಭವನಕ್ಕೆ ಕರೆದುಕೊಂಡು ಬರುವ ವ್ಯವಸ್ಥೆ ಮಾಡಬೇಕು. ಹಿಂದಿ, ಇಂಗ್ಲೀಷ್ ಭಾಷಾಂತರ ಮಾಡಲು ಉತ್ತಮ ಶಿಕ್ಷಕರನ್ನು ಆಯ್ಕೆ ಮಾಡಿ ಎಂದರು. ಜು.9ರಂದು ಬೆಳಗ್ಗೆ 10.30ರಿಂದ 11.30ರ ವರೆಗೆ ಕಾಲೇಜು ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮವನ್ನು ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಆಯೋಜಿಸಬೇಕು ಎಂದು ಸಲಹೆ ನೀಡಿದರು.

ಜು. 10ರಂದು ಬೆಳಗ್ಗೆ 9ಗಂಟೆಯಿಂದ 10 ಗಂಟೆಯವರೆಗೆ ಆಜಾದಿ ಕಾ ಅಮೃತ್ ಮಹೋತ್ಸವದ ಅಂಗವಾಗಿ ಸ್ವಚ್ಛತಾ ಕಾರ್ಯಕ್ರಮ ಹಾಗೂ ಶಾಲೆಗಳಲ್ಲಿ ಗಿಡ ನೆಡುವ ಕಾರ್ಯಕ್ರಮವನ್ನು ನಡೆಸಲಾಗುವುದು ಎಂದು ಜಿಲ್ಲಾಧಿಕಾರಿ ಎಸ್.ಅಶ್ವತಿ ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಜಿಪಂ ಸಿಇಒ ದಿವ್ಯ ಪ್ರಭು, ಎಡಿಸಿ ವಿ.ಆರ್.ಶೈಲಜಾ, ಎಸ್‌ಪಿ ಎನ್.ಯತೀಶ್, ಆರೋಗ್ಯಾಧಿಕಾರಿ ಡಾ.ಟಿ.ಎನ್.ಧನಂಜಯ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಬಿ.ರಂಗೇಗೌಡ, ಜಿಪಂ ಉಪಕಾರ್ಯದರ್ಶಿ ಸಂಜೀವಪ್ಪ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಜವರೇಗೌಡ, ನಗರಸಭೆ ಆಯುಕ್ತ ಆರ್.ಮಂಜುನಾಥ್, ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಪ್ರಿಯಕರನೊಡಗೂಡಿ ಪತಿ ಹತ್ಯೆ ಮಾಡಿದ್ದ ಪತ್ನಿ

ಇಬ್ಬರು ವಿದ್ಯಾರ್ಥಿಗಳು ಸೇರಿ ಐವರ ಬಂಧನ

ಶ್ರೀರಂಗಪಟ್ಟಣ, ಜು.6(ವಿನಯ್‌ಕಾರೇಕುರ)– ತಾಲೂಕಿನ ತಲಕಾಡು ಪೈಲ್ ಗ್ರಾಮದಲ್ಲಿ ನಡೆದಿದ್ದ ಕೊಲೆ ಪ್ರಕರಣವನ್ನು ಕೇವಲ 4 ದಿನದಲ್ಲೇ ಭೇದಿಸಿರುವ ಕೆಆರ್‌ಎಸ್ ಠಾಣೆ ಪೊಲೀಸರು ಹತ್ಯೆಗೀಡಾದವನ ಪತ್ನಿ, ಪ್ರಿಯಕರ, ಇಬ್ಬರು ವಿದ್ಯಾರ್ಥಿಗಳು ಸೇರಿದಂತೆ ಐವರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಕೊಲೆಯಾಗಿದ್ದ ಸುಂದರರಾಜ್ ಅಲಿಯಾಸ್ ದೀಪಕ್ ಪತ್ನಿ ಮಂಗಳಗೌರಿ ಅಲಿಯಾಸ್ ಗೌರಿ(28), ಪ್ರಿಯಕರ ಕೆ.ಆರ್.ಪೇಟೆ ತಾಲೂಕು ಅಕ್ಕಿಹೆಬ್ಬಾಳು ಗ್ರಾಮದ ಪರಮೇಶಾಚಾರಿ ಅಲಿಯಾಸ್ ಪುಟ್ಟ ಅಲಿಯಾಸ್ ಗಜ (28), ಬೆಂಗಳೂರಿನ ಬಿಎ ವಿದ್ಯಾರ್ಥಿ ತೇಜಸ್(19), ಅಂಗಡಿ ತಾಲೂಕು ದಂಡಿನಪಾಳ್ಯ ಗ್ರಾಮದ ವಿದ್ಯಾರ್ಥಿ ಡಿ.ವಿ.ಶ್ರೀನಿವಾಸ್ ಅಲಿಯಾಸ್ ವಿಜಯ್(18) ಮತ್ತು ಬೆಂಗಳೂರಿನ ನಾಯಂಡಹಳ್ಳಿ ನಿವಾಸಿ ಕೆ.ಚೇತನ್(27) ಬಂಧಿತರು. ಪಾನಮತ್ತನಾಗಿ ಬಂದು ಹಲ್ಲೆ ನಡೆಸುತ್ತಿದ್ದ ಪತಿಯನ್ನು ಪ್ರಿಯಕರನೊಡಗೂಡಿ ಪತ್ನಿಯೇ ಹತ್ಯೆ ಮಾಡಿದ್ದಾಳೆ ಎಂಬುದು ಬಯಲಾಗಿದೆ.

ವಿವರ: ಶ್ರೀರಂಗಪಟ್ಟಣ ತಾಲೂಕು ತಲಕಾಡು ಪೈಲ್ ನಿವಾಸಿ ಸುಂದರರಾಜ್ ಅಲಿಯಾಸ್ ದೀಪಕ್ ಚಾಲಕನಾಗಿದ್ದು, ಕೆಲಸಕ್ಕೆಂದು ಹೊರಗೆ ಹೋದರೆ 15 ದಿನ ಅಥವಾ ತಿಂಗಳ ನಂತರ ಮನೆಗೆ ಬರುತ್ತಿದ್ದ. ಹಾಗೆಯೇ ಬಂದಾಗ ಪಾನಮತ್ತನಾಗಿ ಪತ್ನಿ ಮಂಗಳಗೌರಿಗೆ ಹೊಡೆಯುತ್ತಿದ್ದ. ಈತನ ಶವ ಜು.2ರಂದು ಸಂಜೆ ಹುಲಿಕೆರೆ ಗ್ರಾಮದ ಬಳಿಯಿರುವ ವರುಣಾ ನಾಲೆ ಸಮೀಪ ಪತ್ತೆಯಾಗಿತ್ತು. ಅಂದು ಸಂಜೆ ಕೆಆರ್‌ಎಸ್ ಠಾಣೆಗೆ ದೂರು ನೀಡಿದ್ದ ಮಂಗಳಗೌರಿ, ತನ್ನ ಪತಿ ಕುಡಿತದ ದಾಸನಾಗಿದ್ದು, ಕುಡಿದು ಬಂದಾಗ ಗಲಾಟೆ ಮಾಡಿ ಹೊಡೆಯುತ್ತಿದ್ದ. ಜು.1ರಂದು ಸಂಜೆ ಆತ ಕುಡಿದು ಬಂದಿದ್ದರಿಂದ ನಾನು ಮಾತನಾಡಿಸಿರಲಿಲ್ಲ. ಮನೆಯ ಓಣಿ ಕಡೆ ಆತ ತೂರಾಡುತ್ತ ಹೋಗಿದ್ದ. ಜು.2ರಂದು ಸಂಜೆ ನಾನು ಕೆಲಸದಲ್ಲಿದ್ದಾಗ ಆತನ ಶವ ವರುಣಾ ನಾಲೆ ಬಳಿ ಬಿದ್ದಿದೆ ಎಂದು ಗೊತ್ತಾಯಿತು. ಆತನ ಮೈ ಮೇಲೆ ಗಾಯಗಳಿದ್ದು, ಯಾರೋ ದುಷ್ಕರ್ಮಿಗಳು ಹತ್ಯೆ ಮಾಡಿದ್ದಾರೆ ಎಂದು ತಿಳಿಸಿದ್ದಳು.

ಕೊಲೆ ಪ್ರಕರಣ ದಾಖಲಿಸಿಕೊಂಡಿದ್ದ ಕೆಆರ್‌ಎಸ್ ಠಾಣೆ ಪೊಲೀಸರು ಮಂಗಳಗೌರಿ ವರ್ತನೆ ಮೇಲೆ ಅನುಮಾನಪಟ್ಟು ಆಕೆಯನ್ನು ತೀವ್ರವಾಗಿ ವಿಚಾರಣೆಗೊಳಪಡಿಸಿದ ವೇಳೆ ಆಕೆಯೇ ಪ್ರಿಯಕರನೊಡಗೂಡಿ ಪತಿಯನ್ನು ಹತ್ಯೆ ಮಾಡಿರುವುದು ಬಯಲಾಗಿದೆ. ಪತಿಯ ಸ್ನೇಹಿತನೇ ಆಗಿದ್ದ ಪರಮೇಶಚಾರಿ ಜೊತೆ ಮಂಗಳಗೌರಿ ಸಂಬಂಧ ಹೊಂದಿದ್ದಳು. ಪತಿ ಕುಡಿದು ಗಲಾಟೆ ಮಾಡುತ್ತಿರುವ ಬಗ್ಗೆ ಪ್ರಿಯಕರನ ಜೊತೆ ಹೇಳಿದಾಗ ಪತಿಯನ್ನು ಮುಗಿಸಿಬಿಟ್ಟರೇ ತಾವಿಬ್ಬರು ನೆಮ್ಮದಿಯಾಗಿ ಇರಬಹುದು ಎಂದು ತೀರ್ಮಾನಿಸಿದ್ದಾರೆ. ಅದರಂತೆ ಪರಮೇಶಚಾರಿ ತನ್ನ ಮೂವರು ಸ್ನೇಹಿತರನ್ನು ಸೇರಿಸಿಕೊಂಡು ಜು.1ರಂದು ಸಂಜೆ ಸುಂದರರಾಜ್‌ನನ್ನು ಬೈಕ್‌ನಲ್ಲಿ ಕೂರಿಸಿಕೊಂಡು ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಹಲ್ಲೆ ಮಾಡಿ, ಕುತ್ತಿಗೆ ಮೇಲೆ ಕಾಲಿಟ್ಟು ಅದುಮಿ ಕೊಂದ ನಂತರ ಕಲ್ಲಿನಿಂದ ಮುಖದ ಮೇಲೆ ಹೊಡೆದು ಪರಾರಿಯಾಗಿದ್ದಾರೆ ಎಂಬುದು ವಿಚಾರಣೆ ವೇಳೆ ತಿಳಿದು ಬಂದಿದೆ ಎಂದು ಪೊಲೀಸ್ ಪ್ರಕಟಣೆ ಹೇಳಿದೆ.

ಜಿಲ್ಲಾ ಎಸ್‌ಪಿ ಯತೀಶ್, ಎಎಸ್‌ಪಿ ವೇಣುಗೋಪಾಲ್, ಡಿವೈಎಸ್‌ಪಿ ಸಂದೇಶ್‌ಕುಮಾರ್ ಮಾರ್ಗದರ್ಶನದಲ್ಲಿ ಕೆಆರ್‌ಎಸ್ ಸರ್ಕಲ್ ಇನ್‌ಸ್ಪೆಕ್ಟರ್ ಯೋಗೇಶ್, ಸಬ್ ಇನ್‌ಸ್ಪೆಕ್ಟರ್ ಲಿಂಗರಾಜು ಹಾಗೂ ಸಿಬ್ಬಂದಿ ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಸ್ವ ಗ್ರಾಮದ ಅಭಿವೃದ್ಧಿಗೆ ಶ್ರಮಿಸಿ: ಸಿ.ಎಸ್.ಪುಟ್ಟರಾಜು



ಪಾಂಡವಪುರ, ಜು.6– ಮನುಷ್ಯ ಎಷ್ಟೇ ಎತ್ತರಕ್ಕೆ ಬೆಳೆದರೂ ತಾನು ಹುಟ್ಟಿದ ಸ್ವ ಗ್ರಾಮದ ಅಭಿವೃದ್ಧಿಗೆ ಪೂರಕವಾಗಿ ಶ್ರಮಿಸಬೇಕು ಎಂದು ಶಾಸಕ ಸಿ.ಎಸ್.ಪುಟ್ಟರಾಜು ಸಲಹೆ ನೀಡಿದರು.

ಪಟ್ಟಣದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ನಡೆದ ನಾಡಪ್ರಭು ಕೆಂಪೇಗೌಡರ ಜನ್ಮದಿನಾಚರಣೆ ಹಾಗೂ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪ್ರತಿಯೊಬ್ಬರು ತಮ್ಮ ಹುಟ್ಟೂರುಗಳ ಅಭಿವೃದ್ಧಿಗೆ ಮುಂದಾದರೆ ಎಲ್ಲಾ ಗ್ರಾಮಗಳ ಅಭಿವೃದ್ಧಿ ಹೊಂದುತ್ತವೆ. ಯಾವುದೇ ಕಾರಣಕ್ಕೂ ಹುಟ್ಟೂರನ್ನು ಮರೆಯಬಾರದು ಎಂದರು.

ತಾಲೂಕಿನ ಹಳೇಬೀಡು ಗ್ರಾಮದ ಎಚ್.ಆರ್.ಮೋಹನ್ ಕುಮಾರ್ ಮತ್ತು ಡಿ.ಎಸ್.ತೇಜಸ್ವಿನಿ ಇಬ್ಬರು ಸಹ ಕೆಎಎಸ್ ಮಾಡುವ ಮೂಲಕ ಉನ್ನತ ಹುದ್ದೆ ಅಲಂಕರಿಸಿದ್ದಾರೆ. ಅವರನ್ನು ಗುರುತಿಸಿ ಕನ್ನಡ ಸಾಹಿತ್ಯ ಪರಿಷತ್ ಸನ್ಮಾನಿಸುತ್ತಿರುವುದು ಒಳ್ಳೆಯ ಬೆಳವಣಿಗೆ. ಇಂತಹ ಗ್ರಾಮೀಣ ಪ್ರತಿಭೆಗಳನ್ನು ಪ್ರೋತ್ಸಾಹಿಸುವುದರಿಂದ ಮಕ್ಕಳಿಗೆ ಪ್ರೇರಣೆಯಾಗಲಿದೆ ಎಂದರು.

ಕಸಾಪ ಜಿಲ್ಲಾಧ್ಯಕ್ಷ ರವಿಕುಮಾರ್ ಚಾಮಲಾಪುರ ಮಾತನಾಡಿ, ಬೆಂಗಳೂರು ನಗರ ನಿರ್ಮಾತೃ ನಾಡಪ್ರಭು ಕೆಂಪೇಗೌಡರು ಮಾದರಿ ನಾಯಕರು. ಕೆಂಪೇಗೌಡರು ನಿರ್ಮಾಣ ಮಾಡಿರುವ ಬೆಂಗಳೂರು ವಿಶ್ವಮಟ್ಟದಲ್ಲಿ ಬೆಳೆದಿದೆ. ಬೆಂಗಳೂರು ನಿರ್ಮಾಣ ಮಾಡುವಾಗಲೇ ನಗರಕ್ಕೆ ಅಗತ್ಯವಾದ ಎಲ್ಲಾ ಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ಕೆಂಪೇಗೌಡರು ಎಲ್ಲರಿಗೂ ಮಾದರಿಯಾಗಿದ್ದಾರೆ ಎಂದು ತಿಳಿಸಿದರು.

ಇದೇ ವೇಳೆ ಕೆಎಎಸ್ ಅಧಿಕಾರಿಗಳಾದ ಹಳೇಬೀಡು ಗ್ರಾಮದ ಹೆಚ್.ಆರ್.ಮೋಹನ್‌ಕುಮಾರ್, ಡಿ.ಎಸ್.ತೇಜಸ್ವಿನಿ ಹಾಗೂ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಸಮಾರಂಭದಲ್ಲಿ ಮೈಸೂರು ಮಹಾಜನ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ತಿಮ್ಮೇಗೌಡ, ತಹಸೀಲ್ದಾರ್ ನಯನ, ಮೈಶುಗರ್ ಅಧ್ಯಕ್ಷ ಜೆ.ಶಿವಲಿಂಗೇಗೌಡ, ರೈತ ಸಂಘದ ಅಧ್ಯಕ್ಷ ಚಿಕ್ಕಾಡೆ ಹರೀಶ್, ಸಿ.ಆರ್.ರಮೇಶ್, ಕಸಾಪ ಅಧ್ಯಕ್ಷ ಮೇನಾಗರ ಪ್ರಕಾಶ್, ಕಾರ್ಯದರ್ಶಿ ಪ.ಮ. ನಂಜುಂಡಸ್ವಾಮಿ ಸೇರಿದಂತೆ ಹಲವರು ಹಾಜರಿದ್ದರು.

ಮಹಿಳೆಯರಲ್ಲಿ ಸ್ವಾವಲಂಬನೆ ಮೂಡಿಸುವಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಯಶಸ್ವಿ



ಕೆ.ಆರ್.ಪೇಟೆ, ಜು.6(ಶ್ರೀನಿವಾಸ್)– ಮಹಿಳೆಯರಲ್ಲಿ ಸಂಘಟನೆ ಮತ್ತು ಆರ್ಥಿಕ ಸ್ವಾವಲಂಬನೆ ಮೂಡಿಸುವಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯು ಯಶಸ್ವಿಯಾಗಿದೆ. ಒಂದು ಚುನಾಯಿತ ಸರ್ಕಾರವು ಮಾಡಲಾಗದ ಸಾಮಾಜಮುಖಿ ಚಟುವಟಿಕೆಗಳನ್ನು ಸಂಸ್ಥೆಯು ಕೈಗೊಳ್ಳುವ ಮೂಲಕ ರಾಜ್ಯದ ಜನರ ವಿಶ್ವಾಸಕ್ಕೆ ಪಾತ್ರವಾಗಿದೆ ಎಂದು ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಹೆಚ್.ಕೆ.ಅಶೋಕ್ ಹೇಳಿದರು.

ತಾಲೂಕಿನ ಹೊಸಹೊಳಲು ಗ್ರಾಮದ ಎಸ್‌ಎಲ್‌ಎನ್ ಸಮುದಾಯ ಭವನದಲ್ಲಿ ಆರಂಭವಾದ 2400ನೇ ಮಹಿಳಾ ಸ್ವಸಹಾಯ ಸಂಘವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಹಿಳೆಯರು ಸಂಘದ ಮೂಲಕ ಪಡೆದ ಸಾಲವನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಜೊತೆಗೆ ಸ್ವಯಂ ಉದ್ಯೋಗ ಕೈಗೊಳ್ಳುವ ಮೂಲಕ ಆರ್ಥಿಕ ಸ್ವಾವಲಂಬನೆ ಸಾಧಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೈಸೂರು ವಿಭಾಗದ ಪ್ರಾದೇಶಿಕ ನಿರ್ದೇಶಕ ಪಿ.ಗಂಗಾಧರರೈ ಮಾತನಾಡಿ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಮಹಿಳಾ ಸಬಲೀಕರಣ ಹಾಗೂ ಗ್ರಾಮಗಳ ಸಮಗ್ರವಾದ ಅಭಿವೃದ್ಧಿಯನ್ನು ಮುಖ್ಯ ಗುರಿಯನ್ನಾಗಿಸಿಕೊಂಡು ಕೆಲಸ ಮಾಡುತ್ತಿದೆ. ಮಹಾತ್ಮ ಗಾಂಧಿಯವರ ರಾಮರಾಜ್ಯದ ಕನಸನ್ನು ನನಸು ಮಾಡುವ ನಿಟ್ಟಿನಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗಡೆ ಅವರ ಮಾರ್ಗದರ್ಶನದಲ್ಲಿ ಆರಂಭವಾದ ಗ್ರಾಮಾಭಿವೃದ್ಧಿ ಯೋಜನೆಯು ಇಂದು ರಾಜ್ಯದ ಎಲ್ಲಾ 30 ಜಿಲ್ಲೆಗಳಲ್ಲಿಯೂ ಕುಟುಂಬದ ಮುನ್ನಡೆಗೆ ದಾರಿ ದೀಪವಾಗಿ ಕೆಲಸ ಮಾಡುತ್ತಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಜಿಲ್ಲಾ ನಿರ್ದೇಶಕ ಮಹಾಬಲ ಕುಲಾಲ್, ತಾಲೂಕು ಯೋಜನಾಧಿಕಾರಿ ಮಮತಾಶೆಟ್ಟಿ, ಪುರಸಭೆಯ ಉಪಾಧ್ಯಕ್ಷೆ ಗಾಯತ್ರಿ ಸುಬ್ಬಣ್ಣ, ಸಮಾಜ ಸೇವಕ ಜಿ.ಸೋಮಶೇಖರ್, ಸಾಹಿತಿ ಬಲ್ಲೇನಹಳ್ಳಿ ಮಂಜುನಾಥ್, ನಂದಕುಮಾರ್ ಸೇರಿದಂತೆ ಐನೂರಕ್ಕೂ ಹೆಚ್ಚಿನ ಮಹಿಳೆಯರು ಭಾಗವಹಿಸಿದ್ದರು.

ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಆದ್ಯತೆ: ಡಿ.ಸಿ.ತಮ್ಮಣ್ಣ



ಭಾರತೀನಗರ, ಜು.6(ಅಣ್ಣೂರು ಸತೀಶ್)– ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆ, ಚರಂಡಿ ಸೇರಿದಂತೆ ಇತರೆ ಮೂಲ ಸೌಲಭ್ಯ ಕಲ್ಪಿಸುವ ಅಭಿವೃದ್ಧಿ ಕಾಮಗಾರಿಯನ್ನು ಸಾಗರೋಪಾದಿಯಲ್ಲಿ ಕೈಗೊಳ್ಳಲಾಗಿದೆ ಎಂದು ಶಾಸಕ ಡಿ.ಸಿ.ತಮ್ಮಣ್ಣ ಹೇಳಿದರು.

ಇಲ್ಲಿಗೆ ಸಮೀಪದ ಶೆಟ್ಟಹಳ್ಳಿ ಮತ್ತು ಕಾಡುಕೊತ್ತನಹಳ್ಳಿ ಗ್ರಾಮದಲ್ಲಿ ಲೋಕೋಪಯೋಗಿ ಬಂದರ್ ಮತ್ತು ಒಳನಾಡು ಜಲಸಾರಿಗೆ ಇಲಾಖೆಯಿಂದ 7ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ತಾಲೂಕಿನ ಎಂಜಿಎಂ ರಸ್ತೆಯಿಂದ ಕೆ.ಶೆಟ್ಟಹಳ್ಳಿ, ಯಡಗನಹಳ್ಳಿ, ಸಬ್ಬನಹಳ್ಳಿ, ಯಬಕವಾಡಿ ನಾಲೆ, ಭೀಮನಹಳ್ಳಿ, ಬಿದರಹೊಸಹಳ್ಳಿ ಮಾರ್ಗವಾಗಿ ಕೆಬಿ.ರಸ್ತೆ ಸೇರುವ 14.75ಕಿ.ಮೀ ಆಯ್ದ ಭಾಗಗಳಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಮತ್ತು ಸಬ್ಬನಹಳ್ಳಿ, ಯಡಗನಹಳ್ಳಿ, ಕಾಡುಕೊತ್ತನಹಳ್ಳಿ ಮಾರ್ಗದ ಸುಲ್ತಾನ್ ರಸ್ತೆಗೆ ಸೇರುವ ಜಿಲ್ಲಾ ಮುಖ್ಯ ರಸ್ತೆಯ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ ಹಾಗಾಗಿ ಗ್ರಾಮಸ್ಥರು ಕಳಪೆ ಕಾಮಗಾರಿ ನಡೆಯದಂತೆ ನೋಡಿಕೊಳ್ಳಬೇಕು ಎಂದರು.

ಈ ವೇಳೆ ಜೆಡಿಎಸ್ ತಾಲೂಕು ಅಧ್ಯಕ್ಷ ಚಿಕ್ಕತಿಮ್ಮೇಗೌಡ, ಮುಖಂಡರಾದ ಚಿನ್ನಂಗಸ್ವಾಮಿ, ದಯಾನಂದ, ಕೆಂಚೇಗೌಡ, ಕೆಂಪರಾಜು, ಪುಟ್ಟೇಗೌಡ, ಬಸವರಾಜು, ಆತ್ಮಾನಂದ, ಸಿ.ಕರೀಗೌಡ, ಮಹದೇವಪ್ಪ ಇದ್ದರು.

ಪುಟ್ಟೇಗೌಡ ನಿಧನ



ಕೆ.ಆರ್.ಪೇಟೆ, ಜು.6– ತಾಲೂಕಿನ ಚಿಲ್ಲದಹಳ್ಳಿ ಗ್ರಾಮದ ಶತಾಯುಷಿ ಪುಟ್ಟೇಗೌಡ(101) ಬುಧವಾರ ನಿಧನರಾದರು. ಮೃತರು ಪುತ್ರ ಮಂಜೇಗೌಡ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಿಲ್ಲದಹಳ್ಳಿ ಗ್ರಾಮದಲ್ಲಿ ಸಂಜೆ ನಡೆಯಿತು.

ಮಣ್ಣಲ್ಲಿ ಮಣ್ಣಾದ ಚಂದ್ರಶೇಖರ್ ಗುರೂಜಿ



ಹುಬ್ಬಳ್ಳಿ, ಜು.6– ನಿನ್ನೆ ಹುಬ್ಬಳ್ಳಿಯ ಖಾಸಗಿ ಹೋಟೆಲ್‌ನಲ್ಲಿ ಹತ್ಯೆಗೀಡಾದ ಸರಳವಾಸ್ತು ಖ್ಯಾತಿಯ ಚಂದ್ರಶೇಖರ್ ಗುರೂಜಿ ಅವರ ಅಂತ್ಯಕ್ರಿಯೆ ಇಂದು ಅವರ ಊರು ಧಾರವಾಡ ಜಿಲ್ಲೆ ಹುಬ್ಬಳ್ಳಿಂಯ ಸುಳ್ಳ ಗ್ರಾಮದ ಜಮೀನಿನಲ್ಲಿ ನೆರವೇರಿತು.

ಕುಟುಂಬಸ್ಥರು ಮತ್ತು ಭಕ್ತರ ಆಕ್ರಂದನದ ನಡುವೆಯೇ ಚಂದ್ರಶೇಖರ ಗುರೂಜಿ ಅವರ ಅಂತ್ರಕ್ರಿಯೆ ಬುಧವಾರ ಸಂಜೆ ನೆರವೇರಿತು. ವೀರಶೈವ ಲಿಂಗಾಯತ ಸಂಪ್ರದಾಯದಂತೆ ಕೊಟ್ರಯ್ಯ ಶಾಸ್ತ್ರಿಗಳ ನೇತೃತ್ವದಲ್ಲಿ ಅಂತ್ಯಕ್ರಿಯೆಯ ವಿಧಿ–ವಿಧಾನಗಳನ್ನು ಅಣ್ಣನ ಮಗ ಸಂತೋಷ್ ಅಂಗಡಿ ನೆರವೇರಿಸಿದರು. ಇದಕ್ಕೂ ಮುನ್ನ ಕಿಮ್ಸ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆದ ಬಳಿಕ ಪಾರ್ಥಿವ ಶರೀರವನ್ನು ಸ್ವಗ್ರಾಮದಲ್ಲಿ ಮೆರವಣಿಗೆ ಮಾಡಲಾಯಿತು. ಕೆಲಕಾಲ ಅಂತಿಮ ದರ್ಶನ ಪಡೆಯಲು ಸಾರ್ವಜನಿಕರಿಗೆ ಅವಕಾಶ ಮಾಡಿ ಕೊಡಲಾಗಿತ್ತು. ಅಂತ್ಯಕ್ರಿಯೆಯಲ್ಲಿ ಕುಟುಂಬಸ್ಥರು, ಸ್ನೇಹಿತರು, ಭಕ್ತರು ಭಾಗಿಯಾಗಿದ್ದರು.

ಚಾಮುಂಡಿಬೆಟ್ಟದಲ್ಲಿ ಭೂ ಕುಸಿತ: ತಡೆಗೋಡೆ ನಿರ್ಮಾಣ ಕಾಮಗಾರಿಗೆ ಗುದ್ದಲಿಪೂಜೆ



ಮೈಸೂರು, ಜು. 6(ಆರ್‌ಕೆ)– ಮಳೆಯಿಂದಾಗಿ ಚಾಮುಂಡಿ ಬೆಟ್ಟದ ನಂದಿ ಪ್ರತಿಮೆ ರಸ್ತೆಯಲ್ಲಿ ಉಂಟಾಗಿದ್ದ ಭೂ ಕುಸಿತ ಸ್ಥಳಕ್ಕೆ ತಡೆಗೋಡೆ ನಿರ್ಮಿಸುವ ಕಾಮಗಾರಿ ಕಡೆಗೂ ಆರಂಭವಾಗಿದೆ. 10 ಕೋಟಿ ರೂ. ಅಂದಾಜು ವೆಚ್ಚದಲ್ಲಿ ನಿರ್ಮಿಸಲುದ್ದೇಶಿಸಿರುವ ತಡೆಗೋಡೆ ಕಾಮಗಾರಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಗುದ್ದಲಿ ಪೂಜೆ ನೆರವೇರಿಸಿದರು. ಲೋಕೋಪಯೋಗಿ ಇಲಾಖೆಯಿಂದ ನಡೆಸುತ್ತಿರುವ ಕಾಮಗಾರಿಯನ್ನು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ತಜ್ಞರು ನೀಡಿರುವ ವರದಿಯನ್ವಯ ಪೂರ್ಣಗೊಳಿಸಲು ಕಾರ್ಯಾದೇಶ ನೀಡಲಾಗಿದೆ. ಸಂಸದ ಪ್ರತಾಪ್ ಸಿಂಹ, ಶಾಸಕ ಜಿ.ಟಿ.ದೇವೇಗೌಡ, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಜಂಗಲ್ ಲಾಡ್ಜ್ ಅಂಡ್ ರೆಸಾರ್ಟ್ಸ್ ಅಧ್ಯಕ್ಷ ಎಂ.ಅಪ್ಪಣ್ಣ, ಲೋಕೋಪ ಯೋಗಿ ಇಂಜಿನಿಯರ್ ಹರ್ಷ, ಅಸಿಸ್ಟೆಂಟ್ ಎಗ್ಸಿಕ್ಯೂಟಿವ್ ಇಂಜಿನಿಯರ್ ರಾಜು, ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಪ್ರಧಾನ ಅರ್ಚಕ ಶಶಿಶೇಖರ ದೀಕ್ಷಿತ್ ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು.

ಪಿಎಸ್‌ಐ ನೇಮಕಾತಿ ಹಗರಣ: ಸಿಐಡಿಯಿಂದ 1,900 ಪುಟಗಳ ಚಾರ್ಜ್‌ಶೀಟ್ ಸಲ್ಲಿಕೆ

ಕಲಬುರಗಿ, ಜು.6–ಪಿಎಸ್‌ಐ ನೇಮಕಾತಿ ಹಗರಣದ ತನಿಖೆ ನಡೆಸುತ್ತಿರುವ ಸಿಐಡಿ, ಜೆಎಂಎಫ್‌ಸಿ ಕೋರ್ಟ್‌ಗೆ 1,900 ಪುಟಗಳ ಚಾರ್ಜ್ ಶೀಟ್ ಸಲ್ಲಿಸಿದೆ. ಹಿರಿಯ ಪೊಲೀಸ್ ಅಧಿಕಾರಿಗಳು, ಕಿಂಗ್ ಪಿನ್, ಅಭ್ಯರ್ಥಿಗಳು ಸೇರಿ ಒಟ್ಟು 34 ಆರೋಪಿಗಳ ವಿರುದ್ಧ ಪ್ರಕರಣ ದಾಖಲಾಗಿದೆ.

ಪಬ್ಲಿಕ್ ಪ್ರಾಸಿಕ್ಯೂಟರ್ ಶಿವಶರಣಪ್ಪ ನ್ಯಾಯಾಧೀಶರಾದ ಶ್ರೀನಿವಾಸ್ ಕೆಆರ್ ಅವರಿದ್ದ ಪೀಠದ ಎದುರು ಚಾರ್ಜ್ ಶೀಟ್ ಸಲ್ಲಿಸಿದ್ದು, ವೀರೇಶ್, ಚೇತನ್ ನಂದಗಾಂವ್, ಪ್ರವೀಣ್ ಕುಮಾರ್, ಅರುಣ್ ಕುಮಾರ್ ಹಲ್ಲುಲ್ತಾನ್‌ಪುರ (ಎಲ್ಲಾ ಅಭ್ಯರ್ಥಿಗಳು), ಸಾವಿತ್ರಿ, ಸುಮಾ, ಸಿದ್ದಮ್ಮ, ಅರ್ಚನಾ ಶಿವಕುಮಾರ್ ಹಾಗೂ ಸುನಂದ ಅಲಿಯಾಸ್ ಸುನಿತಾ(ಎಲ್ಲಾ ಶಿಕ್ಷಕರು) ವಿರುದ್ಧ ಚಾರ್ಜ್ ಶೀಟ್ ಸಲ್ಲಿಸಿದ್ದಾರೆ.

ಪಿಎಸ್‌ಐ ಸಿಇಟಿಗೆ ಹಾಜರಾಗಿದ್ದ ಅಭ್ಯರ್ಥಿಗಳ ಹೆಸರೂ ಚಾರ್ಜ್‌ಶೀಟ್‌ನಲ್ಲಿದ್ದು, ಸಿಐಡಿ ಡಿವೈಎಸ್‌ಪಿ ಪ್ರಕಾಶ್ ರಾಥೋಡ್ ಚಾರ್ಜ್ ಶೀಟ್‌ನ್ನು ಸಿದ್ಧಪಡಿಸಿದ್ದಾರೆ. ಚಾರ್ಜ್ ಶೀಟ್‌ನಲ್ಲಿ ಅಭ್ಯರ್ಥಿ ವೀರೇಶ್‌ನ್ನು ಮುಖ್ಯ ಆರೋಪಿಯನ್ನಾಗಿಸಲಾಗಿದೆ. ಎಲ್ಲಾ ಆರೋಪಿಗಳ ವಿರುದ್ಧ ಪರೀಕ್ಷಾ ಅಪರಾಧಗಳ ಆರೋಪವನ್ನು ಹೊರಿಸಲಾಗಿದೆ.

ಜಮೀನು ಸ್ವಾಧೀನ ಸಂಬಂಧ ಪರಿಹಾರಕ್ಕೆ ಆಗ್ರಹಿಸಿ ಪ್ರತಿಭಟನೆ



ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಕೂರ್ಗಳ್ಳಿ ಗ್ರಾಮ ನಿವಾಸಿ ಜಯಮ್ಮ, ಗ್ರಾಮಸ್ಥರೊಂದಿಗೆ ಬುಧವಾರ ಪ್ರತಿಭಟನೆ ನಡೆಸಿದರು.

ಮೈಸೂರು,ಜು.6(ಪಿಎಂ)– ಜಮೀನು ಸ್ವಾಧೀನ ಸಂಬಂಧ ಪರಿಹಾರ ನೀಡದೇ ಕರ್ನಾಟಕ ಪ್ರದೇಶ ಕೈಗಾರಿಕಾ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ನಿರ್ಲಕ್ಷ್ಯ ತಾಳಿದೆ ಎಂದು ಆರೋಪಿಸಿ ಮೈಸೂರು ತಾಲೂಕು ಕೂರ್ಗಳ್ಳಿ ಗ್ರಾಮ ನಿವಾಸಿ ಜಯಮ್ಮ, ಗ್ರಾಮಸ್ಥರೊಂದಿಗೆ ಬುಧವಾರ ಪ್ರತಿಭಟನೆ ನಡೆಸಿದರು.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಕೂರ್ಗಳ್ಳಿ ಗ್ರಾಮದ ಸರ್ವೇ ನಂ.11ರಲ್ಲಿ ಕೆಐಎಡಿಬಿಯಿಂದ 9ರಿಂದ 10 ಗುಂಟೆ ಜಮೀನನ್ನು ರಸ್ತೆಗೆಂದು ಸ್ವಾಧೀನಪಡಿಸಿಕೊಂಡು ಸುಮಾರು 20 ವರ್ಷಗಳೇ ಕಳೆದಿವೆ. ಆದರೂ ಪರಿಹಾರ ನೀಡದೇ ನಿರ್ಲಕ್ಷ್ಯ ತಾಳಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪರಿಹಾರ ನೀಡಲು ಕೋರಿ ದಾಖಲೆಸಹಿತ ಕೆಐಎಡಿಬಿಗೆ ಹಲವು ಬಾರಿ ಮನವಿ ಸಲ್ಲಿಸಲಾಗಿದೆ. ಆದರೆ ಈವರೆಗೆ ಪರಿಹಾರ ನೀಡದೇ ನಿರ್ಲಕ್ಷ್ಯ ಮಾಡಲಾಗಿದೆ. ಶೀಘ್ರವೇ ಪರಿಹಾರ ನೀಡಬೇಕೆಂದು ಒತ್ತಾಯಿಸಿದರು. ಗ್ರಾಮದ ಮುಖಂಡರಾದ ರೇವಣ್ಣ, ಕೃಷ್ಣ, ಸೀತಾರಾಮು, ರಾಮಣ್ಣ, ಶಿವಣ್ಣ, ಸಿದ್ದೇಗೌಡ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸುಮಾರು 3.74 ಕೋಟಿ ರೂ. ಅಂದಾಜು ವೆಚ್ಚದಲ್ಲಿ

ಸೋಮನಾಥಪುರದ ಕೇಶವ ದೇವಸ್ಥಾನ ಅಭಿವೃದ್ಧಿಗೆ ಚಿಂತನೆ



ತಿ.ನರಸೀಪುರ ತಾಲೂಕಿನ ಸೋಮನಾಥಪುರದ ಶ್ರೀ ಕೇಶವ ದೇವಸ್ಥಾನ.

ಮೈಸೂರು,ಜು.6(ಆರ್‌ಕೆ)–ಯುನೆಸ್ಕೋ ಯೋಜನೆಯಡಿ ತಿ.ನರಸೀಪುರ ತಾಲೂಕು, ಸೋಮನಾಥಪುರದ ಪುರಾತನ ಶ್ರೀ ಕೇಶವ ದೇವಸ್ಥಾನವನ್ನು 3.74 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಪುನರುಜ್ಜೀವನಗೊಳಿಸಲು ಮೈಸೂರು ಜಿಲ್ಲಾಡಳಿತ ಚಿಂತನೆ ನಡೆಸಿದೆ.

ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಪ್ರವಾಸೋದ್ಯಮ ಅಭಿವೃದ್ಧಿ ಕುರಿತ ಸಭೆಯಲ್ಲಿ ಶ್ರೀ ಕೇಶವ ದೇವಾಲಯವನ್ನು ಪುನರುಜ್ಜೀವನ ಗೊಳಿಸಿ ಸಮಗ್ರ ಮೂಲಭೂತ ಸೌಲಭ್ಯ ಕಲ್ಪಿಸಲು ಯೋಜನೆ ತಯಾರಿಸಲಾಗಿದೆ ಎಂದು ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳು ಪವರ್ ಪಾಯಿಂಟ್ ಪ್ರಸೆಂಟೇಷನ್ ಮೂಲಕ ಮಾಹಿತಿ ನೀಡಿದರು. 25 ಲಕ್ಷ ರೂ. ಅಂದಾಜು ವೆಚ್ಚದಲ್ಲಿ 2 ಎಲ್‌ಇಡಿ ಡಿಜಿಟಲ್ ಮಾಹಿತಿ ಮತ್ತು ಸೂಚನಾ ಫಲಕ, 50 ಲಕ್ಷ ರೂ. ವೆಚ್ಚದಲ್ಲಿ ದೇವಸ್ಥಾನದ ಹಿಂಭಾಗ ವಾಹನ ನಿಲುಗಡೆ ಸೌಲಭ್ಯ, 15 ಲಕ್ಷ ರೂ. ವೆಚ್ಚದ ಸರ್ವಿಸ್ ರೋಡ್, ಶುದ್ಧ ಕುಡಿಯುವ ನೀರಿನ ಘಟಕ (20 ಲಕ್ಷ ರೂ.), ಪ್ರಾಥಮಿಕ ಆರೋಗ್ಯ ಕೇಂದ್ರದ ಪಾರಂ ಪರಿಕ ಕಟ್ಟಡ ಸಂರಕ್ಷಣೆ (55 ಲಕ್ಷ ರೂ.), ಅತಿಥಿ ಗೃಹದ ಪುನರುಜ್ಜೀವನ (88 ಲಕ್ಷ ರೂ.), ಫುಡ್ ಕೋರ್ಟ್ ನಿರ್ಮಾಣ (70 ಲಕ್ಷ ರೂ.), ಪಾರ್ಕಿಂಗ್ ಸ್ಥಳದಲ್ಲಿ ಸೋಲಾರ್ ದೀಪ ಅಳವಡಿಸುವುದು (10 ಲಕ್ಷ ರೂ.), ಹೊಸ ಹೈಟೆಕ್ ಶೌಚಾಲಯ ನಿರ್ಮಾಣ (25 ಲಕ್ಷ ರೂ.), ಎಲೆಕ್ಟ್ರಿಕಲ್ ಸೈಟ್ ಸೀಯಿಂಗ್ ಕಾರ್, ಎಲೆಕ್ಟ್ರಿಕಲ್ ಗಾಲಿ ಚೇರ್ ವ್ಯವಸ್ಥೆ (15 ಲಕ್ಷ ರೂ.) ಸೇರಿದಂತೆ ಪ್ರವಾಸಿಗರಿಗೆ ಅಗತ್ಯ ಸೌಲಭ್ಯ ಒದಗಿಸಲು ಯೋಜಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಈ ಸಂದರ್ಭ ಮಾತನಾಡಿದ ತಿ.ನರಸೀಪುರ ಶಾಸಕ ಎನ್.ಅಶ್ವಿನ್‌ಕುಮಾರ್, ದೇವಸ್ಥಾನದ ಕಾಂಪೌಂಡ್‌ನಿಂದ 200 ಮೀ. ಸುತ್ತಲಿನ ಪ್ರದೇಶ ದಲ್ಲಿ ಯಾವುದೇ ಅಭಿವೃದ್ಧಿ ಕೆಲಸ ಮಾಡಲು ಆರ್ಕಿಯಾಲಜಿಕಲ್ ಸರ್ವೇ ಆಫ್ ಇಂಡಿಯಾ (ASI)ದವರು ಅವಕಾಶ ನೀಡುತ್ತಿಲ್ಲ. 200 ಮೀಟರ್ ಪರಿಮಿತಿಯನ್ನು ದೇವಸ್ಥಾನದ ಕಾಂಪೌಂಡ್‌ನಿಂದ ಅಳೆಯುವ ಬದಲು ಪ್ರಾಂಗಣದಿಂದ ಪರಿಗಣಿಸಬೇಕು ಎಂದು ಸೋಮಶೇಖರ್ ತಿಳಿಸಿದರು.

ಅದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್, ಪುರಾತತ್ವ ಇಲಾಖೆಯು ಪುರಾತನ ದೇವಾಲಯಗಳ ಪ್ರದೇಶ ವ್ಯಾಪ್ತಿಗೆ ಸಂಬಂಧಿಸಿದಂತೆ ರೂಪಿಸಿರುವ ಕಾಯ್ದೆಯನ್ನು ಬದಲಿಸಲಾಗದು. ಆದರೆ ಅಲ್ಲಿನ ನಿವಾಸಿಗಳಿಗೆ ತೊಂದರೆಯಾಗದಂತೆ ದೇವಾಲಯದ ಸಮಗ್ರ ಅಭಿವೃದ್ಧಿ ಮಾಡಲು ಯೋಜನೆ ರೂಪಿಸಲಾಗಿದೆ ಎಂದರು.

ಈ ಸಂದರ್ಭ ಮಾತನಾಡಿದ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ, ಒಂದು ಬಾರಿ ಯುನೆಸ್ಕೋ ಯೋಜನೆಯಡಿ ಪುರಾತನ ದೇವಾ ಲಯವನ್ನು ನವೀಕರಣ ಮಾಡಿಸಿದಲ್ಲಿ ಮುಂದೆ ಅವರೇ ನಿಯಂತ್ರಿಸುತ್ತಾರೆ. ನಮ್ಮ ರಾಜ್ಯ ಸರ್ಕಾರದ ಪಾತ್ರ ಏನೂ ಇರುವುದಿಲ್ಲ ಎಂದರು. ಅದಕ್ಕೆ ಪ್ರತಿ ಕ್ರಿಯಿಸಿದ ಪುರಾತತ್ವ, ಪರಂಪರೆ ಇಲಾಖೆ ಆಯುಕ್ತ ರಾದ ಬಿ.ಆರ್.ಪೂರ್ಣಿಮಾ, ಈಗಾಗಲೇ ದೇವಸ್ಥಾನ ಯುನೆಸ್ಕೋ ಪಟ್ಟಿಯಲ್ಲಿ ಸೇರಿಕೊಂಡಿದೆ ಎಂದರು.

ಒಂದೇ ಟಿಕೆಟ್‌ನಲ್ಲಿ ಮೈಸೂರಿನ ಪ್ರವಾಸಿ ತಾಣಗಳಿಗೆ ಪ್ರವೇಶ

ಮೈಸೂರು,ಜು.6(ಆರ್‌ಕೆ)–ಮೈಸೂರು ನಗರದ ಎಲ್ಲಾ ಪ್ರವಾಸಿ ತಾಣ ವೀಕ್ಷಿಸಲು ಒಂದೇ ಟಿಕೆಟ್ ವ್ಯವಸ್ಥೆ ಕಲ್ಪಿಸಲು ನಿರ್ಧರಿಸಲಾಯಿತು.

ಮೈಸೂರಿನ ಡಿಸಿ ಕಚೇರಿಯಲ್ಲಿ ನಡೆದ ಪ್ರವಾಸೋದ್ಯಮ ಅಭಿವೃದ್ಧಿ ಕುರಿತ ಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಕೆಲ ಸಂಘಟನೆಗಳ ಪ್ರತಿನಿಧಿಗಳು, ಅರಮನೆ, ಮೃಗಾಲಯ, ಕಾರಂಜಿ ಉದ್ಯಾನ ವನಗಳಂತಹ ಪ್ರವಾಸಿ ಸ್ಥಳಗಳಿಗೆ ಪ್ರವೇಶ ಕಲ್ಪಿಸಲು ಒಂದೇ ಟಿಕೆಟ್ ವ್ಯವಸ್ಥೆ ಮಾಡಬೇಕು ಎಂದು ತಿಳಿಸಿದರು.

ಮೈಸೂರಿಗೆ ಬರುವ ಪ್ರವಾಸಿಗರು ಟಿಕೆಟ್ ಖರೀದಿಸಲು ಸಾಲುಗಟ್ಟಿ ನಿಂತು ಸಮಯ ವ್ಯರ್ಥವಾಗುತ್ತಿರುವುದರಿಂದ ಒಂದು ಅಥವಾ ಎರಡೇ ಸ್ಥಳ ವೀಕ್ಷಿಸಿ ಹಿಂದಿರುಗುವಂತಾಗಿದೆ. ಈಗ ತಂತ್ರಜ್ಞಾನ ಅಭಿವೃದ್ಧಿಯಾಗಿದ್ದು, ಆನ್‌ಲೈನ್ ವ್ಯವಸ್ಥೆ ಇರುವುದರಿಂದ ಸುಲಭವಾಗಿ 'ಒಂದು ಟಿಕೆಟ್–ಹಲವು ಸ್ಥಳ' ಸೌಲಭ್ಯ ಜಾರಿಗೆ ತಂದರೆ ಪ್ರವಾಸಿಗರಿಗೆ ಅನುಕೂಲವಾಗಲಿದೆ ಎಂದು ಅಭಿಪ್ರಾಯ ವ್ಯಕ್ತವಾದ ಹಿನ್ನೆಲೆಯಲ್ಲಿ ಅದನ್ನು ಜಾರಿಗೊಳಿಸಲು ಪ್ರಕ್ರಿಯೆ ಆರಂಭಿಸುವಂತೆ ಸಂಸದ, ಶಾಸಕರು ಪ್ರವಾಸೋ ದ್ಯಮ ಅಭಿವೃದ್ಧಿ ಇಲಾಖೆ ಅಧಿಕಾರಿಗಳಿಗೆ ಸಲಹೆ ನೀಡಿ ದರು. ದಸರಾ ಮಹೋತ್ಸವ ಸಮೀಪಿಸುತ್ತಿರು ವುದರಿಂದ ಈಗಿನಿಂದಲೇ ಒಂದೇ ಟಿಕೆಟ್‌ನಡಿ ಹಲವು ಪ್ರವಾಸಿ ಸ್ಥಳ ವೀಕ್ಷಿಸುವ ಪದ್ಧತಿ ಜಾರಿಗೊಳಿಸಲು ಸಿದ್ಧತೆ ಮಾಡಿಕೊಳ್ಳುವಂತೆ ಸಚಿವ ಎಸ್.ಟಿ.ಸೋಮಶೇಖರ್ ಇದೇ ಸಂದರ್ಭ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕಮಲಮ್ಮ



ಕೆ.ಆರ್.ಪೇಟೆ, ಜು.6– ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಮದ ಕಮಲಮ್ಮ(80) ಬುಧವಾರ ನಿಧನರಾದರು. ಮೃತರು ನಾಲ್ವರು ಪುತ್ರಿಯರು, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಅಗ್ರಹಾರಬಾಚಹಳ್ಳಿ ಗ್ರಾಮದಲ್ಲಿ ನಡೆಯಿತು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ






ಕೊಡಗಲ್ಲಿ ನಿರಂತರ ಮಳೆ: ಕೆಲವೆಡೆ ಭೂ ಕುಸಿತ

ತ್ರಿವೇಣಿ ಸಂಗಮ ಮುಳುಗಡೆ, ರಸ್ತೆ ಸಂಚಾರ ಬಂದ್

● ಕೆಲವು ಕಡೆ ಮರ ಬಿದ್ದು ಸಂಚಾರ ಅಸ್ತವ್ಯಸ್ತ, ಮನೆಗಳು ಜಖಂ

ಮಡಿಕೇರಿ,ಜು.6– ಕೊಡಗು ಜಿಲ್ಲೆಯಲ್ಲಿ ನಿರಂತರ ಮಳೆಯಿಂದಾಗಿ ಲಘು ಭೂ ಕುಸಿತ, ಮರ ಮುರಿದು ಬಿದ್ದಿರುವುದು, ಮನೆಗಳಿಗೆ ಹಾನಿಯಾಗಿರುವ ಬಗ್ಗೆ ವರದಿಯಾಗಿದ್ದು, ಗುರುವಾರ ಬೆಳಗ್ಗೆವರೆಗೂ 'ಆರೆಂಜ್ ಅಲರ್ಟ್' ಘೋಷಿಸಲಾಗಿದೆ.

ಮಡಿಕೇರಿ–ಮಾಣಿ ರಾಷ್ಟ್ರೀಯ ಹೆದ್ದಾರಿ 275ನ ಕರ್ತೋಜೆ ಬಳಿ ಹೆದ್ದಾರಿಗೆ ಮರಗಳು ನೆಲಕ್ಕೆ ಉರುಳಿ ಬೀಳುವುದರಿಂದರೊಂದಿಗೆ ಭಾರೀ ಭೂ ಕುಸಿದು ವಾಹನ ಸಂಚಾರ ಕೆಲಕಾಲ ಬಂದ್ ಆಗಿತ್ತು ಹಿಟಾಚಿ ಸಹಾಯದಿಂದ ಮಣ್ಣು ತೆರವುಗೊಳಿಸಿ ಸಂಚಾರಕ್ಕೆ ಮುಕ್ತಗೊಳಿಸಲಾಯಿತು. ಮಾದಾಪುರ ಜಂಬೂರು ರಸ್ತೆಗೆ ಮರ ಮುರಿದು ಬಿದ್ದು ಕೆಲ ಕಾಲ ರಸ್ತೆ ಸಂಪರ್ಕ ಬಂದ್ ಆಗಿತ್ತು. ಸ್ಥಳೀಯ ಪಂಚಾಯಿತಿ ಟಾಸ್ಕ್ ಫೋರ್ಸ್ ಮರವನ್ನು ತೆರವುಗೊಳಿಸಿ ವಾಹನ ಸಂಚಾರಕ್ಕೆ ಅನುವು ಮಾಡಿದ್ದಾರೆ. ಹಲವು ಕಡೆಗಳಲ್ಲಿ ಮರಗಳು ಮುರಿದು ಬಿದ್ದು, ರಸ್ತೆ ಸಂಚಾರ ವ್ಯತ್ಯಯವಾದ ಬಗ್ಗೆ ವರದಿಯಾಗಿದ್ದು, ಅರಣ್ಯ ಇಲಾಖೆ ಸಿಬ್ಬಂದಿಗಳು ಮರಗಳನ್ನು ತೆರವುಗೊಳಿಸಿದ್ದಾರೆ.

ಇನ್ನು ಕಾವೇರಿ ನದಿ ಪ್ರವಾಹದಿಂದ ಭಾಗಮಂಡಲದ ತ್ರಿವೇಣಿ ಸಂಗಮ ಕಳೆದ 4 ದಿನಗಳಿಂದ ಮುಳುಗಿದ ಸ್ಥಿತಿಯಲ್ಲಿದೆ. ಭಾಗಮಂಡಲ–ಅಯ್ಯಂಗೇರಿ ರಸ್ತೆ ಕೂಡ 3 ದಿನಗಳಿಂದ ಬಂದ್ ಆಗಿದ್ದರೆ, ಮಡಿಕೇರಿ ಭಾಗಮಂಡಲ ರಸ್ತೆ ಮೇಲೆ 2 ಅಡಿ ನೀರು ಹರಿಯುತ್ತಿದೆ.

ಭಾಗಮಂಡಲ ವ್ಯಾಪ್ತಿಯಲ್ಲಿ ಭಾರೀ ಮಳೆ ಸುರಿಯುತ್ತಿದ್ದು, ತಾವೂರು ಗ್ರಾಮದ ಬಾರಿಕೆ ಕೃಷ್ಣ ಎಂಬವರ ಮನೆ ಬಹುತೇಕ ಕುಸಿದು ಬಿದ್ದಿದ್ದು ನಷ್ಟ ಉಂಟಾಗಿದೆ ಸಂಪಾಜೆ ಹೋಬಳಿ ಕಾಟಕೇರಿ ಗ್ರಾಮದ ಕುಂಚೆಟ್ಟಿರ ಪೊನ್ನಪ್ಪ ಎಂಬವರ ವಾಸದ ಮನೆಯ ಮೇಲೆ ಮರ ಮುರಿದು ಬಿದ್ದಿದ್ದು, ಹಾನಿಯ ಬಗ್ಗೆ ಕಂದಾಯ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ ಕೊಡ್ಲಿಪೇಟೆ ಹೋಬಳಿಯ ಶಿವರಳ್ಳಿ ಗ್ರಾಮದಲ್ಲಿ ಸುಶೀಲ ಎಂಬವರ ಮನೆಯ ಮೇಲೆ ಮರ ಬಿದ್ದಿದ್ದು, ಹಾನಿ ಸಂಭವಿಸಿದೆ. ಎಲ್ಲಾ ಪ್ರಕರಣಗಳಲ್ಲೂ ಮನೆ ಮಂದಿ ಅಪಾಯದಿಂದ ಪಾರಾಗಿದ್ದು, ಯಾವುದೇ ಜೀವ ಹಾನಿ ಸಂಭವಿಸಿಲ್ಲ.

ಭಾರೀ ಗಾಳಿಗೆ ವಿದ್ಯುತ್ ಕಂಬಗಳ ಮುರಿದು ಬಿದ್ದಿದ್ದು, ದುರಸ್ತಿ ಕಾರ್ಯ ನಡೆಸಲಾಗುತ್ತಿದೆ. ಅಮ್ಮತ್ತಿ ಬಳಿಯ ಕಾಫಿ ತೋಟದ ಒಳಗೆ 33 ಕೆ.ವಿ. ವಿದ್ಯುತ್ ಲೈನ್ ಮೇಲೆ ಮರ ಬಿದ್ದಿದ್ದು, ಸಿದ್ದಾಪುರ ಭಾಗಕ್ಕೆ ವಿದ್ಯುತ್ ಪೂರೈಕೆ ಸ್ಥಗಿತವಾಗಿತ್ತು. ಬುಧವಾರ ಬೆಳಗೆ ದುರಸ್ತಿ ಕಾರ್ಯ ನಡೆಸಿದ ಬಳಿಕ ವಿದ್ಯುತ್ ಮರು ಪೂರೈಕೆ ಮಾಡಲಾಗಿದೆ. ಕೊಳಕೇರಿ, ಗರ್ವಾಲೆ, ಸೂರ್ಲಬ್ಬಿ, ಮಾದಾಪುರ, ನಾಪೋಕ್ಲು, ಗಾಳಿಬೀಡು, ಸಂಪಾಜೆ, ಕೊಡ್ಲಿಪೇಟೆ, ಬಾಳಲೆ ಸೇರಿದಂತೆ ವಿವಿಧ ಕಡೆಗಳಲ್ಲಿ ವಿದ್ಯುತ್ ಕಂಬಗಳ ಸಹಿತ ಟ್ರಾನ್ಸ್‌ಫಾರ್ಮರ್‌ಗಳು ಮುರಿದು ಬಿದ್ದಿರುವ ಘಟನೆಗಳು ವರದಿಯಾಗಿವೆ.

ಕಳೆದ 24 ಗಂಟೆ ಅವಧಿಯಲ್ಲಿ ಮಡಿಕೇರಿ ತಾಲೂಕಿನ ಗಾಳಿಬೀಡು ಗ್ರಾಪಂ ವ್ಯಾಪ್ತಿಯಲ್ಲಿ 172 ಮಿ.ಮೀ, ಮದೆನಾಡು ಗ್ರಾಪಂ ವ್ಯಾಪ್ತಿಯಲ್ಲಿ 166 ಮಿ.ಮೀ, ಸೋಮವಾರಪೇಟೆ ತಾಲೂಕಿನ ಬೆಟ್ಟದಳ್ಳಿ ಗ್ರಾಪಂ ವ್ಯಾಪ್ತಿಯಲ್ಲಿ 157 ಮಿ.ಮೀ ಹಾಗೂ ಭಾಗಮಂಡಲ ವ್ಯಾಪ್ತಿಯಲ್ಲಿ 126.5 ಮಿ.ಮೀ, ಚೆಂಬು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 127 ಮಿಮೀ ಮಳೆ ಸುರಿದಿರುವುದಾಗಿ ರಾಜ್ಯ ಪ್ರಾಕೃತಿಕ ವಿಕೋಪ ನಿರ್ವಹಣಾ ಕೇಂದ್ರ ಮಾಹಿತಿ ನೀಡಿದೆ. ಭಾರೀ ಮಳೆಯಾಗುತ್ತಿರುವ ಕಾರಣ ಹಾರಂಗಿ ಜಲಾಶಯಕ್ಕೆ 12,644 ಕ್ಯೂಸೆಕ್ ನೀರಿನ ಒಳಹರಿವು ದಾಖಲಾಗಿದ್ದು, ಜಲಾಶಯದಿಂದ ನದಿಗೆ 11,940 ಕ್ಯೂಸೆಕ್ ನೀರನ್ನು ಹರಿಸಲಾಗಿದೆ. 2859 ಅಡಿ ನೀರಿನ ಸಂಗ್ರಹ ಸಾಮರ್ಥ್ಯ ಇರುವ ಜಲಾಶಯದಲ್ಲಿ ಪ್ರಸ್ತುತ 2854.54 ಅಡಿಗಳಷ್ಟು ನೀರಿನ ಸಂಗ್ರಹವಿದೆ ಎಂದು ಜಲಾಶಯ ಅಧಿಕಾರಿಗಳು ತಿಳಿಸಿದ್ದಾರೆ.

ಇಂದು ಶಾಲಾ ಕಾಲೇಜುಗಳಿಗೆ ರಜೆ

ಜಿಲ್ಲೆಯಾದ್ಯಂತ ಗುರುವಾರ ಮುಂಜಾನೆವರೆಗೆ ಆರೆಂಜ್ ಅಲರ್ಟ್ ಘೋಷಿಸಿರುವ ಕಾರಣ ಜು.7ರಂದು ಜಿಲ್ಲೆಯ ಎಲ್ಲಾ ಅಂಗನವಾಡಿ, ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ಹವಾಮಾನ ಇಲಾಖೆ ನೀಡಿರುವ ವರದಿ ಆಧರಿಸಿ ಜಿಲ್ಲಾಧಿಕಾರಿ ಡಾ.ಬಿ.ಸಿ ಸತೀಶ ಅವರು ರಜೆಯ ಆದೇಶ ಹೊರಡಿಸಿದ್ದಾರೆ.

ಜಿಲ್ಲೆಯ ಮಳೆ ಹಾನಿ, ಭೂ ಕಂಪನ ಪೀಡಿತ ಪ್ರದೇಶಗಳಿಗೆ ಕಂದಾಯ ಸಚಿವ ಅಶೋಕ್ ಭೇಟಿ

● ಅಧಿಕಾರಿಗಳಿಂದ ಮಾಹಿತಿ ಸಂಗ್ರಹ ● ಇಂದು ಮಡಿಕೇರಿ, ಚೆಂಬು ಸೇರಿದಂತೆ ಇತರ ಗ್ರಾಮಗಳಿಗೆ ಭೇಟಿ ನೀಡಿ, ಪರಿಶೀಲನೆ



ಮಡಿಕೇರಿ,ಜು.6– ಭಾರೀ ಮಳೆಯಿಂದ ಹಾನಿಗೊಳಗಾಗಿರುವ ಪ್ರದೇಶ ಹಾಗೂ ಕೊಡಗು ಗಡಿ ಗ್ರಾಮ ವ್ಯಾಪ್ತಿಯಲ್ಲಿ ಸರಣಿ ಭೂಕಂಪ ಪೀಡಿತ ಸ್ಥಳಗಳಿಗೆ ಕಂದಾಯ ಸಚಿವ ಆರ್. ಅಶೋಕ್ ಜಿಲ್ಲೆಗೆ ಭೇಟಿ ನೀಡಿ, ಪರಿಶೀಲಿಸಿ ಅಧಿಕಾರಿಗಳಿಂದ ಮಾಹಿತಿ ಪಡೆದರು.

ಬುಧವಾರ ಸಂಜೆ ಕೊಡಗಿಗೆ ಆಗಮಿಸಿದ ಸಚಿವರು ಕೂಡಿಗೆ ಸಮೀಪದ ಕಾವೇರಿ ಹಾಗೂ ಹಾರಂಗಿ ನದಿ ಸಂಗಮವಾಗುವ ಕಣಿವೆ ಮತ್ತು ಹಾರಂಗಿ ಜಲಾಶಯಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಕಣಿವೆ ಶ್ರೀ ರಾಮಲಿಂಗೇಶ್ವರ ದೇವಾಲಯದಲ್ಲಿ ಪೂಜೆ ಸಲ್ಲಿಸಿದ ಕಂದಾಯ ಸಚಿವ ಅಶೋಕ್, ಕಣಿವೆಯ ಕಾವೇರಿ ಸಂಗಮದಲ್ಲಿ ಕಾವೇರಿ ನದಿ ಉಕ್ಕಿ ಹರಿಯುತ್ತಿರುವುದನ್ನು ವೀಕ್ಷಿಸಿದರು. ಅಲ್ಲದೇ ಜಿಲ್ಲೆಯಲ್ಲಿ ಮಳೆ ಹಾನಿ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದರು. ಬಳಿಕ ಹಾರಂಗಿ ಜಲಾಶಯಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಸಚಿವ ಅಶೋಕ್ ಹಾರಂಗಿ ಜಲಾಶಯದ ನೀರಿನ ಸಂಗ್ರಹ ಸಾಮರ್ಥ್ಯ, ನೀರಿನ ಒಳಹರಿವು, ಹೊರ ಹರಿವು, ಪ್ರವಾಹ ಎದುರಾಗದಂತೆ ಕೈಗೊಂಡಿರುವ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದರು.

ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಆರ್.ಅಶೋಕ್, ಭೂಕಂಪ ಆದ ಕೊಡಗು ಹಾಗೂ ಸುಳ್ಯ ಪ್ರದೇಶಗಳಿಗೆ ಭೇಟಿ ನೀಡಲಾಗುತ್ತದೆ. ಹಾರಂಗಿಯಲ್ಲಿ ಈಗಾಗಲೇ 5 ಟಿಎಂಸಿಗೂ ಹೆಚ್ಚು ನೀರಿದ್ದು, 15 ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಬಿಡಲಾಗುತ್ತಿದೆ. ಇನ್ನು ಮಳೆ ಬರುವುದರಿಂದ ಡ್ಯಾಂನಲ್ಲಿ ಹೆಚ್ಚಿನ ನೀರನ್ನು ಸಂಗ್ರಹಿಸುವುದು ಬೇಡ ಎಂದು ಸೂಚನೆ ನೀಡಲಾಗಿದೆ. ಎಲ್ಲಿಯೂ ಪ್ರವಾಹ ತಲೆದೋರಬಾರದು. ಅದಕ್ಕಾಗಿ ಏಕಾಏಕಿ ನೀರು ಬಿಡಬಾರದೆಂದು ಸೂಚಿಸಲಾಗಿದೆ. ಭೂ ಕಂಪನ ಆಗಿರುವ ಸ್ಥಳಗಳಲ್ಲಿರುವ ಜನರನ್ನು ಸ್ಥಳಾಂತರಿಸಬೇಕೆ, ಬೇಡವೇ ಎಂದು ತಜ್ಞರ ಜೊತೆ ಸಮಾಲೋಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳಿದರು. ಜನರಿಗೆ ಸಾಂತ್ವನ, ಪರಿಹಾರ ವಿತರಣೆ, ಸ್ಥಳಗಳ ಪರಿಶೀಲನೆಯನ್ನೂ ನಡೆಸಲಾಗುತ್ತದೆ ಎಂದು ಮಾಹಿತಿ ನೀಡಿದರು.

ಗುರುವಾರ ಮಡಿಕೇರಿ, ಚೆಂಬು, ಸೇರಿದಂತೆ ವಿವಿಧೆಡೆ ಭೇಟಿ ನೀಡಿ ಪರಿಶೀಲನೆ ನಡೆಸಲಿರುವ ಆರ್.ಅಶೋಕ್ ಮಳೆ ಹಿನ್ನೆಲೆ ಕೈಗೊಂಡಿರುವ ಮತ್ತು ಕೈಗೊಳ್ಳಬೇಕಾದ ಮುಂಜಾಗೃತಾ ಕ್ರಮಗಳ ಬಗ್ಗೆ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ.

ಕಕ್ಕಬ್ಬೆ–ಇಗ್ಗುತ್ತಪ್ಪ ದೇವಾಲಯ ಬಳಿ ಭತ್ತ ಬಿತ್ತನೆ ಆರಂಭ



ನಾಪೋಕ್ಲು, ಜು.6(ದುಗ್ಗಳ)– ಧಾರಾಕಾರ ಮಳೆಯ ನಡುವೆ ಅಲ್ಲಲ್ಲಿ ರೈತರು ಭತ್ತದ ಬಿತ್ತನೆ ಕಾರ್ಯವನ್ನು ಆರಂಭಿಸಿದ್ದಾರೆ. ಕಕ್ಕಬ್ಬೆ–ಇಗ್ಗುತ್ತಪ್ಪ ದೇವಾಲಯದ ಬಳಿ ಅಮ್ಮಂಗೇರಿಯ ಕಣಿಯರ ನಾಣಯ್ಯ ಬುಧವಾರ ಭತ್ತದ ಬಿತ್ತನೆ ಕಾರ್ಯದಲ್ಲಿ ತೊಡಗಿದ್ದರು. ಈ ಭಾಗದಲ್ಲಿ 30 ದಿನಗಳ ಬಳಿಕ ಭತ್ತದ ನಾಟಿ ಕಾರ್ಯ ಆರಂಭವಾಗಲಿದೆ.

ಭೂಕಂಪ ಪೀಡಿತ ಚೆಂಬು ಗ್ರಾಮದಲ್ಲಿ ಮೂಲ ಸೌಲಭ್ಯ ಕೊರತೆ

ಭೋರ್ಗರೆಯುತ್ತಿರುವ ನದಿ, ವಿದ್ಯುತ್ ಕಣ್ಣಾಮುಚ್ಚಾಲೆ, ನೆಟ್‌ವರ್ಕ್ ಸಮಸ್ಯೆ, ನದಿ ದಾಟಲು ಮರದ ಸೇತುವೆಯೇ ಗತಿ, ಜೀವ ಕೈಯಲ್ಲಿಡಿದು ಬದುಕುತ್ತಿರುವ ನಿವಾಸಿಗಳು



ಮಡಿಕೇರಿ,ಜು.6– ಮರದ ಸೇತುವೆಯನ್ನು ನಡೆದು ದಾಟಿದರೆ ಊರು ಪಾಲು, ಎಡವಿದರೆ ನೀರು ಪಾಲು ಎಂಬಂತಹ ಭಯಾನಕ ಸ್ಥಿತಿ ಕಳೆದ ಕೆಲವು ದಿನಗಳ ಹಿಂದೆ ಸರಣಿ ಭೂ ಕಂಪನಗಳಿಗೆ ಸಾಕ್ಷಿಯಾಗಿದ್ದ ಚೆಂಬು ಗ್ರಾಮದಲ್ಲಿದೆ.

ಕೊಡಗು ಜಿಲ್ಲೆಯ ಗಡಿ ಗ್ರಾಮ ಚೆಂಬು ಕಳೆದ ಕೆಲ ದಿನಗಳ ಹಿಂದೆ ಸರಣಿ ಭೂ ಕಂಪನದ ಮೂಲಕ ಸುದ್ದಿಯಾಗಿತ್ತು ಪ್ರಾಕೃತಿಕ ವಿಕೋಪದ ಕರಿಛಾಯೆ ಈ ಗ್ರಾಮಗಳನ್ನು ಇಂದಿಗೂ ಕಾಡುತ್ತಿದ್ದು, ದುರಂತ ಸಂಭವಿಸಿದರೆ ದೇವರು ಕೂಡ ಕಾಪಾಡಲಾರ ಎನ್ನುವ ವಿಷಮ ಸ್ಥಿತಿ ಇಲ್ಲಿದೆ. ಈ ಊರಿನ ಕೆಲವು ಕಡೆ ಮೂಲ ಸೌಲಭ್ಯಗಳ ಕೊರತೆ ಇರುವುದೇ ಇದಕ್ಕೆ ಕಾರಣ.

ಚೆಂಬು ಗ್ರಾಮದ ಕಟ್ಟಪಳ್ಳಿ ಎಂಬಲ್ಲಿ ಮಳೆಯಿಂದ ನದಿ ಭೋರ್ಗರೆಯುತ್ತಾ ಉಕ್ಕಿ ಹರಿಯುತ್ತಿದೆ. ಉಕ್ಕಿ ಹರಿಯುವ ನದಿ, ವಿದ್ಯುತ್ ಕಣ್ಣಾಮುಚ್ಚಾಲೆ, ನೆಟ್‌ವರ್ಕ್ ಸಮಸ್ಯೆಗಳಿಂದ ಈ ಗ್ರಾಮ ಹೊರ ಜಗತ್ತಿನಿಂದ ಸಂಪರ್ಕ ಕಳೆದು ಕೊಳ್ಳುತ್ತಿದೆ. ನೀರಿನ ಪ್ರಮಾಣ ಕಡಿಮೆ ಇದ್ದಲ್ಲಿ ಕಾಲ್ನಡಿಗೆ ಮೂಲಕ ಅಥವಾ ಜೀಪುಗಳಲ್ಲಿ ನದಿ ದಾಟಲು ಅಡ್ಡಿ ಇಲ್ಲ. ಆದರೆ ನೀರು ಉಕ್ಕೇರಿದರೆ ಪಟ್ಟಣಕ್ಕೆ ಬರಲು ಕಿ.ಮೀ ಪರ್ಯಾಯ ಮಾರ್ಗ ಅನುಸರಿಸುವುದು ಗ್ರಾಮಸ್ಥರಿಗೆ ಅನಿವಾರ್ಯವಾಗಿದೆ.

ಇದಕ್ಕಾಗಿ ಮಳೆಗಾಲ ಪ್ರಾರಂಭವಾಗುವ ಸಂದರ್ಭ ಈ ಗ್ರಾಮಸ್ಥರು ನದಿಯ ಕಲ್ಲು ಬಂಡೆಗಳ ಮೇಲೆ ಮರದ ಸೇತುವೆ ನಿರ್ಮಿಸಿಕೊಳ್ಳುತ್ತಾರೆ. ಈ ಸೇತುವೆಯೇ ಗ್ರಾಮಸ್ಥರ ಪಾಲಿಗೆ ಮಳೆಗಾಲದ ರಾಜ ಮಾರ್ಗವಾಗಿದೆ. ಈ ಸೇತುವೆ ಮೂಲಕ ಗ್ರಾಮಸ್ಥರು, ಕೂಲಿಗೆ ತೆರಳುವ ಕಾರ್ಮಿಕರು, ಶಾಲೆಗೆ ತೆರಳುವ ಮಕ್ಕಳು, ಅಂಗನವಾಡಿ, ಆಶಾ ಕಾರ್ಯಕರ್ತೆಯರು ಕೂಡ ಜೀವ ಕೈಯಲ್ಲಿ ಹಿಡಿದು ಸಂಚರಿಸುತ್ತಾರೆ.

ಚೆಂಬು ಗ್ರಾಮದ ಕಟ್ಟಪಳ್ಳಿ ಎಂಬಲ್ಲಿ ಸುಮಾರು 25 ಕುಟುಂಬಗಳು ವಾಸಿಸುತ್ತಿದ್ದು, ಈ ಪ್ರದೇಶದಲ್ಲಿ ಮಲೆಕುಡಿಯ ಸಮುದಾಯದ ಕುಟುಂಬಗಳು ಹೆಚ್ಚಿವೆ. ಹೊಳೆ ಮತ್ತೊಂದು ಬದಿಯಲ್ಲಿ ಉಂಬಳ ಎಂಬ ಗ್ರಾಮವಿದ್ದು, ಹಲವಾರು ಸಮಯಗಳಿಂದಲೂ ಇಲ್ಲಿನ ಜನ ಈ ಸಮಸ್ಯೆ ಅನುಭವಿಸುತ್ತಿದ್ದಾರೆ.

ಮಳೆಯಿಂದ ಹಳ್ಳ–ಕೊಳ್ಳಗಳು ಭರ್ತಿ

ಹಲವಾರು ಕಡೆ ಗದ್ದೆಗಳಿಗೆ ನುಗ್ಗಿದ ನೀರು

ನಾಪೋಕ್ಲು ಜು.6 (ದುಗ್ಗಳ)– ಹೋಬಳಿ ವ್ಯಾಪ್ತಿಯಲ್ಲಿ ಬಿಟ್ಟು ಬಿಟ್ಟು ಮಳೆ ಬಿರುಸಿನಿಂದ ಸುರಿಯುತ್ತಿದ್ದು ಜೀವ ನದಿ ಕಾವೇರಿ ಪ್ರವಾಹದಿಂದ ಬಹುತೇಕ ಕಡೆ ಹಳ್ಳಕೊಳ್ಳಗಳು ಭರ್ತಿಯಾಗಿವೆ. ನಾಪೋಕ್ಲು ಮೂರ್ನಾಡು ಸಂಪರ್ಕ ರಸ್ತೆಯ ಬೊಳಿಬಾಣೆ ಎಂಬಲ್ಲಿ ರಸ್ತೆಯ ಮೇಲೆ ಪ್ರವಾಹದಿಂದ ಹರಿಯುತ್ತಿದ್ದು ಲಘು ವಾಹನಗಳ ಸಂಚಾರಕ್ಕೆ ಅಡ್ಡಿಯಾಗಿದೆ. ಮಳೆ ಬಿರುಸುಗೊಂಡಲ್ಲಿ ರಸ್ತೆ ಸಂಪರ್ಕ ಕಡಿತಗೊಳ್ಳುವ ಸಾಧ್ಯತೆ ಇದೆ. ಚೆರಿಯಪರಂಬು ಕಲ್ಲುಮೊಟ್ಟೆ ಸಂಪರ್ಕ ರಸ್ತೆಯು ಜಲಾವೃತವಾಗಿದ್ದು ಸಂಪರ್ಕ ಕಡಿದುಕೊಂಡಿದೆ. ಕಾವೇರಿ ನದಿ ತೀರದ ಹಲವು ಗದ್ದೆಗಳು ಜಲಾವೃತವಾಗಿವೆ. ಎಮ್ಮೆಮಾಡು, ಬೇತು, ಪಾರಾಣೆ, ನಾಪೋಕ್ಲು, ಬೊಳಿಬಾಣೆ, ಕಕ್ಕಬ್ಬೆ, ಬಲ್ಲಮಾವಟಿ, ಎಮ್ಮೆಮಾಡು, ಭಾಗಮಂಡಲ, ಬೆಟ್ಟಗೇರಿ. ಪಾಲೂರು ಗ್ರಾಮದಲ್ಲಿಯ ಗದ್ದೆಗಳಿಗೆ ನೀರು ನುಗ್ಗಿದ್ದು ಜಲಾವೃತವಾಗಿದೆ.

ಸ್ವಚ್ಛ ಸುರಕ್ಷಿತ ಋತುಚಕ್ರ ನಿರ್ವಹಣೆಯ ವಿನೂತನ ರಾಜ್ಯಮಟ್ಟದ

'ಮೈತ್ರಿ ಮುಟ್ಟಿನ ಕಪ್' ಯೋಜನೆಗೆ ಚಾಲನೆ



ಚಾಮರಾಜನಗರ, ಜು.6–ಹದಿಹರೆಯದ ಹೆಣ್ಣುಮಕ್ಕಳ ಸ್ವಚ್ಛ ಹಾಗೂ ಸುರಕ್ಷಿತ ಋತುಚಕ್ರ ನಿರ್ವಹಣೆಗಾಗಿ ಸರ್ಕಾರದ ವಿನೂತನ 'ಮೈತ್ರಿ ಮುಟ್ಟಿನ ಕಪ್(ಮೆನ್ಸ್ಟ್ರುಯೆಲ್ ಕಪ್)–ಶುಚಿ' ಯೋಜನೆಗೆ ಇಂದು ವಿಧ್ಯುಕ್ತ ಚಾಲನೆ ದೊರೆಯಿತು.

ಜಿಲ್ಲೆಯ ಯಳಂದೂರು ತಾಲೂಕಿನ ಇತಿಹಾಸ ಪ್ರಸಿದ್ಧ ಯಾತ್ರಾ ಕ್ಷೇತ್ರ ಬಿಳಿಗಿರಿರಂಗನ ಬೆಟ್ಟದ ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ಕಾರ್ಯಕ್ರಮದಲ್ಲಿ ಮೈತ್ರಿ ಮುಟ್ಟಿನ ಕಪ್–ಶುಚಿ ಯೋಜನೆಗೆ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಹಾಗೂ ಆರೋಗ್ಯ ಇಲಾಖೆ ಸಚಿವ ಡಾ.ಕೆ.ಸುಧಾಕರ್ ಚಾಲನೆ ನೀಡಿದರು. ಯೋಜನೆಯ ಕುರಿತು ಜಾಗೃತಿ ಮೂಡಿಸುವ ವೀಡಿಯೋ ಅನ್ನು ಸಚಿವರು ಬಿಡುಗಡೆಗೊಳಿಸಿದರು. ಹೆಣ್ಣು ಮಕ್ಕಳಿಗೆ ಮುಟ್ಟಿನ ಕಪ್ ಅನ್ನು ಗಣ್ಯರು ವಿತರಿಸಿದರು. ಯೋಜನೆಯ ಕುರಿತ ಪೋಸ್ಟರ್ ಅನ್ನು ಬಿಡುಗಡೆ ಮಾಡಲಾಯಿತು.

ಸಚಿವ ವಿ.ಸೋಮಣ್ಣ ಮಾತನಾಡಿ, ಋತುಸ್ರಾವದ ಸಮಯದಲ್ಲಿ ಹೆಣ್ಣುಮಕ್ಕಳು ಅನುಭವಿಸುವ ವೇದನೆ, ನೋವು ಅರ್ಥ ಮಾಡಿಕೊಂಡು ಅವರಿಗಾಗಿ ರೂಪಿಸಿರುವ ಮೈತ್ರಿ ಮುಟ್ಟಿನ ಕಪ್–ಶುಚಿ ಯೋಜನೆ ಅತ್ಯುತ್ತಮ ಕೊಡುಗೆಯಾಗಿದೆ. ಯೋಜನೆಗೆ ಜಿಲ್ಲೆಯ ಪವಿತ್ರ ಸ್ಥಳದಲ್ಲಿ ಚಾಲನೆ ನೀಡಿರುವುದಕ್ಕೆ ಮುಖ್ಯಮಂತ್ರಿಯ ಬಸವರಾಜ ಬೊಮ್ಮಾಯಿ ಹಾಗೂ ಆರೋಗ್ಯ ಸಚಿವ ಸುಧಾಕರ್ ಅವರಿಗೆ ಜಿಲ್ಲೆಯ ಜನತೆಯ ಪರವಾಗಿ ಅಭಿನಂದಿಸುವುದಾಗಿ ತಿಳಿಸಿದರು.

ಮೈತ್ರಿ ಮುಟ್ಟಿನ ಕಪ್ ಯೋಜನೆ ಹೆಣ್ಣು ಮಕ್ಕಳಿಗೆ ಧೈರ್ಯ ತುಂಬುವಲ್ಲಿ ಮುಖ್ಯವಾಗಿದೆ. ಇಡೀ ಭಾರತದಲ್ಲೇ ರಾಜ್ಯವು ಮೊದಲ ಬಾರಿಗೆ ಈ ಯೋಜನೆಯನ್ನು ಜಾರಿಗೊಳಿಸಿದೆ. ಈ ಅತ್ಯುತ್ತಮ ಯೋಜನೆಯನ್ನು ಹೆಣ್ಣು ಮಕ್ಕಳಿಗೆ ಮನ ಮುಟ್ಟುವಂತೆ ತಲುಪಿಸುವ ಕೆಲಸವನ್ನು ಸಂಬಂಧಪಟ್ಟ ಇಲಾಖೆ ಹಾಗೂ ಈ ಯೋಜನೆಗೆ ನಿಯೋಜಿತರಾಗಿರುವ ರಾಯಭಾರಿಗಳದ್ದಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವರು ತಿಳಿಸಿದರು.

ಸಚಿವ ಡಾ.ಕೆ.ಸುಧಾಕರ್ ಮಾತನಾಡಿ, ಋತುಚಕ್ರ ಹೆಣ್ಣು ಮಕ್ಕಳ ದೇಹದಲ್ಲಿ ನೈಸರ್ಗಿಕವಾಗಿ ನಡೆಯುವ ನಿರಂತರ ಪ್ರಕ್ರಿಯೆ. ಈ ಬಗ್ಗೆ ಆತಂಕ ಮುಜುಗರಕ್ಕೆ ಒಳಗಾಗಬೇಕಿಲ್ಲ. ಋತುಸ್ರಾವ ಸಂದರ್ಭದಲ್ಲಿ ಅವರು ಶುಚಿತ್ವ ಹಾಗೂ ಆರೋಗ್ಯ ಹಿತ ದೃಷ್ಟಿಯಿಂದ ಪರಿಸರ ಸ್ನೇಹಿ ಹಾಗೂ ಸುಲಭ ನಿರ್ವಹಣೆಯ ಮೈತ್ರಿ ಮುಟ್ಟಿನ ಕಪ್ ಅನ್ನು ವಿತರಿಸುವ ಈ ಸರ್ಕಾರದ ಯೋಜನೆ ಹೆಣ್ಣು ಮಕ್ಕಳ ಹೃದಯ ಮುಟ್ಟುವ ಯೋಜನೆ ಎಂದರು.

ಸಮಾಜದ ಕಟ್ಟ ಕಡೆಯ ಜನರಿಗೂ ಸರ್ಕಾರದ ಸೌಲಭ್ಯ ತಲುಪಬೇಕೆಂಬ ಉದ್ದೇಶದೊಂದಿಗೆ ಗಡಿ ಜಿಲ್ಲೆ ಚಾಮರಾಜನಗರ ಹಾಗೂ ಕರಾವಳಿ ಜಿಲ್ಲೆ ದಕ್ಷಿಣ ಕನ್ನಡದಲ್ಲಿ ಈ ವಿಶಿಷ್ಟ ಯೋಜನೆಯನ್ನು ಸರ್ಕಾರ ಪ್ರಾಯೋಗಿಕವಾಗಿ ಜಾರಿಗೆ ತಂದಿದೆ. ಮುಂದೆ ರಾಜ್ಯಾದ್ಯಂತ ವಿಸ್ತರಿಸಲಾಗುವುದು ಎಂದು ಆರೋಗ್ಯ ಸಚಿವರು ತಿಳಿಸಿದರು.

ಇಲ್ಲಿನ ಆದಿವಾಸಿ ಬುಡಕಟ್ಟು ಸೋಲಿಗ ಸಮುದಾಯದ ಹೆಣ್ಣು ಮಕ್ಕಳಿಗೆ ನರ್ಸಿಂಗ್ ಹಾಗೂ ಆಶಾ ಕಾರ್ಯಕರ್ತೆಯರ ನೇಮಕಾತಿಗೆ ವಿಶೇಷವಾಗಿ ಪರಿಗಣಿಸಲಾಗುತ್ತದೆ. ಶಾಸಕ ಎನ್.ಮಹೇಶ್ ಅವರ ಮನವಿಯಂತೆ ಯಳಂದೂರು ತಾಲೂಕು ಆಸ್ಪತ್ರೆ ಕಾಮಗಾರಿಯನ್ನು ಶೀಘ್ರದಲ್ಲೇ ಆರಂಭಿಸಲಾಗುವುದು. ಹೆಚ್ಚುವರಿ ಡಯಾಲಿಸಿಸ್ ಯಂತ್ರಗಳ ವ್ಯವಸ್ಥೆ ಮಾಡಲಾಗುವುದು ಎಂದು ಆರೋಗ್ಯ ಸಚಿವ ವಿ.ಸುಧಾಕರ್ ಭರವಸೆ ನೀಡಿದರು.

ಶಾಸಕ ಎನ್.ಮಹೇಶ್, ಮೈತ್ರಿ ಮುಟ್ಟಿನ ಕಪ್ ಯೋಜನೆಯ ರಾಯಭಾರಿಗಳಾದ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಪಟು ವೇದಾ ಕೃಷ್ಣಮೂರ್ತಿ, ಚಿತ್ರ ನಟಿ ಅಮೃತ ಅಯ್ಯಂಗಾರ್ ಮಾತನಾಡಿದರು.

ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಿ.ಬಿ.ಶಾಂತಮೂರ್ತಿ ಕುಲಗಾಣ, ಬಿಳಿಗಿರಿ ರಂಗನಬೆಟ್ಟದ ಗ್ರಾಪಂ ಅಧ್ಯಕ್ಷೆ ಸಾಕಮ್ಮ ನಾಗೇಶ್, ಉಪಾಧ್ಯಕ್ಷ ಪ್ರತೀಪ್ ಕುಮಾರ್, ಜಿಲ್ಲಾ ಬುಡಕಟ್ಟು ಅಭಿವೃದ್ಧಿ ಸಂಘದ ಅಧ್ಯಕ್ಷ ಸಿ.ಮಹದೇವು, ತಾಲೂಕು ಸೋಲಿಗರ ಅಭಿವೃದ್ಧಿ ಸಂಘದ ಅಧ್ಯಕ್ಷ ದಾಸೇಗೌಡ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತ ಡಿ.ರಂದೀಪ್, ಜಿಲ್ಲಾಧಿಕಾರಿ ಚಾರುಲತಾ ಸೋಮಲ್, ಜಿಪಂ ಸಿಇಓ ಕೆ.ಎಂ.ಗಾಯಿತ್ರಿ, ಎಡಿಸಿ ಎಸ್.ಕಾತ್ಯಾಯಿನಿದೇವಿ, ಎಎಸ್ಪಿ ಕೆ.ಎಸ್.ಸುಂದರ್ ರಾಜ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯದ ನಿರ್ದೇಶಕ ಡಾ.ಎಂ.ಇಂದುಮತಿ, ಆರೋಗ್ಯ ಇಲಾಖೆ ಹಿರಿಯ ಅಧಿಕಾರಿಗಳಾದ ಡಾ.ಜಿ.ಎನ್.ಶ್ರೀನಿವಾಸ್, ಡಾ.ಬಿ.ವೀಣಾ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆ.ಎಂ.ವಿಶ್ವೇಶ್ವರಯ್ಯ ಕಾರ್ಯಕ್ರಮದಲ್ಲಿದ್ದರು.

ಪಿಎಸ್‌ಐ ಹಗರಣ ಬಗ್ಗೆ ಮಾತನಾಡುವ ನೈತಿಕತೆ ಕಾಂಗ್ರೆಸ್ಸಿಗಿಲ್ಲ

ಚಾಮರಾಜನಗರ, ಜು.6(ಎಸ್‌ಎಸ್)–ಪಿಎಸ್‌ಐ ಹಗರಣದ ಬಗ್ಗೆ ಮಾತನಾಡುವ ನೈತಿಕತೆ ಕಾಂಗ್ರೆಸ್‌ಗೆ ಇಲ್ಲ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಹೇಳಿದರು.

ಯಳಂದೂರು ತಾಲೂಕಿನ ಬಿಳಿಗಿರಿರಂಗನಬೆಟ್ಟದಲ್ಲಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ಗೃಹ ಸಚಿವರಾಗಿರುವ ಆಗರ ಜ್ಞಾನೇಂದ್ರ ಅವರು ಪಿಎಸ್‌ಐ ನೇಮಕಾತಿ ಹಗರದಣದ ತನಿಖೆಯನ್ನು ಪಾರದರ್ಶಕವಾಗಿ ನಡೆಸುತ್ತಿದ್ದಾರೆ. ಈ ಸಂಬಂಧ ಹಿರಿಯ ಅಧಿಕಾರಿಗಳನ್ನು ಬಂಧಿಸಿದ ಯಾವುದಾದರೂ ಸರ್ಕಾರ ಇದ್ದರೆ ಅದು ಬಿಜೆಪಿ ಸರ್ಕಾರ ಮಾತ್ರ ಆದರೆ ವಿಪಕ್ಷ ನಾಯಕ ಸಿದ್ದರಾಮಯ್ಯ ಗೃಹ ಸಚಿವರ ರಾಜೀನಾಮೆಗೆ ಒತ್ತಾಯಿಸುವ ಹೇಳಿಕೆ ಸರಿಯಲ್ಲ ಎಂದರು.

ತನಿಖೆಯ ಬಗ್ಗೆ ಮಾತನಾಡುವ ನೈತಿಕತೆ ಕಾಂಗ್ರೆಸ್ ಪಕ್ಷಕ್ಕೆ ಇಲ್ಲ. ಯಾವುದೇ ಹಗರಣದ ಬಗ್ಗೆ ಈ ರೀತಿಯ ಗಂಭೀರ ತನಿಖೆ ಆಗಿಲ್ಲ. ಕಾಂಗ್ರೆಸ್ ಸರ್ಕಾರ ಎಲ್ಲಾ ಹಗರಣಗಳನ್ನು, ತನಿಖಾ ವರದಿಗಳನ್ನು ಮುಚ್ಚಿಹಾಕಿತ್ತು. ಕೆಂಪಣ್ಣ ಆಯೋಗದ ವರದಿ, ರಿಡೊ ಪ್ರಕರಣ ಏನಾಯ್ತು? ಎಂಬುದು ಎಲ್ಲರಿಗೂ ತಿಳಿದಿದೆ ಎಂದರು.

ಬೇರೆ ಕ್ಷೇತ್ರ ಹುಡುಕುವುದು ಸರಿಯಲ್ಲ: ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದವರು. ರಾಜ್ಯದ 224 ವಿಧಾನಸಭಾ ಕ್ಷೇತ್ರದಲ್ಲೂ ಅವರನ್ನು ಆಹ್ವಾನಿಸುವುದು ಸಹಜ. ಸಿದ್ದರಾಮಯ್ಯರನ್ನು ಅವರ ಜಿಲ್ಲೆ(ಚಾಮುಂಡೇಶ್ವರಿ ಕ್ಷೇತ್ರ)ಯಲ್ಲಿ ಕೈ ಬಿಟ್ಟರೂ ಬೇರೆ ಜಿಲ್ಲೆ(ಬಾದಾಮಿ ಕ್ಷೇತ್ರ)ಯವರು ಕೈ ಹಿಡಿದರು. ಈಗ ಬಾದಾಮಿ ಕ್ಷೇತ್ರ ಬಿಟ್ಟು ಬೇರೆ ಕ್ಷೇತ್ರಕ್ಕೆ ಹೋಗುತ್ತೇನೆ ಎಂದರೆ ಏನರ್ಥ? ಅವರು ದೊಡ್ಡನಾಯಕರು ಹಾಗೂ ಅಪಾರ ರಾಜಕೀಯ ಅನುಭವವುಳ್ಳ ನಾಯಕರಾಗಿ ಚುನಾವಣೆಯಿಂದ ಚುನಾವಣೆಗೆ ಬೇರೆಬೇರೆ ಕ್ಷೇತ್ರ ಹುಡುಕುವುದು ಸರಿಯಲ್ಲ ಎಂದು ಪ್ರಶ್ನೆಯೊಂದಕ್ಕೆ ಸುಧಾಕರ್ ಉತ್ತರಿಸಿದರು.

ಚಾಮರಾಜನಗರದಲ್ಲಿ ನಡೆದ ಆಕ್ಸಿಜನ್ ದುರಂತದ ಬಗ್ಗೆ ನ್ಯಾಯಾಂಗ ತನಿಖೆಯ ವರದಿ ಬಂದಿದೆ. ಆರೋಗ್ಯ ಇಲಾಖೆ ವರದಿ ಅಧ್ಯಯನ ನಡೆಸುತ್ತಿದೆ. ದುರಂತಕ್ಕೆ ಕಾರಣರಾದ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವರು ಹೇಳಿದರು.



ಗುಂಡ್ಲುಪೇಟೆ ತಾಲೂಕಿನ ಬೇಗೂರು ಗ್ರಾಮದಲ್ಲಿ ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಜೀವನ ಜ್ಯೋತಿ ಚಾರಿಟಬಲ್ ಟ್ರಸ್ಟ್ ಉದ್ಘಾಟಿಸಿದ ಶಾಸಕ ಸಿ.ಎಸ್.ನಿರಂಜನ್ ಕುಮಾರ್ ಟ್ರಸ್ಟ್‌ನಿಂದ ಸಾರ್ವಜನಿಕರಿಗೆ ಮುಕ್ತಗೊಳಿಸಿದ ಉಚಿತ ತುರ್ತು ಚಿಕಿತ್ಸಾ ವಾಹನಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಯುವ ಮುಖಂಡ ಹೆಚ್.ಎಂ.ಗಣೇಶ್‌ಪ್ರಸಾದ್, ಚಾಮುಲ್ ಮಾಜಿ ಅಧ್ಯಕ್ಷ ಹೆಚ್.ಎಸ್.ನಂಜುಂಡಪ್ರಸಾದ್, ಗ್ರಾಪಂ ಅಧ್ಯಕ್ಷೆ ಇಂದಿರಾ ಸುರೇಶ್, ಜಿಪಂ ಮಾಜಿ ಉಪಾಧ್ಯಕ್ಷ ಕಬ್ಬಳ್ಳಿ ಮಹೇಶ್, ತಾಪಂ ಮಾಜಿ ಅಧ್ಯಕ್ಷ ಎಚ್.ಎನ್.ಬಸವರಾಜು, ರಾಘವಾಪುರ ಗ್ರಾಪಂ ಉಪಾಧ್ಯಕ್ಷ ಎಸ್.ಮಹದೇವಪ್ಪ, ಬಿಜೆಪಿ ತಾಲೂಕು ಮಂಡಲ ಅಧ್ಯಕ್ಷ ಜಗದೀಶ್, ಗೌಡಿಕೆ ಸೋಮಶೇಖರ್, ಹೋಟೆಲ್ ಉದ್ಯಮಿ ನಟರಾಜ್, ಎಪಿಎಂಸಿ ಸದಸ್ಯ ಕಮರಹಳ್ಳಿ ರವಿ, ಭೋಗಯ್ಯನಹುಂಡಿ ಬಾಬುಪ್ರಸಾದ್ ನಾಗರಾಜು, ಟ್ರಸ್ಟ್‌ನ ಅಧ್ಯಕ್ಷ ಗೌಡಿಕೆ ನಾಗರಾಜು ಹಾಗೂ ಸದಸ್ಯರಿದ್ದರು.

ಗುಂಡ್ಲುಪೇಟೆ ತಾಲೂಕಿನ ಬರ್ಗಿ ಗ್ರಾಮದಲ್ಲಿ ಗ್ರಾಮ ದೇವತೆ ಶ್ರೀ ಮಾರವ್ವ ದೇವಿಯ ಜಾತ್ರೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು.



ಬೀದಿಗೆ ಬಂದ ಬಿಜೆಪಿ ಭಿನ್ನಮತ: ಜಿಲ್ಲಾ ಮುಖಂಡರ ವಿರುದ್ಧ ಕಾರ್ಯಕರ್ತರಿಂದ ಮೊಂಬತ್ತಿ ಮೆರವಣಿಗೆ



ಚಾಮರಾಜನಗರ, ಜು.6(ಎಸ್‌ಎಸ್)– ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಬೂದಿ ಮುಚ್ಚಿದ ಕೆಂಡದಂತಿದ್ದ ಬಿಜೆಪಿಯ ಭಿನ್ನಮತ ಬೀದಿಗೆ ಬಂದಿದೆ. ಬಿಜೆಪಿ ಜಿಲ್ಲಾಧ್ಯಕ್ಷರು ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿದ್ದಾರೆ ಎಂದು ಆರೋಪಿಸಿ ಕಾರ್ಯಕರ್ತರು ನಗರದಲ್ಲಿ ಬುಧವಾರ ಸಂಜೆ ಮೊಂಬತ್ತಿ ಮೆರವಣಿಗೆ ನಡೆಸಿದರು.

'ಜಿಲ್ಲಾ ಬಿಜೆಪಿ ಕಮಿಟಿ ಹಠವೋ, ಬಿಜೆಪಿ ಬಚಾವೋ' ಎಂದು ಘೋಷಣೆ ಕೂಗುವ ಮೂಲಕ ಜಿಲ್ಲಾ ಸಮಿತಿ ಪದಾಧಿಕಾರಿಗಳ ವಿರುದ್ಧ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ಬಿಜೆಪಿಯ ಭಿನ್ನಮತದ ಬಗ್ಗೆ **ಬುಧವಾರದ 'ಮೈಸೂರು ಮಿತ್ರ' ಸಂಚಿಕೆಯ ಪುಟ 6ರಲ್ಲಿ 'ಬೂದಿಮುಚ್ಚಿದ ಕೆಂಡದಂತಿರುವ ಬಿಜೆಪಿಯ ಭಿನ್ನಮತ' ಶೀರ್ಷಿಕೆಯಡಿ ವರದಿ ಪ್ರಕಟಿಸಲಾಗಿತ್ತು.**

ಮೊಂಬತ್ತಿ ಮೆರವಣಿಗೆ: ಪಕ್ಷ ವಿರೋಧಿ ಚಟುವಟಿಕೆ ಆರೋಪದಡಿ ಜಿಲ್ಲಾ ಬಿಜೆಪಿಯಿಂದ ತಾಪಂ ಮಾಜಿ ಉಪಾಧ್ಯಕ್ಷ ದಯಾನಿಧಿ ಅವರನ್ನು 6 ವರ್ಷಗಳವರೆಗೆ ಉಚ್ಚಾಟನೆ ಮಾಡಿರುವುದನ್ನು ವಿರೋಧಿಸಿ ಪಕ್ಷದ ಕಾರ್ಯಕರ್ತರು, ದಯಾನಿಧಿ ಅಭಿಮಾನಿಗಳು ನಗರದಲ್ಲಿ ಮೊಂಬತ್ತಿ ಮೆರವಣಿಗೆ ನಡೆಸಿದರು.

ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದ ಆವರಣದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು, ಅಲ್ಲಿಂದ ಮೆರವಣಿಗೆ ಹೊರಟು ತ್ಯಾಗರಾಜ ರಸ್ತೆ, ನಗರಸಭೆ ಕಚೇರಿ ವೃತ್ತ, ಅಗ್ರಹಾರ ಬೀದಿ, ಭುವನೇಶ್ವರಿ ವೃತ್ತ ತಲುಪಿ, ವಾಪಸ್ ಚಾಮರಾಜೇಶ್ವರ ಉದ್ಯಾನವನದ ಬಳಿ ಸಮಾವೇಶಗೊಂಡರು.

ಬಿಜೆಪಿ ಮುಖಂಡ ಚಿಕ್ಕಕೂಸಪ್ಪ ಮಾತನಾಡಿ, ಜಿಲ್ಲಾ ಬಿಜೆಪಿ ಸರ್ವಾಧಿಕಾರಿ ಧೋರಣೆಯಿಂದ ವರ್ತಿಸುತ್ತಿದೆ. ಪ್ರಾಮಾಣಿಕ ಕಾರ್ಯಕರ್ತರಿಗೆ ಉಳಿಗಾಲವಿಲ್ಲ. ಕಾಂಗ್ರೆಸ್ ವಕ್ತಾರರಂತೆ ಜಿಲ್ಲಾ ಸಮಿತಿ ವರ್ತಿಸುತ್ತಿದೆ. ಈ ಸಮಿತಿ ಇದ್ದರೆ ಜಿಲ್ಲೆಯಲ್ಲಿ ಚುನಾವಣೆ ಗೆಲ್ಲಲು ಸಾಧ್ಯವಿಲ್ಲ ಎಂದು ಕಿಡಿಕಾರಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಬಿಜೆಪಿ ರಾಜ್ಯ ಉಪಾಧ್ಯಕ್ಷ ವಿಜಯೇಂದ್ರ ಬೆಂಬಲಿಗರನ್ನು ಪಕ್ಷದಿಂದ ಉಚ್ಚಾಟನೆ ಮಾಡುವ ಕೆಲಸ ನಿರಂತರವಾಗಿದೆ. ಇದಕ್ಕೆ ದಯಾನಿಧಿ ಉಚ್ಚಾಟನೆ ಉದಾಹರಣೆಯಾಗಿದೆ ಎಂದು ದೂರಿದರು.

ಮೆರವಣಿಗೆಯಲ್ಲಿ ಕಾರ್ಯಕರ್ತರಾದ ರಮೇಶ್ ಬಾಬು, ಸುಪ್ರೀತ್ ವೀರನಪುರ, ಚೆಲುವರಾಜ್, ಶಶಿ, ಪ್ರಜ್ವಲ್ ನಾಯಕ, ಪ್ರವೀಣ್, ಗಿರೀಶ್ ಪುಣಜನೂರು, ಮಹೇಶ್, ಮಾಧು ಮಂಗಲ, ದೇವರಾಜ್, ರಾಜಪ್ಪ ಮಂಗಲ, ಶಿವರುದ್ರಸ್ವಾಮಿ, ಕುಮಾರ್, ರವಿ, ನಾಗಶೆಟ್ಟಿ ಗುರುಪ್ರಸಾದ್ ಸೋಮವಾರಪೇಟೆ, ರಾಜ್‌ಮಲ್ಲು, ಗಿರೀಶ್, ಅಭಿಷೇಕ್, ಸಂತೋಷ್ ಹೆಬ್ಬಸೂರು ಇತರರು ಭಾಗವಹಿಸಿದ್ದರು.

> ಪಕ್ಷದಲ್ಲಿ ಜವಾಬ್ದಾರಿಯುತ ಸ್ಥಾನದಲ್ಲಿರುವವರು ಬಾಯಿಗೆ ಬಂದಂತೆ ಮಾತನಾಡಬಾರದು. ಎಲ್ಲಕ್ಕಿಂತಲೂ ಶಿಸ್ತು ಮುಖ್ಯ. ಕೆಲವು ತೀರ್ಮಾನಗಳನ್ನು ಜಿಲ್ಲಾ ಅಧ್ಯಕ್ಷರು ತೆಗೆದುಕೊಂಡಿದ್ದಾರೆ. ಇದರಲ್ಲಿ ಏನಾದರೂ ವ್ಯತ್ಯಾಸವಾಗಿದ್ದರೆ ಅಂತಹವರು ವರಿಷ್ಠರೊಡನೆ ಮಾತನಾಡಬೇಕು. ಪಕ್ಷದಲ್ಲಿ ಭಿನ್ನನೂ ಇಲ್ಲ, ಮತನೂ ಇಲ್ಲ. ಶಿಸ್ತನ್ನು ಕಾಪಾಡಲು ಜಿಲ್ಲಾ ಅಧ್ಯಕ್ಷರು ಒಳ್ಳೆಯ ತೀರ್ಮಾನಗಳನ್ನು ಕೈಗೊಂಡಿದ್ದಾರೆ.
>
> **-ವಿ.ಸೋಮಣ್ಣ,** ಜಿಲ್ಲಾ ಉಸ್ತುವಾರಿ ಸಚಿವ.

ಸಿದ್ದರಾಮೋತ್ಸವದಿಂದ ಸಿದ್ದರಾಮಯ್ಯ ಬೆಂಬಲಿಗರಿಗೆ ರಾಜಕೀಯ ಲಾಭ!

ಬೆಂಗಳೂರು, ಜು. 6(ಕೆಎಂಶಿ)–ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯನವರ 75ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ದಾವಣಗೆರೆಯಲ್ಲಿ ಆಗಸ್ಟ್ 3 ರಂದು ನಡೆಸುತ್ತಿರುವ ಸಿದ್ದರಾಮೋತ್ಸವದಿಂದ ರಾಜಕೀಯ ಲಾಭ ಪಡೆದುಕೊಳ್ಳಲು ಅವರ ಬೆಂಬಲಿಗರು ಮುಂದಾಗಿದ್ದಾರೆ.

ಈ ಆಚರಣೆಗಾಗಿಯೇ ಅಮೃತ ಮಹೋತ್ಸವ ಸಮಿತಿ ರಚಿಸಿದ್ದು, ಸಮಿತಿಯಲ್ಲಿ 150 ಪದಾಧಿಕಾರಿಗಳನ್ನು ಗೌರವಾಧ್ಯಕ್ಷ ಆರ್.ವಿ. ದೇಶಪಾಂಡೆ ನೇಮಕ ಮಾಡಿದ್ದಾರೆ.

ಇಡೀ ರಾಜ್ಯಾದ್ಯಂತ ಪ್ರತಿ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್‌ನ ಪ್ರಮುಖ ಕಾರ್ಯಕರ್ತರು, ಇಲ್ಲವೆ ಶಾಸಕರು, ಪದಾಧಿಕಾರಿಗಳ ಪಟ್ಟಿಯಲ್ಲಿದ್ದಾರೆ. ರಾಜ್ಯ ಕಾಂಗ್ರೆಸ್‌ನ ಹಿರಿಯ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ವೀರಪ್ಪ ಮೊಯಿಲಿ, ಡಾ. ಜಿ. ಪರಮೇಶ್ವರ್, ಡಿ.ಕೆ. ಶಿವಕುಮಾರ್ ಸೇರಿದಂತೆ ಕೆಲವು ನಾಯಕರನ್ನು ಹೊರತುಪಡಿಸಿದರೆ, ಉಳಿದ ಎಲ್ಲ ನಾಯಕರು ಸಮಿತಿಯಲ್ಲಿದ್ದು, ಮಹೋತ್ಸವವನ್ನು ದೊಡ್ಡ ಪ್ರಮಾಣದಲ್ಲಿ ಯಶಸ್ವಿಗೊಳಿಸಿ, ಒಂದು ರಾಜಕೀಯ ತಿರುವು ಪಡೆಯಲು ಹೊರಟಿದ್ದಾರೆ.

ಸಮಿತಿಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಬೆರಳೆಣಿಕೆಯಷ್ಟು ಅವರ ಬೆಂಬಲಿಗರು ಇದ್ದರೆ, ಉಳಿದವರೆಲ್ಲರೂ ಸಿದ್ದರಾಮಯ್ಯನವರ ಅನುಯಾಯಿಗಳೇ. ಕಾರ್ಯಕಾರಿ ಸಮಿತಿಯಲ್ಲಿ ಐವರು ಪದಾಧಿಕಾರಿಗಳಿದ್ದರೆ, 25 ಮಂದಿ ಉಪಾಧ್ಯಕ್ಷರು, 23 ಮಂದಿ ಪ್ರಧಾನ ಕಾರ್ಯದರ್ಶಿಗಳು, 13 ಮಂದಿ ಸಂಘಟನಾ ಕಾರ್ಯದರ್ಶಿಗಳು ಸಮಿತಿಯಲ್ಲಿದ್ದಾರೆ. ದಾವಣಗೆರೆಯಲ್ಲಿ ನಡೆಯುತ್ತಿರುವ ಈ ಸಮಾವೇಶಕ್ಕೆ ಐದು ಲಕ್ಷ ಮಂದಿ ಪಾಲ್ಗೊಳ್ಳಲಿದ್ದಾರೆ ಎಂದು ಈಗಾಗಲೇ ಅಧ್ಯಕ್ಷರು ತಿಳಿಸಿದ್ದಾರೆ.

ಒಂದನೇ ಪುಟದಿಂದ

ಚಾಮುಂಡಿಬೆಟ್ಟಕ್ಕೆ ರೋಪ್‌ವೇ ಬೇಡ

ಈ ಸಂದರ್ಭ ಮಾತನಾಡಿದ ಶಾಸಕ ಜಿ.ಟಿ.ದೇವೇಗೌಡರು, ಚಾಮುಂಡಿಬೆಟ್ಟಕ್ಕೆ ಹೋಗಲು ದಾರಿ ಇದೆ, ಮೆಟ್ಟಿಲುಗಳಿವೆ. ಅರಣ್ಯ ಸಂಪತ್ತಿನ ನಿಸರ್ಗದ ಮಡಿಲ ಸೊಬಗನ್ನು ಸವಿಯುತ್ತಾ ವಾಹನ, ಕಾಲ್ನಡಿಗೆಯಲ್ಲೇ ಸಾಗಿ ತಾಯಿ ಚಾಮುಂಡೇಶ್ವರಿ ದೇವಿಯ ದರ್ಶನ ಮಾಡಿ ಬರಬಹುದು. ಇಂತಹ ಸೌಲಭ್ಯವಿರುವಾಗ ಬೆಟ್ಟಕ್ಕೆ ರೋಪ್‌ವೇ ಅಗತ್ಯವಿಲ್ಲ. ಯಾವುದೇ ಕಾರಣಕ್ಕೂ ಈ ಯೋಜನೆ ಜಾರಿ ಮಾಡಬೇಡಿ ಎಂದು ಖಡಾಖಂಡಿತವಾಗಿ ಹೇಳಿದರು. ಸಂಸದ ಪ್ರತಾಪ್ ಸಿಂಹ ಮಾತನಾಡಿ, ಈ ವರ್ಷದ ಬಜೆಟ್‌ನಲ್ಲಿ ಚಾಮುಂಡಿಬೆಟ್ಟದ ರೋಪ್‌ವೇ ಯೋಜನೆ ಪ್ರಸ್ತಾಪಿಸಲಾಗಿದೆ. ಆದರೆ, ಅದು ಶ್ರದ್ಧಾ–ಭಕ್ತಿಯ ಕೇಂದ್ರ. ರಾಜ–ಮಹಾರಾಜರು ಚಾಮುಂಡಿಬೆಟ್ಟವನ್ನು ಧಾರ್ಮಿಕ ಸ್ಥಳವಾಗಿ ಪ್ರಾಮುಖ್ಯವಾಗಿಸಿದ್ದರು. ಈಗಲೂ ಅದನ್ನು ಭಕ್ತಿಗೆ ಸೀಮಿತವಾಗಿರಿಸಿ. ಅದೇ ರೀತಿ ಬೆಟ್ಟದ ಮೇಲೆ ಎಲ್ಲೆಂದರಲ್ಲಿ ಮನೆ, ಕಟ್ಟಡಗಳು ನಿರ್ಮಾಣವಾಗಲು ಬಿಡಬಾರದು ಎಂದು ನುಡಿದರು.

ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಮಾತನಾಡಿ, ಚಾಮುಂಡಿಬೆಟ್ಟ ದೂರವೂ ಇಲ್ಲ, ಅತ್ಯಂತ ಕಡಿದಾಗಿಯೂ ಇಲ್ಲದಿರುವುದರಿಂದ ಕಡಿಮೆ ಅವಧಿಯಲ್ಲೇ ಶ್ರೀ ಚಾಮುಂಡೇಶ್ವರಿ ದೇವಸ್ಥಾನವನ್ನು ನಿಸರ್ಗ ಸೌಂದರ್ಯ ಸವಿಯುತ್ತಾ ಸಾಗಬಹುದಾದ್ದರಿಂದ ರೋಪ್‌ವೇ ಅನಗತ್ಯ ಎಂದು ಅಭಿಪ್ರಾಯಪಟ್ಟರು.

ಸಾಹಸ ಕ್ರೀಡಾ ತರಬೇತಿ ಸಂಸ್ಥೆಯ ರುಕ್ಮಿಣಿ ಅವರು, ಚಾಮುಂಡಿಬೆಟ್ಟದಲ್ಲಿ ಅಭಿವೃದ್ಧಿ ಕಾಮಗಾರಿ ತಡೆಯಬೇಕು. ಮರಳು ಮಿಶ್ರಿತ ಭೂಮಿಯಾದ್ದರಿಂದ ಬೆಟ್ಟ ಕುಸಿಯುತ್ತದೆ. ಯಾವುದೇ ಕಾರಣಕ್ಕೂ ರೋಪ್‌ವೇ ಮಾಡಬಾರದು ಎಂದರು. ಅದೇ ಅಭಿಪ್ರಾಯವನ್ನು ಎಸ್ಪಿ ಆರ್.ಚೇತನ್ ಸೇರಿದಂತೆ ಇತರರು ವ್ಯಕ್ತಪಡಿಸಿದರು.

ಆದರೆ ಅದಕ್ಕೆ ತದ್ವಿರುದ್ಧವಾಗಿ ಪ್ರತಿಕ್ರಿಯಿಸಿದ ಮೈಸೂರು ಸಂಘ–ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಬಿ.ಎಸ್.ಪ್ರಶಾಂತ್, ವಾಹನಗಳಿಂದ ಶಬ್ದ, ವಾಯುಮಾಲಿನ್ಯ ಉಂಟಾಗುತ್ತಿರುವ ಕಾರಣ ಎಲೆಕ್ಟ್ರಿಕ್ ವಾಹನ ವ್ಯವಸ್ಥೆ ಮಾಡಿ, ತಂತ್ರಜ್ಞಾನ ಬಳಸಿ ಸಿಂಗಪೂರ್ ಮಾದರಿಯಲ್ಲಿ ಚಾಮುಂಡಿಬೆಟ್ಟಕ್ಕೆ ರೋಪ್‌ವೇ ಮಾಡುವುದರಿಂದ ಇಲ್ಲಿನ ಪ್ರವಾಸೋದ್ಯಮ ಅಭಿವೃದ್ಧಿಯಾಗುತ್ತದೆ ಎಂದರು.

ಎಲ್ಲರ ಅಭಿಪ್ರಾಯ, ಸಲಹೆಗಳನ್ನು ಆಲಿಸಿದ ಜಿಲ್ಲಾ ಉಸ್ತುವಾರಿ ಸಚಿವರು, ಈ ಭಾಗದ ಜನಪ್ರತಿನಿಧಿಗಳು, ಸಂಘ–ಸಂಸ್ಥೆಗಳ ಪ್ರಮುಖರು ಚಾಮುಂಡಿಬೆಟ್ಟಕ್ಕೆ ರೋಪ್‌ವೇ ಬೇಡ ಎಂದಿರುವುದರಿಂದ ಯೋಜನೆ ಕೈಬಿಡಲು ನಿರ್ಧರಿಸಲಾಗಿದೆ ಎಂದು ಪ್ರಕಟಿಸಿದರು. ತಿ.ನರಸೀಪುರ ಶಾಸಕ ಅಶ್ವಿನ್ ಕುಮಾರ್, ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್, ಮೇಯರ್ ಸುನಂದಾ ಪಾಲನೇತ್ರ, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತರೆಡ್ಡಿ, ಪರಂಪರೆ ಇಲಾಖೆ ಆಯುಕ್ತ ಬಿ.ಆರ್.ಪೂರ್ಣಿಮಾ, ಡಿಸಿಎಫ್ ಕಮಲಾ ಕರಿಕಾಳನ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಮೈಸೂರು ಟ್ರಾವೆಲ್ ಅಸೋಸಿಯೇಷನ್ ಅಧ್ಯಕ್ಷ ಜಯಕುಮಾರ್, ಮೈಸೂರು ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ಅಧ್ಯಕ್ಷ ಬಿ.ಕೆ.ಲಿಂಗರಾಜು ಹಾಗೂ ಇತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಗ್ರಾಮಸ್ಥರಿಗೆ ಮನೆ ಕಟ್ಟಲು ತಪ್ಪಲಲ್ಲಿ ಜಾಗ

ನೀರು ಹರಿದು ಭೂಮಿ ಸಡಿಲಗೊಂಡು ಕುಸಿಯುವ ಅಪಾಯವಿದೆ. ಬೆಟ್ಟದ ನೈಸರ್ಗಿಕ ಸೌಂದರ್ಯ ಹಾಳಾಗುತ್ತದೆ ಎಂದರು. ಮನೆ ಕಟ್ಟಲು ಗ್ರಾಮ ಪಂಚಾಯ್ತಿಯವರು ಲೈಸನ್ಸ್ ಕೊಡುತ್ತಿದ್ದಾರೆ. ಎಲ್ಲೆಂದರಲ್ಲಿ ಕಾಂಕ್ರೀಟ್ ಕಟ್ಟಡ ನಿರ್ಮಾಣ ವಾಗಲು ಅಧಿಕಾರಿಗಳೇ ಕಾರಣ. ಇನ್ನು ಮುಂದೆ ಚಾಮುಂಡಿಬೆಟ್ಟದ ಮೇಲೆ ಕಟ್ಟಡ ನಿರ್ಮಾಣವಾಗದಂತೆ ತಡೆಯಬೇಕು ಎಂದು ತಿಳಿಸಿದರು. ಆ ವೇಳೆ ಮಾತನಾಡಿದ ಶಾಸಕ ಜಿ.ಟಿ.ದೇವೇಗೌಡ ಅವರು, ಚಾಮುಂಡಿಬೆಟ್ಟದ ಮೂಲ ಗ್ರಾಮಸ್ಥರು ಕುಟುಂಬ ವಿಭಜನೆಯಾದಾಗ ಮನೆ ಕಟ್ಟಲೇಬೇಕಾಗುತ್ತದೆ. ಅಲ್ಲಿ ಲೈಸೆನ್ಸ್ ಕೊಡದಿದ್ದರೆ ಬೆಟ್ಟದ ಕೆಳಗೆ ತಪ್ಪಲಿನಲ್ಲಿ ಪರ್ಯಾಯ ಜಾಗ ಕೊಡಬೇಕಾಗುತ್ತದೆ. ಕನಿಷ್ಠ 4 ಎಕರೆಯನ್ನಾದರೂ ಗುರುತಿಸಿದರೆ ಬೆಟ್ಟದ ಮೇಲೆ ಮನೆ ಕಟ್ಟುವುದನ್ನು ತಪ್ಪಿಸಬಹುದು ಎಂದರು.

ಕೆ.ಆರ್.ಕ್ಷೇತ್ರದ ನಿವಾಸಿಗಳಿಗೆ ಮನೆ ನಿರ್ಮಿಸಲು ಆಶ್ರಯ ಯೋಜನೆಯಡಿ ಕೊಟ್ಟಿರುವಂತೆ ಚಾಮುಂಡಿಬೆಟ್ಟ ಮೂಲ ನಿವಾಸಿಗಳಿಗೂ ಮುಡಾದಿಂದ ಜಾಗ ಕೊಡಬಹುದು ಎಂದು ಜಿ.ಟಿ.ದೇವೇಗೌಡರು ಸಲಹೆ ನೀಡಿದರಾದರೂ, ಅಷ್ಟೊಂದು ದೊಡ್ಡ ಜಾಗ ನಮ್ಮಲ್ಲಿಲ್ಲ ಹಾಗೂ ಬಲ್ಕ್ ಅಲಾಟ್‌ಮೆಂಟ್ ಮಾಡಲು ಪ್ರಾಧಿಕಾರದಲ್ಲಿ ಅವಕಾಶವಿಲ್ಲ ಎಂದು ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ತಿಳಿಸಿದರು.

ಕಂದಾಯ ಇಲಾಖೆ ತಹಶೀಲ್ದಾರರಿಂದ ಸರ್ಕಾರಿ ಜಾಗ ಪತ್ತೆ ಮಾಡಿ ಮಂಜೂರು ಮಾಡಿ ಕಾನೂನುಬದ್ಧವಾಗಿ ಹಸ್ತಾಂತರಿಸಲು ಪ್ರಯತ್ನಿಸೋಣ ಎಂದು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ತಿಳಿಸಿದರು. ಬೆಟ್ಟದ ಸುತ್ತಮುತ್ತ ಸೂಕ್ತ ಜಾಗ ನೀಡಿದಲ್ಲಿ ಚಾಮುಂಡಿಬೆಟ್ಟದ ಮೇಲೆ ಯಾವುದೇ ಕಟ್ಟಡ ನಿರ್ಮಾಣವಾಗದಂತೆ ತಡೆಯಬಹುದು ಎಂದು ಶಾಸಕ ಜಿ.ಟಿ.ದೇವೇಗೌಡರು ಅಭಿಪ್ರಾಯಪಟ್ಟರಲ್ಲದೆ, ಅಲ್ಲಿನ ನಿಸರ್ಗ ವನ್ನು ಸಂರಕ್ಷಿಸಲು ಸಾಧ್ಯವಾಗುತ್ತದೆ. ಅಲ್ಲಿ ಪ್ರವಾಸೋ ದ್ಯಮಕ್ಕೆ ಹೆಚ್ಚು ಆದ್ಯತೆ ನೀಡದೇ ಕೇವಲ ಭಕ್ತಾದಿಗಳಿಗೆ ಅಗತ್ಯ ಸೌಲಭ್ಯ ಒದಗಿಸುವುದಕ್ಕೆ ಸೀಮಿತಗೊಳಿಸಬಹುದು ಎಂದರು.

'ಎ' ಖಾತಾ ಗಾಳ

ನಿವೇಶನ ಅಥವಾ ಅಲ್ಲಿ ಕಟ್ಟಿರುವ ಮನೆ,ಕಟ್ಟಡವನ್ನು ಅಡಮಾನವಾಗಿಟ್ಟು ಬ್ಯಾಂಕುಗಳಿಂದ ಸಾಲ ಪಡೆಯಲು ಇದುವರೆಗೆ ಸಾಧ್ಯವಿರಲಿಲ್ಲ.ಅದೇ ರೀತಿ ಇನ್ನೂ ಹಲವು ಸೌಲಭ್ಯಗಳು ಅವರಿಗೆ ದೊರೆಯುತ್ತಿರಲಿಲ್ಲ. ಸರ್ಕಾರದ ಈ ತೀರ್ಮಾನದಿಂದ ಅವರ ಎಲ್ಲ ಸಮಸ್ಯೆಗಳು ಬಗೆಹರಿದಿರುವುದಲ್ಲದೆ, ಈ ಖಾಸಗಿ ಬಡಾವಣೆಗಳಿಗೆ ಮೂಲ ಸೌಕರ್ಯಗಳನ್ನು ಕಲ್ಪಿಸಲು ಸಹಕಾರಿಯಾಗಲಿದೆ. ಖಾತಾ ಪರಿವರ್ತನೆಯಿಂದ ನಗರ ಸ್ಥಳೀಯ ಸಂಸ್ಥೆಗಳಿಗೂ ನೂರಾರು ಕೋಟಿ ರೂಪಾಯಿ ಆದಾಯ ಬರಲಿದ್ದು, ಅವುಗಳ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯಗಳನ್ನು ನಡೆಸಲು ಹೆಚ್ಚು ಶಕ್ತಿ ದೊರೆಯಲಿದೆ.

ಮೈಸೂರು, ದಾವಣಗೆರೆ ಸೇರಿದಂತೆ ಹತ್ತು ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಎರಡು ಲಕ್ಷಕ್ಕೂ ಅಧಿಕ ಬಿ ಖಾತೆದಾರರಿದ್ದು, ಉಳಿದಂತೆ ನಗರಸಭೆ ಮತ್ತಿತರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಇನ್ನೂ ಅಧಿಕ ಬಿ ಖಾತೆದಾರರಿದ್ದಾರೆ ಎಂದು ಅವರು ಸ್ಪಷ್ಟಪಡಿಸಿದರು. ಅಭಿವೃದ್ಧಿ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿ ನಿರ್ಮಿಸಲಾದ ಬಡಾವಣೆಗಳಲ್ಲಿ ನಾಗರಿಕ ಬಳಕೆಗೆಂದು ಮೀಸಲಿಟ್ಟ ಒತ್ತುವರಿಯಾಗಿರುವ ಸಿಎ ನಿವೇಶನಗಳನ್ನು ತೆರವುಗೊಳಿಸಿ, ಸರ್ಕಾರದ ವಶಕ್ಕೆ ಪಡೆದುಕೊಳ್ಳಲಾಗುವುದು. ಅಷ್ಟೇ ಅಲ್ಲ ಸಮರ್ಪಕ ನಿರ್ವಹಣೆಯಿಲ್ಲದೆ ಪಾಳು ಬಿದ್ದಿರುವ ನಿವೇಶನಗಳ ಬಗ್ಗೆ ಪೂರ್ಣ ವರದಿ ನೀಡುವಂತೆ ಪ್ರಾಧಿಕಾರಗಳಿಗೆ ಆದೇಶಿಸಲಾಗಿದೆ ಎಂದರು.

ಈ ಕುರಿತು ಸರ್ಕಾರಕ್ಕೆ ದೂರುಗಳು ಬಂದಿದ್ದು, ಈ ಹಿನ್ನೆಲೆಯಲ್ಲಿ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿರುವ ಸಿ.ಎ ನಿವೇಶನಗಳ ವಿವರ ಒದಗಿಸುವಂತೆ ಸೂಚಿಸಲಾಗಿದೆ.

ವಿವರ ದೊರೆತ ನಂತರ ಒತ್ತುವರಿದಾರರಿದ್ದರೆ ಅವರನ್ನು ನಿರ್ದಾಕ್ಷಿಣ್ಯವಾಗಿ ತೆರವು ಮಾಡಿಸುವುದಲ್ಲದೆ,ಸದರಿ ನಿವೇಶನಗಳನ್ನು ಶಾಲೆ, ಆಸ್ಪತ್ರೆ ಮತ್ತಿತರ ಸಾರ್ವಜನಿಕ ಉದ್ದೇಶಕ್ಕೆ ನೀಡಬೇಕೋ? ಅಥವಾ ಸರ್ಕಾರದ ಬೇರೆ ಕೆಲಸಗಳಿಗೆ ಮೀಸಲಿಡ ಬೇಕೋ? ಅಥವಾ ಹರಾಜು ಹಾಕಬೇಕೋ? ಎಂಬುದನ್ನು ತೀರ್ಮಾನಿಸುತ್ತೇವೆ ಎಂದರು.

ಇನ್ನು ರಾಜ್ಯಾದ್ಯಂತ ಕುಡಿಯುವ ನೀರು ಒದಗಿಸಲು 9335 ಕೋಟಿ ರೂಪಾಯಿ ವೆಚ್ಚದ ಯೋಜನೆಯನ್ನು ತಯಾರಿಸಿದ್ದು, ಇದಕ್ಕೆ ಸಂಬಂಧಿಸಿದ ಪ್ರಸ್ತಾವವನ್ನು ಮುಖ್ಯಮಂತ್ರಿಗಳಿಗೆ ಸಲ್ಲಿಸಲಾಗಿದೆ ಎಂದು ಭೈರತಿ ಬಸವರಾಜ್ ಹೇಳಿದರು.

ರಾಜ್ಯದ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಬಿಲ್ ಬಾಕಿ ಪ್ರಮಾಣ 600 ಕೋಟಿ ರೂಪಾಯಿಗಳಷ್ಟಿದ್ದು, ಒನ್ ಟೈಮ್ ಸೆಟ್ಲ್‌ಮೆಂಟ್ ಆಧಾರದ ಮೇಲೆ ಬಾಕಿ ಪಾವತಿಗೆ ಅನುಕೂಲ ಮಾಡಿಕೊಡಲು ಯೋಚಿಸಲಾಗಿದೆ ಎಂದ ಅವರು, ಗ್ರಾಹಕರು ನೀರಿನ ಬಾಕಿಯನ್ನು ಪಾವತಿಸಿದರೆ ಬಡ್ಡಿ ಮನ್ನಾ ಮಾಡುವುದು ಸರ್ಕಾರದ ಯೋಚನೆ ಎಂದರು. ಸ್ಥಳೀಯ ಸಂಸ್ಥೆಗಳು ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸಬೇಕು ಎಂಬ ಉದ್ದೇಶದಿಂದ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಿಸುವ, ಮತ್ತಿತರ ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ ನೀಡಲಾಗುತ್ತಿದೆ ಎಂದ ಅವರು,ಆ ಮೂಲಕ ನಗರ ಸ್ಥಳೀಯ ಸಂಸ್ಥೆಗಳು ತಮಗೆ ಅಗತ್ಯವಾದ ಸಂಪನ್ಮೂಲ ವನ್ನು ತಾವೇ ಸೃಷ್ಟಿಸಿಕೊಳ್ಳಬೇಕು ಎಂಬುದು ಸರ್ಕಾರದ ಉದ್ದೇಶ ಎಂದರು.



ಹಸಿರು ಕ್ರಾಂತಿ ಹರಿಕಾರ ಜಗಜೀವನ್ ರಾಮ್ ಅವರ ಜಯಂತಿ ಪ್ರಯುಕ್ತ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಮಾಜಿ ಮೇಯರ್ ಸಂದೇಶ್ ಸ್ವಾಮಿ, ಪಾಲಿಕೆ ಮಾಜಿ ಸದಸ್ಯರಾದ ಸು.ಮುರಳಿ, ಮಂಜು, ಜಗದೀಶ್, ವೇಲು, ರಾಮು ಇನ್ನಿತರರು ಉಪಸ್ಥಿತರಿದ್ದರು.



ಮೈಸೂರು ರೈಲ್ವೆ ನಿಲ್ದಾಣದ ಬಳಿ ಇರುವ ಬಾಬೂಜಿ ಅವರ ಪುತ್ಥಳಿಗೆ ಬುಧವಾರ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಪುಷ್ಪ ನಮನ ಸಲ್ಲಿಸಿದರು. ಈ ವೇಳೆ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ ಕುಮಾರ್, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು ಇತರರು ಉಪಸ್ಥಿತರಿದ್ದರು.



ಮಹಾಜನ ವಿದ್ಯಾಸಂಸ್ಥೆಯ ಹಿಂದಿನ ಅಧ್ಯಕ್ಷರಾಗಿದ್ದ ಆರ್.ವಾಸುದೇವಮೂರ್ತಿ ಅವರಿಗೆ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಶ್ರದ್ಧಾಂಜಲಿ ಅರ್ಪಿಸಲಾಯಿತು. ಈ ವೇಳೆ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ಕಾಲೇಜಿನ ಡೀನ್ ಡಾ.ಶ್ರೀಧರ, ಹಿರಿಯ ಅಧ್ಯಾಪಕರಾದ ಡಾ.ಎಚ್.ಆರ್.ತಿಮ್ಮೇಗೌಡ, ಡಾ.ದೊಡ್ಡರಸಯ್ಯ, ಡಾ.ವಿನೋದಮ್ಮ, ಸಾರ್ವಜನಿಕ ಸಂಪರ್ಕಾಧಿಕಾರಿ ಪೂರ್ಣಿಮಾ, ಗ್ರಂಥಾಲಯ ವಿಭಾಗದ ವೀಣಾ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸಂಭವಾಮಿ ಯುಗೇ ಯುಗೇ: ಗೀತೋಪದೇಶದ ಸಾಲನ್ನು ಪೋಸ್ಟ್ ಮಾಡಿದ್ದ ಗುರೂಜಿ ಹಂತಕ

ಬೆಂಗಳೂರು, ಜು.6– ಚಂದ್ರಶೇಖರ ಗುರೂಜಿ ಹತ್ಯೆ ಪ್ರಕರಣದ ಪ್ರಮುಖ ಹಂತಕ ಮಹಾಂತೇಶ್ ಶಿರೂರು ಇತ್ತೀಚೆಗಷ್ಟೇ ತನ್ನ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿದ್ದ ಭಗವದ್ಗೀತೆ ಗೀತೋಪದೇಶದ ಸಾಲಿನ ಫೋಟೋವೊಂದು ಸೋಶಿಯಲ್ ಮೀಡಿಯಾದಲ್ಲಿ ಹರಿದಾಡುತ್ತಿದೆ.

ಚಂದ್ರಶೇಖರ ಗುರೂಜಿ ಅವರನ್ನು ಹತ್ಯೆ ಮಾಡುವ ಮುನ್ನ ಐದು ದಿನದ ಹಿಂದೆ ಹಂತಕ ಮಹಾಂತೇಶ್, ಶ್ರೀ ಕೃಷ್ಣ ಪರಮಾತ್ಮನ ರೌದ್ರಾವತಾರದಲ್ಲಿ ಕುದುರೆ ಏರಿ ಹೋಗುತ್ತಿರುವ ಫೋಟೋವನ್ನು ಹಂಚಿಕೊಂಡಿದ್ದಾನೆ. ಅಲ್ಲದೇ ಈ ಫೋಟೋದಲ್ಲಿ ಅಧರ್ಮ ತಾಂಡವವಾಡುತ್ತಿರುವಾಗ ದುಷ್ಟರ ನಾಶ ಪಡಿಸಲು ಧರ್ಮ ಪುನರ್ ಸ್ಥಾಪಿಸಲು ನೀನು ಬರುವೆ ಎಂದು ವಚನ ನೀಡಿರುವೆ. ವಿಳಂಭವೇಕೆ ಮತ್ತೆ ಅವತರಿಸು ಪ್ರಭುವೇ..! ಸಂಭವಾಮಿ ಯುಗೇ ಯುಗೇ ಎಂಬ ಭಗವದ್ಗೀತೆಯ ಗೀತೋಪದೇಶದ ಸಾಲುಗಳಿರುವುದನ್ನು ಕಾಣಬಹುದಾಗಿದೆ.

ಡಾ.ಬಾಬು ಜಗಜೀವನರಾಂ ಪುತ್ಥಳಿಗೆ ಮಾಲಾರ್ಪಣೆ



ಮೈಸೂರು, ಜು.6– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮೈಸೂರು ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಡಾ. ಬಾಬು ಜಗಜೀವನರಾಂ ಅವರ 36ನೇ ವರ್ಷದ ಪುಣ್ಯಸ್ಮರಣೆಯ ಪ್ರಯುಕ್ತ ಇಂದು ನಗರದ ರೈಲ್ವೆ ನಿಲ್ದಾಣ ಮುಂಭಾಗದ ವೃತ್ತದಲ್ಲಿರುವ ಡಾ.ಬಾಬು ಜಗಜೀವನ ರಾಂ ಅವರ ಪುತ್ಥಳಿಗೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸಹಕಾರ ಸಚಿವರಾದ ಎಸ್.ಟಿ. ಸೋಮಶೇಖರ್ ಮಾಲಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್, ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಸಂಸದ ಪ್ರತಾಪ್ ಸಿಂಹ, ಚಾಮರಾಜ ಕ್ಷೇತ್ರದ ಶಾಸಕ ಎಲ್. ನಾಗೇಂದ್ರ, ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಬಿ.ಆರ್.ಪೂರ್ಣಿಮಾ ಹಾಗೂ ಇತರೆ ಗಣ್ಯರು ಉಪಸ್ಥಿತರಿದ್ದರು.

ಪ್ರವಾಹ ಕುರಿತು ಒಂದು ದಿನದ ವಿಚಾರಗೋಷ್ಠಿ

ಮೈಸೂರು,ಜು.6–ಕಾವೇರಿ ನೀರಾವರಿ ನಿಗಮ ನಿಯಮಿತ ವತಿಯಿಂದ ಕೃಷ್ಣರಾಜ ಸಾಗರ ಹಾರಂಗಿ ಕಬಿನಿ ಮತ್ತು ಚಿಕ್ಕಹೊಳೆ ಅಣೆಕಟ್ಟುಗಳ ನದಿ ಪಾತ್ರದಲ್ಲಿ ಪ್ರವಾಹ ಸಂದರ್ಭದಲ್ಲಿ ಉಂಟಾಗಬಹುದಾದ ಪ್ರತಿಕೂಲ ಪರಿಣಾಮಗಳ ನಿರ್ವಹಣೆಯ ಕುರಿತು ಪಾಲುದಾರರ ಪಾತ್ರದ ಬಗ್ಗೆ ಅರಿವು ಮೂಡಿಸುವ ಒಂದು ದಿನದ ವಿಚಾರ ಗೋಷ್ಠಿ ಕಾರ್ಯಕ್ರಮವನ್ನು ಜು.8ರಂದು ಬೆಳಗ್ಗೆ 11 ಗಂಟೆಗೆ ಕೆಆರ್‌ಎಸ್ ರಸ್ತೆಯಲ್ಲಿರುವ ಕುಸುಮ ಚಂದ್ರಶೇಖರ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ. ಜಲ ಸಂಪನ್ಮೂಲ ಇಲಾಖೆ ಸಚಿವ ಗೋವಿಂದ ಕಾರಜೋಳ ಕಾರ್ಯಕ್ರಮ ಉದ್ಘಾಟಿಸುವರು. ಅಬಕಾರಿ ಸಚಿವ ಕೆ.ಗೋಪಾಲಯ್ಯ ಉಪಸ್ಥಿತರಿರುವರು. ಶಾಸಕ ರವೀಂದ್ರ ಶ್ರೀಕಂಠಯ್ಯ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಸಚಿವರಾದ ಕೆ.ಸಿ.ನಾರಾಯಣಗೌಡ, ಡಾ.ಅಶ್ವಥ್‌ನಾರಾಯಣ್, ವಿ. ಸೋಮಣ್ಣ, ಬಿ.ಸಿ.ನಾಗೇಶ್, ಎಸ್.ಟಿ. ಸೋಮಶೇಖರ್, ಮಾಜಿ ಸಿಎಂ ಎಚ್.ಡಿ. ಕುಮಾರಸ್ವಾಮಿ, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ್‌ಪ್ರಸಾದ್, ಡಿ.ಕೆ. ಸುರೇಶ್, ಪ್ರಜ್ವಲ್ ರೇವಣ್ಣ, ಸುಮಲತಾ ಅಂಬರೀಶ್, ಬಚ್ಚೇಗೌಡ ಉಪಸ್ಥಿತರಿರುವರು.



ಮೈಸೂರಿನ ಬಡವರ ಬಂಧು ಕನ್ನಡ ಯುವಕರ ಸಂಘದಿಂದ ಪಿಯುಸಿಯಲ್ಲಿ 594 ಅಂಕಗಳನ್ನು ಪಡೆದು ಜಿಲ್ಲೆಗೆ ಪ್ರಥಮ ಸ್ಥಾನ ಗಳಿಸಿದ ಮಹಾಜನ ಪಿಯು ಕಾಲೇಜಿನ ವಿದ್ಯಾರ್ಥಿ ಹೆಚ್.ಪಿ.ಸೂರ್ಯರಂಗನ್‌ನನ್ನು ನಗರಪಾಲಿಕೆ 19ನೇ ವಾರ್ಡ್‌ನ ಮಾಜಿ ಸದಸ್ಯ ಮಹದೇಶ್, ಪಾಲಿಕೆ ಸದಸ್ಯೆ ಭಾಗ್ಯ ಮಹದೇಶ್, ಪಡುವಾರಹಳ್ಳಿ ಪಾಪಣ್ಣ, ನಂದಕುಮಾರ್, ನಾಗಣ್ಣ, ರಮೇಶ್, ಕೃಷ್ಣಮೂರ್ತಿ, ಕೃಷ್ಣ, ಭೈರ ಅಭಿನಂದಿಸಿದರು.



ರಾಜ್ಯ ಸರ್ಕಾರಿ ನೌಕರರ ಸಂಘದ ಮೈಸೂರು ಜಿಲ್ಲಾ ಶಾಖೆ ಗೌರವಾಧ್ಯಕ್ಷರಾಗಿ ಆಯ್ಕೆಯಾದ ಮಹಾರಾಜ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಎ.ಎಲ್.ಉಮೇಶ್ ಅವರನ್ನು ಜಿಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನ್ಯಾಸಕರ ಸಂಘದ ಅಧ್ಯಕ್ಷ ಎಂ.ಎಂ.ಮಹದೇವು ಅಭಿನಂದಿಸಿದರು. ಚಿತ್ರದಲ್ಲಿ ಉಪನ್ಯಾಸಕರ ಮಾಜಿ ಸಂಘದ ಅಧ್ಯಕ್ಷ ಯೋಗಾನಂದ್, ಮಹೇಶ್, ಗಿರೀಶ್, ಪ್ರಾಂಶುಪಾಲ ಮಂಜುನಾಥ್, ರುದ್ರಪ್ಪ, ನಾಗಭೂಷಣ್, ಮುಕುಂದನ್, ವೈ.ಎಲ್.ಕೃಷ್ಣಮೂರ್ತಿ, ಕಾಂತರಾಜ್ ಇನ್ನಿತರರಿದ್ದಾರೆ.

ಮೈಸೂರಲ್ಲಿ ಮೂರು ಕಡೆ ಸರ ಕಳವು

ಲಕ್ಷಾಂತರ ರೂ. ಬೆಲೆಬಾಳುವ ಸರಗಳು ಖದೀಮರ ಪಾಲು

ಮೈಸೂರು, ಜು.6– ಮೈಸೂರಿನ ಮೂರು ಕಡೆ ಸರಗಳ್ಳರು ತಮ್ಮ ಕೈಚಳಕ ತೋರಿಸಿದ್ದಾರೆ. ನಗರದ ವಿದ್ಯಾರಣ್ಯಪುರಂ, ದೇವರಾಜ ಮತ್ತು ನರಸಿಂಹರಾಜ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣ ದಾಖಲಾಗಿದೆ.



ಮೈಸೂರಿನ ವಿಶ್ವೇಶ್ವರನಗರದಲ್ಲಿರುವ ರೈಲ್ವೆ ಕ್ವಾರ್ಟರ್ಸ್ ನಿವಾಸಿ, ನರ್ಸ್ ಕೆ.ಸಂಧ್ಯಾ (43) ಅವರು ವಿದ್ಯಾರಣ್ಯ ಪುರಂನ ಆರ್.ಕೆ. ಜಂಕ್ಷನ್ ಬಳಿ ಕಂಠಿ ಕನ್ವೆನ್ಷನ್ ಹಾಲ್ ಮುಂಭಾಗ ತಮ್ಮ ಸಹೋದ್ಯೋಗಿ ರಾಜೇಶ್ವರಿ ಅವರೊಂದಿಗೆ ರಾತ್ರಿ 8 ಗಂಟೆ ಸುಮಾರಿನಲ್ಲಿ ಸ್ಕೂಟಿಯಲ್ಲಿ ತೆರಳುತ್ತಿದ್ದಾಗ ದ್ವಿಚಕ್ರ ವಾಹನದಲ್ಲಿ ಬಂದ ಇಬ್ಬರು ಖದೀಮರು 2.50 ಲಕ್ಷ ರೂ. ಮೌಲ್ಯದ 50 ಗ್ರಾಂ ತೂಕದ ಮಾಂಗಲ್ಯ ಸರವನ್ನು ಕಿತ್ತುಕೊಂಡು ಪರಾರಿಯಾಗಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಹೂಟಗಳ್ಳಿ ನಿವಾಸಿ ಶ್ರೀಮತಿ ಕಲ್ಪನಾ ಅವರು ಸೀರೆ ಖರೀದಿಗಾಗಿ ಪುತ್ರಿ ಹಾಗೂ ತಮ್ಮನ ಪತ್ನಿಯೊಂದಿಗೆ ಮಧ್ಯಾಹ್ನ 3.45ರ ಸಮಯದಲ್ಲಿ ಚಿರಾಗ್ ಹೋಟೆಲ್ ಜಂಕ್ಷನ್‌ನಿಂದ ಹಾರ್ಡಿಂಜ್ ವೃತ್ತದ ಕಡೆಗೆ ತೆರಳುತ್ತಿದ್ದಾಗ ಎದುರಿಗೆ ಬಂದ ಖದೀಮನೋರ್ವ ಅವರ ಕತ್ತಿನಲ್ಲಿದ್ದ 36 ಗ್ರಾಂ ತೂಕದ ಮಾಂಗಲ್ಯ ಸರ ಕಿತ್ತುಕೊಂಡು, ಅದಾಗಲೇ ಮತ್ತೋರ್ವ ಸ್ಟಾರ್ಟಿಂಗ್‌ನಲ್ಲಿ ನಿಲ್ಲಿಸಿಕೊಂಡಿದ್ದ ಬೈಕ್ ಹತ್ತಿ ಪರಾರಿಯಾಗಿದ್ದಾನೆ. ಈ ವೇಳೆ ಕೆಲವರು ದ್ವಿಚಕ್ರ ವಾಹನಗಳಲ್ಲಿ ಖದೀಮರನ್ನು ಬೆನ್ನತ್ತಿದರಾದರೂ, ಅವರು ಸಿಗಲಿಲ್ಲ.

ಇನ್ನೊಂದು ಪ್ರಕರಣದಲ್ಲಿ ಹಿನಕಲ್ ನಿವಾಸಿ ಮಾಲತಿ ಅವರು, ನಗುವನಹಳ್ಳಿಯಿಂದ ಪುತ್ರ ಹಿತನ್ ಎಸ್.ಗೌಡ ಜೊತೆ ಹೋಂಡಾ ಆಕ್ಟೀವಾ (ಕೆಎ 09 ಹೆಚ್‌ಬಿ 5658)ದಲ್ಲಿ ಹಿನಕಲ್‌ಗೆ ಸಂಜೆ 4.35ರ ಸುಮಾರಿನಲ್ಲಿ ತೆರಳುತ್ತಿದ್ದ ವೇಳೆ ಹಳೇ ಕೆಸರೆ ಬಳಿ ಹಿಂಬದಿಯಿಂದ ಬೈಕ್‌ನಲ್ಲಿ ಬಂದ ಇಬ್ಬರು ಖದೀಮರು ಅವರ 60 ಗ್ರಾಂ ತೂಕದ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿದ್ದಾರೆ.

ಷೇರುದಾರರಿಗೆ ಆರ್‌ಡಿ, ಎಫ್‌ಡಿ ಹಣ ವಂಚನೆ

ವಜ್ರಗಿರಿ ಸೌಹಾರ್ದ ಕೋ–ಆಪರೇಟಿವ್ ಸಂಸ್ಥೆ ವಿರುದ್ಧ ದೂರು

ಮೈಸೂರು, ಜು.6–ಮೈಸೂರಿನ ಡಿ.ಸುಬ್ಬಯ್ಯ ರಸ್ತೆಯಲ್ಲಿರುವ ಕೋ–ಆಪರೇಟಿವ್ ಸೊಸೈಟಿಯಲ್ಲಿ ಷೇರುದಾರರಿಗೆ ಆರ್‌ಡಿ ಮತ್ತು ಎಫ್‌ಡಿ ಹಣವನ್ನು ನೀಡದೇ ವಂಚಿಸಿರುವ ಬಗ್ಗೆ ಲಕ್ಷ್ಮೀಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕ್ರೈಂ ಬಾಕ್ಸ್

ಕೆ.ಆರ್.ಪೇಟೆ ತಾಲೂಕು ಅಕ್ಕಿಹೆಬ್ಬಾಳು ಗ್ರಾಮದ ಶಿಕ್ಷಕಿ ಸೌಭಾಗ್ಯ (50) ಅವರು ಡಿ.ಸುಬ್ಬಯ್ಯ ರಸ್ತೆಯಲ್ಲಿರುವ ವಜ್ರಗಿರಿ ಸೌಹಾರ್ದ ಕೋ–ಆಪರೇಟಿವ್ ಸಂಸ್ಥೆಯಲ್ಲಿ ಷೇರುದಾರರಾಗಿದ್ದಾರೆ. ಅವರು ಆರ್‌ಡಿ ಖಾತೆಗೆ ತಿಂಗಳಿಗೆ 2 ಸಾವಿರ ರೂ.ಗಳಂತೆ ಹಾಗೂ ಎಫ್‌ಡಿ ಖಾತೆಯಲ್ಲಿ 3 ಲಕ್ಷ ರೂ. ಠೇವಣಿ ಇಟ್ಟಿದ್ದರು. 2019ರ ಜ.11ರಂದು ಆರ್‌ಡಿ ಖಾತೆಯ ಅವಧಿ ಮುಗಿದಿದೆ. ಸ್ವಲ್ಪ ದಿನಗಳ ನಂತರ ಎಫ್‌ಡಿ ಅವಧಿಯೂ ಮುಗಿದಿದ್ದು, ಸಂಸ್ಥೆಯವರು ತನಗೆ ಹಣ ಪಾವತಿಸದೇ ವಂಚನೆ ಎಸಗಿದ್ದಾರೆ ಎಂದು ಸೌಭಾಗ್ಯ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಲಕ್ಷ್ಮೀಪುರಂ ಠಾಣೆ ಪೊಲೀಸರು ವಜ್ರಗಿರಿ ಸೌಹಾರ್ದ ಕೋ–ಆಪರೇಟಿವ್ ಸಂಸ್ಥೆಯ ಅಧ್ಯಕ್ಷ ಆರ್.ಸೋಮಶೇಖರ್, ಉಪಾಧ್ಯಕ್ಷ ಚಂದ್ರಶೇಖರ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪಿ.ಹೇಮಂತಕುಮಾರ್, ನಿರ್ದೇಶಕರಾದ ಟಿ.ಹೇಮಾವತಿ, ಎಂ.ಎ.ಮಂಜುನಾಥ್, ಸುಲೈಮಾನ್‌ಖಾನ್, ಅನಿಲ್ ಕುಮಾರ್, ಕೆ.ಟಿ.ಶ್ವೇತಾ, ವೈಎನ್.ಪ್ರದೀಪ್, ಮದನ್ ಕುಮಾರ್, ವೈಎನ್.ಶಿವಕುಮಾರ್ ಮತ್ತು ಪಿ.ರಾಜೇಶ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಎಸ್‌ಬಿಐನಲ್ಲಿ 6 ಲಕ್ಷ ರೂ. ಕಳವು: ಗುತ್ತಿಗೆ ಕಂಪನಿ ನೌಕರನ ವಿರುದ್ಧ ಕೇಸ್


ಮೈಸೂರು, ಜು.6– ರಾಷ್ಟ್ರೀಕೃತ ಬ್ಯಾಂಕ್‌ನಲ್ಲೇ ಗುತ್ತಿಗೆ ಕಂಪನಿಯೊಂದರ ನೌಕರರೊಬ್ಬರು 6 ಲಕ್ಷ ರೂ. ಕಳವು ಮಾಡಿರುವ ಬಗ್ಗೆ ಲಷ್ಕರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿವರ: ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ಎಸ್‌ಬಿಐನಲ್ಲಿ ಈ ಕಳವು ನಡೆದಿದ್ದು, ಬ್ಯಾಂಕ್‌ಗೆ ಪಾವತಿಯಾಗುವ ನೋಟುಗಳಲ್ಲಿ ಬಳಕೆಗೆ ಯೋಗ್ಯವಲ್ಲದ (ಸಾಯಿಲ್ಡ್ ನೋಟ್) ನೋಟ್‌ಗಳನ್ನು ನಾಶಪಡಿಸುವ ಸಲುವಾಗಿ ಆರ್‌ಬಿಐಗೆ ರವಾನಿಸಲಾಗುತ್ತದೆ. ನೋಟುಗಳನ್ನು ವಿಂಗಡಿಸಿ ಆರ್‌ಬಿಐಗೆ ರವಾನಿಸಲು ದೆಹಲಿ ಮೂಲದ ಮೆರ್ಸ್ಸ್ ಜಿಸೆಕ್ ಮತ್ತು ದೆವ್ರಿಂಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಗುತ್ತಿಗೆ ನೀಡಲಾಗಿದೆ. ಇದರ ಶಾಖಾ ಕಚೇರಿ ಬೆಂಗಳೂರಿನಲ್ಲಿದೆ. ಈ ಸಂಸ್ಥೆಯಿಂದ ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ಎಸ್‌ಬಿಐನಿಂದ ಸಾಯಿಲ್ಡ್ ನೋಟುಗಳನ್ನು ತೆಗೆದುಕೊಂಡು ಹೋಗಲು ಬಂದ ಕೆ.ಕೆ.ನಾಗೇಂದ್ರ ಎಂಬಾತ 6,01,100 ರೂ.ಗಳನ್ನು ಕಳವು ಮಾಡಿದ್ದಾನೆ. ಎಸ್‌ಬಿಐನಿಂದ ಆರ್‌ಬಿಐಗೆ ರವಾನೆಯಾದ ನೋಟುಗಳನ್ನು ಕಡಿಮೆ ಇದೆ ಎಂದು ಪತ್ರ ಬಂದ ಹಿನ್ನೆಲೆಯಲ್ಲಿ ಬ್ಯಾಂಕ್‌ನ ನೋಟ್ ಕಟಿಂಗ್ ರೂಂಗೆ ಅಳವಡಿಸಿದ್ದ ಸಿಸಿ ಕ್ಯಾಮರಾ ಪರಿಶೀಲಿಸಿದಾಗ ಗುತ್ತಿಗೆ ಸಂಸ್ಥೆಯಿಂದ ಹಣ ವಿಂಗಡಣೆ ಮಾಡಲು ನೇಮಕವಾಗಿದ್ದ ನಾಗೇಂದ್ರ ಎಂಬಾತ ಹಣದ ಕಟ್ಟುಗಳಲ್ಲಿರುವ ಕೆಲವು ನೋಟುಗಳನ್ನು ಕಳವು ಮಾಡಿ ಜೇಬಿಗೆ ಹಾಕಿಕೊಳ್ಳುವ ದೃಶ್ಯಗಳು ದಾಖಲಾಗಿವೆ. ಈ ಹಿನ್ನೆಲೆಯಲ್ಲಿ ಆತನ ವಿರುದ್ಧ ಮೈಸೂರಿನ ಇರ್ವಿನ್ ರಸ್ತೆಯಲ್ಲಿನ ಎಸ್‌ಬಿಐನ ಸರ್ಕಾರಿ ವ್ಯವಹಾರಗಳ ಶಾಖೆಯ ಮ್ಯಾನೇಜರ್ ಟಿ.ರಾಜೇಶ್ ನೀಡಿದ ದೂರನ್ನು ಲಷ್ಕರ್ ಠಾಣೆ ಪೊಲೀಸರು ದಾಖಲಿಸಿಕೊಂಡಿದ್ದಾರೆ.

ಕಾಲಮಿತಿಯೊಳಗೆ ಬೇಡಿಕೆ ಈಡೇರದಿದ್ದಲ್ಲಿ ಮತ್ತೆ ಹೋರಾಟ

ಪೌರಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷ ನಾರಾಯಣ ಎಚ್ಚರಿಕೆ

ಮೈಸೂರು,ಜು.6(ಎಂಟಿವೈ)–ಮೈಸೂರು ಮಹಾನಗರ ಪಾಲಿಕೆ ಸೇರಿದಂತೆ ರಾಜ್ಯದ ವಿವಿಧ ಸ್ಥಳೀಯ ಸಂಸ್ಥೆಗಳಲ್ಲಿ ನೇರ ಪಾವತಿ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಖಾಯಂ ಮಾಡುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಸರ್ಕಾರ ಒಪ್ಪಿಗೆ ಸೂಚಿಸಿರುವ ಹಿನ್ನೆಲೆಯಲ್ಲಿ ಪ್ರತಿಭಟನೆ ಹಿಂಪಡೆಯಲಾಗಿದೆ. ಕಾಲಮಿತಿಯೊಳಗೆ ಬೇಡಿಕೆ ಈಡೇರದಿದ್ದಲ್ಲಿ ಮತ್ತೆ ಮುಷ್ಕರ ನಡೆಸುವುದಾಗಿ ಪೌರಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷ ಹಾಗೂ ಮಾಜಿ ಮೇಯರ್ ನಾರಾಯಣ್ ಎಚ್ಚರಿಸಿದ್ದಾರೆ.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಖಾಯಂ ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಮೈಸೂರು ಪಾಲಿಕೆ ಸೇರಿದಂತೆ ರಾಜ್ಯದ ವಿವಿಧ ಸ್ಥಳೀಯ ಸಂಸ್ಥೆಗಳಲ್ಲಿ ನೇರಪಾವತಿ ಆಧಾರದಲ್ಲಿ ಸೇವೆ ಸಲ್ಲಿಸುತ್ತಿರುವ 20 ಸಾವಿರ ಪೌರಕಾರ್ಮಿಕರು ನಾಲ್ಕು ದಿನ ಸ್ವಚ್ಛತಾ ಕೆಲಸ ಸ್ಥಗಿತಗೊಳಿಸಿ ಪ್ರತಿಭಟನೆ ನಡೆಸಿದ್ದರು.

ನೇರ ಪಾವತಿ ಆಧಾರದ ಪೌರಕಾರ್ಮಿಕರಿಗೆ ಅನ್ಯಾಯವಾಗುತ್ತಿದ್ದು, ಅದನ್ನು ಸರಿಪಡಿಸುವಂತೆ ಆಗ್ರಹಿಸಿ ನ್ಯಾಯಯುತ ಬೇಡಿಕೆಗಳ ಈಡೇರಿಕೆಗಾಗಿ ನಡೆಸಿದ ಪ್ರತಿಭಟನೆಗೆ ಸರ್ಕಾರ ಸ್ಪಂದಿಸಿದೆ. ಸರ್ಕಾರ ನೀಡಿದ ಲಿಖಿತ ಭರವಸೆ ಮೇರೆಗೆ ಪ್ರತಿಭಟನೆ ಹಿಂಪಡೆಯಲಾಗಿದ್ದು, ಸ್ವಚ್ಛತಾ ಕಾರ್ಯ ಆರಂಭಿಸಿದ್ದಾರೆ. ಸರ್ಕಾರ ನೀಡಿರುವ ಭರವಸೆ ಯಂತೆ ನಿಗದಿತ ಸಮಯದೊಳಗೆ ಖಾಯಂ ಮಾಡುವ ನಿರೀಕ್ಷೆಯಲ್ಲಿ ಎಲ್ಲಾ ಪೌರಕಾರ್ಮಿಕರು ಕೆಲಸಕ್ಕೆ ಹಾಜರಾಗಿದ್ದಾರೆ ಎಂದರು.

ಪೌರಕಾರ್ಮಿಕರ ಪ್ರತಿಭಟನೆ ಹಾಗೂ ಬೇಡಿಕೆ ಸಂಬಂಧ ಜು.1ರಂದು ಬೆಂಗಳೂರಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪೌರಾಡಳಿತ ಸಚಿವ ಎಂ.ಟಿ.ಬಿ.ನಾಗರಾಜ್, ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ್ ಸೇರಿದಂತೆ ನಿಗಮ ಮಂಡಳಿ ಅಧ್ಯಕ್ಷರು, ಹಿರಿಯ ಅಧಿಕಾರಿಗಳು ಹಾಗೂ ಪೌರಕಾರ್ಮಿಕ ಸಂಘಟನೆಗಳ ಮುಖಂಡರೊಂದಿಗೆ ಚರ್ಚಿಸಿ ನೇರಪಾವತಿ ಪೌರಕಾರ್ಮಿಕರ ಪ್ರಮುಖ 9 ಬೇಡಿಕೆಯನ್ನು ಈಡೇರಿಸಲು ಸಮ್ಮತಿ ಸೂಚಿಸಿದ್ದಾರೆ. ಆದರೆ, ಜು.4 ರಂದು ಬೇಡಿಕೆ ಈಡೇರಿಕೆಗೆ ಸಂಬಂಧಿಸಿದಂತೆ ಲಿಖಿತ ಭರವಸೆ ನೀಡದ ಕಾರಣ 4 ದಿನ ಪ್ರತಿಭಟನೆ ನಡೆಸಬೇಕಾದ ಅನಿವಾರ್ಯತೆ ಸೃಷ್ಟಿಯಾಯಿತು. ನೇರಪಾವತಿ ಆಧಾರದಲ್ಲಿ ಸೇವೆ ಸಲ್ಲಿಸುತ್ತಿರುವವರ ಪಟ್ಟಿ ಮಾಡಲು ಸಮಿತಿಯೊಂದನ್ನು ರಚಿಸಿ, ಆ ಸಮಿತಿ ವರದಿ ನೀಡಿದ ಬಳಿಕ ಖಾಯಂ ಮಾಡುವ ಪ್ರಕ್ರಿಯೆಯನ್ನು ಮೂರು ತಿಂಗಳೊಳಗೆ ಆರಂಭಿಸಲಾಗುತ್ತದೆ. ಅಲ್ಲದೆ, ನೇಮಕಾತಿ ನಿಯಮದಲ್ಲಿ ಮಾರ್ಪಾಡು ಮಾಡಿ ಸಚಿವ ಸಂಪುಟದ ಅನುಮೋದನೆ ಪಡೆದು, ವಿಧಾನಸಭೆ ಹಾಗೂ ಪರಿಷತ್‌ನಲ್ಲಿ ಒಪ್ಪಿಗೆ ಪಡೆದು ಖಾಯಂ ಪ್ರಕ್ರಿಯೆ ನಡೆಸುವುದಾಗಿ ಸರ್ಕಾರ ತಿಳಿಸಿದೆ.

> “ಖಾಯಂ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೂ ನೇರಪಾವತಿ ಕಾರ್ಮಿಕರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಲಾಗುತ್ತದೆ. ಮಾಸಿಕ 2 ಸಾವಿರ ಸಂಕಷ್ಟ ಭತ್ಯೆ, ಪೌರ ಕಾರ್ಮಿಕರ ನೇಮಕ ಕುರಿತ ವಿಶೇಷ ನೇಮಕಾತಿ ನಿಯಮ ಜಾರಿ, ಪೌರ ಕಾರ್ಮಿಕರಿಗೆ ಗೃಹಭಾಗ್ಯ ಯೋಜನೆ ಜಾರಿಗೆ ಅನುಮೋದನೆ, ಪೌರ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ರೈತ ವಿದ್ಯಾನಿಧಿ ಮಾದರಿ ವಿದ್ಯಾರ್ಥಿವೇತನ ಜಾರಿ, ಮಹಿಳಾ ಪೌರಕಾರ್ಮಿಕರಿಗೆ 6 ತಿಂಗಳ ಹೆರಿಗೆ ಸೌಲಭ್ಯ, ವಿಶ್ರಾಂತಿ ಕೊಠಡಿ, ಶೌಚಗೃಹ ನಿರ್ಮಾಣ ಸೇರಿದಂತೆ ಇನ್ನಿತರ ಬೇಡಿಕೆ ಈಡೇರಿಕೆಗೆ ಸರ್ಕಾರ ಸಮ್ಮತಿಸಿದೆ. ಒಂದು ವೇಳೆ ಕಾಲಮಿತಿ ಯೊಳಗೆ ಬೇಡಿಕೆ ಈಡೇರಿಸದಿದ್ದಲ್ಲಿ ಮತ್ತೆ ಮುಷ್ಕರದಂತಹ ಉಗ್ರ ಹೋರಾಟ ನಡೆಸಲಾಗುತ್ತದೆ.
>
> –ನಾರಾಯಣ್, ಮಾಜಿ ಮೇಯರ್

ಸುದ್ದಿಗೋಷ್ಠಿಯಲ್ಲಿ ಪೌರಕಾರ್ಮಿಕರ ಮುಖಂಡರಾದ ಎನ್.ಮಾರ, ಟಿ.ಶ್ರೀನಿವಾಸ್, ಆರ್.ಶಿವಣ್ಣ, ಎನ್.ಮೋಹನ್‌ಕುಮಾರ್, ಸಿ.ಆರ್.ರಾಚಯ್ಯ, ಕೆ.ನಂಜಪ್ಪ ಬಸವನಗುಡಿ, ರಾಜೀವ್, ಪರಶುರಾಂ, ಜಿ. ಮಂಜುನಾಥ್ ಇನ್ನಿತರರು ಉಪಸ್ಥಿತರಿದ್ದರು.

ನರಸೀಪುರ, ನಂಜನಗೂಡಿನಲ್ಲಿ ಬಾಬೂಜಿ ಸ್ಮರಣೆ

ತಿ.ನರಸೀಪುರ, ನಂಜನಗೂಡು, ಜು.6(ಎಸ್‌ಕೆ/ಸುದರ್ಶನ)– ಹಸಿರು ಕ್ರಾಂತಿಯ ಹರಿಕಾರ ಡಾ. ಬಾಬು ಜಗಜೀವನರಾಂ ಅವರ 36ನೇ ಪುಣ್ಯಸ್ಮರಣೆಯನ್ನು ತಿ.ನರಸೀಪುರ ಮತ್ತು ನಂಜನಗೂಡು ತಾಲೂಕು ಸೇರಿದಂತೆ ಜಿಲ್ಲೆಯಾದ್ಯಂತ ಆಚರಿಸಲಾಯಿತು.





ತಿ.ನರಸೀಪುರ: ಡಾ.ಬಾಬು ಜಗಜೀವನ್ ರಾಂ ಅವರು ಕೇಂದ್ರ ಸರಕಾರದಲ್ಲಿ ರಕ್ಷಣೆ, ಆಹಾರ, ಕೃಷಿ ಸೇರಿದಂತೆ ಹಲವಾರು ಖಾತೆಗಳನ್ನು ಸಮರ್ಥವಾಗಿ ನಿರ್ವಹಣೆ ಮಾಡಿದ್ದು, ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹಾನ್ ನಾಯಕರಲ್ಲಿ ಒಬ್ಬರಾಗಿದ್ದರು ಎಂದು ತಹಸೀಲ್ದಾರ್ ಸಿ.ಜಿ.ಗೀತಾ ಹೇಳಿದರು.

ಸಮೀಪದ ಬೈರಾಪುರ ಗ್ರಾಮದ ಪ್ರವೇಶ ದ್ವಾರದಲ್ಲಿ ಸ್ಥಾಪಿಸಲಾಗಿರುವ ಡಾ.ಬಾಬು ಜಗಜೀವನರಾಂ ಪುತ್ಥಳಿ ಸಮೀಪ ಏರ್ಪಡಿಸಲಾಗಿದ್ದ ಬಾಬೂಜಿಯವರ 36 ನೇ ವರ್ಷದ ಪುಣ್ಯ ಸ್ಮರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ತಾಲೂಕು ಪಂಚಾಯ್ತಿ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಮಾತನಾಡಿ, ಸ್ವಾತಂತ್ರ್ಯ ಹೋರಾಟಗಾರರು ಮತ್ತು ಉತ್ತಮ ಆಡಳಿತಗಾರರಾಗಿದ್ದ, ಬಾಬು ಜಗಜೀವನ್ ರಾಂ ಅವರು ಬಾಬೂಜಿ ಎಂದೇ ಜನಪ್ರಿಯರಾಗಿದ್ದರು. ಹಿಂದುಳಿದ ಸಮಾಜದವರಿಗೆ ಸಮಾನತೆಯ ಸಮಾಜ ಮತ್ತು ಗೌರವಾನ್ವಿತ ಸ್ಥಾನ ಗಳಿಸಿಕೊಡುವುದಕ್ಕಾಗಿ ಐವತ್ತು ವರ್ಷಗಳ ಕಾಲ ವಿಶೇಷ ಪ್ರಯತ್ನ ಪಟ್ಟಿದ್ದರು.

ಒಬ್ಬ ರಾಷ್ಟ್ರೀಯ ನಾಯಕ, ಸಂಸತ್ ಪಟು, ಕೇಂದ್ರದ ಮಂತ್ರಿ, ಹಿಂದುಳಿದ ವರ್ಗ ಮತ್ತು ದಲಿತರ ಅಭಿವೃದ್ಧಿಯ ಹರಿಕಾರರಾದ ಬಾಬೂಜಿ ಅವರು ರಾಜಕೀಯ ಸಾಮರ್ಥ್ಯದಲ್ಲಿನ ಸಮತಾ ಭಾವದ ಹುರುಪು, ಆದರ್ಶ ಮತ್ತು ಅನನ್ಯ ಸ್ಫೂರ್ತಿ ಇಂದಿಗೂ ಅನುಕರಣೀಯ. ಬಾಬೂಜಿಯವರ ರಾಜಕೀಯ ನಾಯಕತ್ವವು ದೇಶಕ್ಕೆ ಸ್ವಾತಂತ್ರ್ಯ ದೊರಕಿಸಿಕೊಟ್ಟಿದ್ದಷ್ಟೇ ಅಲ್ಲ, ಆಧುನಿಕ ಪ್ರಜಾಪ್ರಭುತ್ವದ ನಿರ್ಮಾಣಕ್ಕೆ ಭದ್ರ ಬುನಾದಿ ಒದಗಿಸಿಕೊಟ್ಟಿತು ಎಂದು ಅವರು ಸ್ಮರಿಸಿದರು.

ಬಾಬೂಜಿಯವರ ಪುತ್ಥಳಿ ವರುಣಾ ವಿಧಾನಸಭಾ ಕ್ಷೇತ್ರದಲ್ಲಿ ನಿರ್ಮಾಣವಾಗಿರುವುದು ಈ ಭಾಗದ ಸಮಾಜದವರ ಪುಣ್ಯವಾಗಿದೆ. ಪುತ್ಥಳಿ ನಿರ್ಮಾಣ ಮಾಡಲು ಸಹಕರಿಸಿದ ಸಿದ್ದರಾಮಯ್ಯರವರನ್ನು ಮುಂಬರುವ ಚುನಾವಣೆಯಲ್ಲಿ ಬೆಂಬಲಿಸಬೇಕೆಂದು ಮರಯ್ಯ ಮನವಿ ಮಾಡಿದರು.

ಪುರಸಭಾ ಮಾಜಿ ಉಪಾಧ್ಯಕ್ಷ ಪ್ರೇಮಾ ಮರಯ್ಯ, ತಾಪಂ ಮಾಜಿ ಅಧ್ಯಕ್ಷ ಶಿವಸ್ವಾಮಿ, ಮಾಜಿ ಸದಸ್ಯ ಜವರಯ್ಯ, ಶಿರಸ್ತೇದಾರ್ ಮಹದೇವ ನಾಯಕ, ಕಾಂಗ್ರೆಸ್ ವೈದ್ಯಕೀಯ ವಿಭಾಗದ ಜಿಲ್ಲಾಧ್ಯಕ್ಷ ಡಾ.ಪ್ರದೀಪ್, ಗ್ರಾಪಂ ಮಾಜಿ ಸದಸ್ಯ ದಿವಾಕರ್, ಮುಖಂಡರಾದ ಸಿದ್ದುಂಡಿ ನಟ, ಸುರೇಶ್, ರಾಮಚಂದ್ರ, ನಾಗ ಮತ್ತಿತರರಿದ್ದರು.

ಸೇನೆಗೆ ಬಲ ತುಂಬಿದ ಬಾಬೂಜಿ: ಡಾ. ಬಾಬು ಜಗಜೀವನರಾಂ ರವರು ರಕ್ಷಣಾ ಸಚಿವರಾಗಿದ್ದ ವೇಳೆ ಸೇನೆಗೆ ಬಲ ತುಂಬಿ ದೇಶ ಸ್ವಾವಲಂಬಿಯಾಗಲು ಅತ್ಯುತ್ತಮ ಕೊಡುಗೆ ನೀಡಿದ್ದರು ಎಂದು ಪುರಸಭಾ ಸದಸ್ಯ ಹಾಗೂ ಚಿತ್ರನಟ ಅರ್ಜುನ್ ರಮೇಶ್ ಹೇಳಿದರು.

ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ತಿ.ನರಸೀಪುರ ತಾಲೂಕು ಪಂಚಾಯ್ತಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಹಸಿರು ಕ್ರಾಂತಿಯ ಹರಿಕಾರ ಡಾ. ಬಾಬು ಜಗಜೀವನರಾಂ ಅವರ 36 ನೇ ಪುಣ್ಯ ಸ್ಮರಣೆ ಕಾರ್ಯಕ್ರಮದಲ್ಲಿ ಭಾಗ ವಹಿಸಿ ಬಾಬೂಜಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ಸಲ್ಲಿಸಿ ಮಾತನಾಡಿದರು.

ಬಾಬೂಜಿಯವರು ರಕ್ಷಣಾ ಸಚಿವರಾಗಿದ್ದ ವೇಳೆ ಎದುರಾದ ಯುದ್ದದಲ್ಲಿ ದಿಟ್ಟವಾಗಿ ಶತ್ರು ಸೈನ್ಯವನ್ನು ಹಿಮ್ಮೆಟ್ಟಿಸಲು ಸೇನೆಗೆ ಬಲ ತುಂಬುವ ಕೆಲಸ ಮಾಡಿದ್ದರು. ಹಸಿರು ಕ್ರಾಂತಿಯ ಮೂಲಕ ಆಹಾರೋತ್ಪಾದನೆಗೆ ಹೆಚ್ಚಿನ ಒತ್ತು ನೀಡಿ ಆಹಾರ ಸಮಸ್ಯೆಗೆ ತಿಲಾಂಜಲಿ ನೀಡಿ ಹೊರ ದೇಶಗಳಿಗೂ ಆಹಾರವನ್ನು ರಫ್ತು ಮಾಡುವ ನಿಟ್ಟಿನಲ್ಲಿ ಆಡಳಿತ ನಡೆಸಿದ್ದ ಅತ್ಯುತ್ತಮ ಸಂಸದೀಯ ಪಟುವಾಗಿದ್ದರು ಎಂದರು.

ತಹಶಿಲ್ದಾರ್ ಸಿ.ಜೆ.ಗೀತಾ, ಬಾಬು ಜಗಜೀವನ್ ರಾಮ್ ಸಂಘದ ಅಧ್ಯಕ್ಷ ಮಲಿಯೂರು ಶಂಕರ್, ಉಪಾಧ್ಯಕ್ಷ ಗೋವಿಂದರಾಜು, ತಾಪಂ ಮಾಜಿ ಸದಸ್ಯರಾದ ಜವರಯ್ಯ, ಗಣೇಶ್, ರಾಮಲಿಂಗಯ್ಯ, ಸೋಸಲೆ ಶಿವಕುಮಾರ್, ಮುಖಂಡರಾದ ಸಿದ್ದರಾಜು, ಸಿ.ಡಿ.ವೆಂಕಟೇಶ್, ಆಲಗೂಡು ಶಿವಣ್ಣ, ಲಿಂಗರಾಜು, ವಡ್ಡಗಲ್ಲಯ್ಯ, ಸುನಿಲ್ ಕುಮಾರ್, ಪುಟ್ಟಸ್ವಾಮಿ, ನಾಗರಾಜು, ತುಂಬಲ ಮಂಜುನಾಥ್, ತಾಪಂ ಕಾರ್ಯನಿರ್ವಣಾಧಿಕಾರಿ ಕೃಷ್ಣ ಸಮಾಜ ಕಲ್ಯಾಣಾಧಿಕಾರಿ ರಾಮೇಗೌಡ ವ್ಯವಸ್ಥಾಪಕ ನಾಗರಾಜು ಮತ್ತಿತರರಿದ್ದರು.

ಬಾಬೂಜಿ ಆದರ್ಶ, ವ್ಯಕ್ತಿತ್ವ ಪ್ರೇರಣೆಯಾಗಿರಲಿ



ನಂಜನಗೂಡು: ಡಾ.ಬಾಬು ಜಗಜೀವನರಾಂ ಅವರ ವ್ಯಕ್ತಿತ್ವ, ಆದರ್ಶ ಗುಣಗಳು, ನಮ್ಮೆಲ್ಲರಿಗೂ ಪ್ರೇರಣೆಯಾಗಬೇಕಿದೆ ಎಂದು ತಹಸೀಲ್ದಾರ್ ಎಂ. ಶಿವಮೂರ್ತಿ ಕರೆ ನೀಡಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ನಡೆದ ಡಾ.ಬಾಬು ಜಗಜೀವನರಾಂರವರ 36ನೇ ಪುಣ್ಯಸ್ಮರಣೆಯ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು. ಹಸಿರುಕ್ರಾಂತಿಯ ಮೂಲಕ ದೇಶದ ಬಡತನ, ಆಹಾರ ಕೊರತೆಯನ್ನು ನಿವಾರಿಸುವಲ್ಲಿ ಸಹಾಯಕವಾಯಿತು. ಸಣ್ಣ ವಯಸ್ಸಿನಲ್ಲೇ ಬಹುತೇಕ ಎಲ್ಲಾ ಖಾತೆಗಳಲ್ಲೂ ಕೆಲಸ ಮಾಡಿ ದೇಶದ ಉನ್ನತಿಗಾಗಿ ಶ್ರಮಿಸಿದ್ದಾರೆ. ಅವರ ತತ್ವ ಆದರ್ಶಗುಣಗಳು ನಮ್ಮೆಲ್ಲರಿಗೂ ಪ್ರೇರಣೆಯಾಗಲಿ ಎಂದರು.

ಸಮುದಾಯದ ಬಹುದಿನದ ಬೇಡಿಕೆ ತಾಲೂಕಿನಲ್ಲಿ ಸುಸಜ್ಜಿತವಾದ ಸಮುದಾಯ ಭವನಬೇಕು ಎಂಬುದು. ಈ ಸಮುದಾಯ ಭವನ ನಿರ್ಮಾಣಕ್ಕೆ ಜಾಗದ ಸಮಸ್ಯೆ ಎದುರಾಗಿತ್ತು. ಅದನ್ನು ನಿವಾರಿಸಿ ಸಮುದಾಯ ಭವನಕ್ಕೆ ಸಂಸದ ವಿ.ಶ್ರೀನಿವಾಸಪ್ರಸಾದ್, ಶಾಸಕ ಬಿ.ಹರ್ಷವರ್ಧನ್ ಗುದ್ದಲಿಪೂಜೆ ನೆರವೇರಿಸಿದ್ದಾರೆ. ಮುಂದಿನ ಜನ್ಮದಿನಾಚರಣೆಯ ಸಂದರ್ಭದಲ್ಲಿ ಅದು ಲೋಕಾರ್ಪಣೆಯಾಗಲಿದೆ ಎಂದರು.

ಇದೇ ಸಂದರ್ಭದಲ್ಲಿ ನಗರಸಭಾಧ್ಯಕ್ಷ ಎಚ್.ಎಸ್.ಮಹದೇವಸ್ವಾಮಿ, ಉಪಾಧ್ಯಕ್ಷೆ ನಾಗಮಣಿ ಶಂಕರಪ್ಪ ಸ್ಥಾಯಿ ಸಮಿತಿ ಅಧ್ಯಕ್ಷೆ ಮೀನಾಕ್ಷಿ ನಾಗರಾಜು, ಸದಸ್ಯರಾದ ವಿಜಯ ಲಕ್ಷ್ಮಿ, ಮಂಗಳಮ್ಮ, ಯೋಗೀಶ್, ಎಸ್.ಪಿ. ಮಹೇಶ್, ಮುಖಂಡರಾದ ಕುಮಾರ್, ಸ್ವಾಮಿ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರಾದ ಶ್ರೀನಿವಾಸ ಪ್ರಸಾದ್, ಅಧಿಕಾರಿಗಳಾದ ಲೋಕೇಶ್, ಬಿಇಓ ರಾಜು, ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಬೈಲಕುಪ್ಪೆಯಲ್ಲಿ ದಲೈಲಾಮ ಹುಟ್ಟುಹಬ್ಬ ಆಚರಣೆ



ಬೈಲಕುಪ್ಪೆ, ಜು. 6(ರಾಜೇಶ್)–ನಾನು ಭಾರತದ ಮಗ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ದಲೈಲಾಮ ಅವರಿಗೆ ಭಾರತ ರತ್ನ ನೀಡಬೇಕೆಂದು ಇಂಡೋ–ಟಿಬೆಟಿಯನ್ ಸೊಸೈಟಿ ಅಧ್ಯಕ್ಷ ಬಿ .ವಿ ಜವರೇಗೌಡ ಭಾರತ ಸರ್ಕಾರಕ್ಕೆ ಒತ್ತಾಯ ಮಾಡಿದರು.

ಪಿರಿಯಾಪಟ್ಟಣ ತಾಲೂಕಿನ ಬೈಲಕುಪ್ಪೆಯ ಎಂಟನೇ ಕ್ಯಾಂಪಿನಲ್ಲಿರುವ ಅರಮನೆ ಆವರಣದಲ್ಲಿ ಹಮ್ಮಿಕೊಂಡಿದ್ದ ಅವರ 87ನೇ ಹುಟ್ಟುಹಬ್ಬ ಆಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಬೆಂಗಳೂರಿನ ಇನ್ಕಮ್ ಟ್ಯಾಕ್ಸ್ ಆಫೀಸರ್ ಹರ್ಷವರ್ಧನ್ ಹಾಗೂ ಪಿರಿಯಾಪಟ್ಟಣ ತಹಸೀಲ್ದಾರ್ ಚಂದ್ರ ಮೌಳಿ ಉಪಸ್ಥಿತರಿದ್ದರು. ತಮ್ಮ ನೆಚ್ಚಿನ ಗುರುಗಳ ಹುಟ್ಟುಹಬ್ಬ ಆಚರಿಸಲು ಸುಮಾರು 2000 ಸೇರಿದಂತೆ ಟಿಬೆಟಿಯನ್ನರು ಬೌದ್ಧ ಬಿಕ್ಷುಗಳು ಶಾಲಾ ವಿದ್ಯಾರ್ಥಿಗಳು ಸ್ಥಳದಲ್ಲಿ ಜಮಾಯಿಸಿ ದಲಾಯಿಲಾಮ ಪ್ರತಿಮೆಗೆ ನಮಸ್ಕರಿಸಿ ದೀರ್ಘಾಯುಷ್ಯ ಪೂಜೆ ಸಲ್ಲಿಸಿದರು.

ಮಿಡಲ್ ವೇ ಟಿಬೆಟಿಯನ್ ಯೂಥ್ ಕಾಂಗ್ರೆಸ್ ಮತ್ತು ಟಿಬೇಟಿಯನ್ ಮಹಿಳಾ ಸಂಘದ ವತಿಯಿಂದ ಮೈಸೂರಿನ ಜಿಲ್ಲಾಧಿಕಾರಿ, ಕಮಿಷನರ್ ಕಚೇರಿ, ಹಾಗೂ ಪತ್ರಿಕಾ ಕಚೇರಿ ಸೇರಿದಂತೆ ವಿವಿಧ ಇಲಾಖೆಯ ಕಚೇರಿಗಳಿಗೆ ಭೇಟಿ ನೀಡಿ ಸಿಹಿ ಹಂಚಿ, ಬೈಲಕುಪ್ಪೆಯಲ್ಲಿ ಇರುವ ವೃದ್ಧಾಶ್ರಮಗಳಿಗೆ ಅನ್ನ ಸಂತರ್ಪಣೆ ಏರ್ಪಡಿಸಿದ್ದರು.

ರೋಟರಿ ಅಧ್ಯಕ್ಷ ಸತ್ಯನಾರಾಯಣ ನಿವೃತ್ತ ವೈದ್ಯಾಧಿಕಾರಿ ಡಾ ಶಿವಕುಮಾರ್, ಟಿಬೇಟಿಯನ್ ಸ್ಥಳೀಯ ಆಡಳಿತ ಮಂಡಳಿಯ ಅಧಿಕಾರಿಗಳು ಇದ್ದರು.

ರೈತನ ಜಮೀನಿಗೆ ಹರಿದ ಕೊಳಚೆ ನೀರು; ಫಸಲು ನಾಶ

ಅಧಿಕಾರಿಗಳ ನಿರ್ಲಕ್ಷ್ಯ, ಬೇಜವಾಬ್ದಾರಿಗೆ ರೈತ ಕಂಗಾಲು

ಮಲ್ಕುಂಡಿ, ಜು. 6(ಚನ್ನಪ್ಪ)– ಅಧಿಕಾರಿಗಳ ಬೇಜವಾಬ್ದಾರಿ ಮತ್ತು ನಿರ್ಲಕ್ಷ್ಯದಿಂದ ಸಮೀಪದ ಮಡಿಕೆ ಹುಂಡಿ ಗ್ರಾಮದ ರೈತರೊಬ್ಬರ ಜಮೀನಿಗೆ ಕೊಳಚೆ ನೀರು ಹರಿದು ಲಕ್ಷಾಂತರ ರೂ. ಫಸಲು ನಾಶವಾಗಿದೆ. ಗ್ರಾಮದ ವಾಸಿ ರಾಮಮೂರ್ತಿ ಅವರಿಗೆ ಎರಡು ಎಕರೆ ಜಮೀನಿದ್ದು, ಕಷ್ಟಪಟ್ಟು ಬೆಳೆದ ಫಸಲು ಬಾರದೆ ಲಕ್ಷಾಂತರ ರೂ. ನಷ್ಟವಾಗಿದೆ. ಗ್ರಾಮದ ಕೊಳಚೆ ನೀರೆಲ್ಲ ಈ ರೈತನ ಜಮೀನಿಗೆ ಹರಿದು ಬರುತ್ತಿರುವುದೇ ಇದಕ್ಕೆ ಕಾರಣವಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ಇತ್ತ ತಿರುಗಿ ನೋಡುವ ಕೆಲಸವನ್ನೂ ಸಹ ಮಾಡಿಲ್ಲ.



ಕೊಳಚೆ ನೀರಿನೊಂದಿಗೆ ಊರಿನ ಎಲ್ಲಾ ತ್ಯಾಜ್ಯವೂ ಜಮೀನಿಗೆ ಬಂದು ಸೇರಿದ್ದು, ಇಡೀ ಜಮೀನು ಕೊಚ್ಚೆ ಗುಂಡಿಯಾಗಿದೆ. ಇದ್ದರಿಂದ ಬೆಳೆ ಕೈಕೊಟ್ಟು ಲಕ್ಷಾಂತರ ರೂ ನಷ್ಟವಾಗಿದೆ. ಕೃಷಿ ಭೂಮಿಯನ್ನೇ ನಂಬಿ ಜೀವನ ಸಾಗಿಸುತ್ತಿದ್ದ ಇವರು ಬ್ಯಾಂಕ್‌ನಲ್ಲಿ ಸಾಲ ಮಾಡಿ ಬೆಳೆ ಬೆಳೆದಿದ್ದರು ಎನ್ನಲಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನ ಹರಿಸಿ ಕೊಳಚೆ ನೀರು ಬೇರೆಡೆಗೆ ಹರಿದು ಹೋಗಲು ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು. ಮತ್ತು ಆಗಿರುವ ನಷ್ಟಕ್ಕೆ ಪರಿಹಾರ ಕಲ್ಪಿಸಬೇಕು. ಇಲ್ಲದಿದ್ದರೆ ತಮ್ಮ ಕುಟುಂಬ ಸಮೇತ ಆತ್ಮಹತ್ಯೆಗೆ ಶರಣಾಗುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಎಂ.ಸಿ.ತಳಲು ಗ್ರಾಪಂಗೆ ಅಂಬಿಕಾ ಅಧ್ಯಕ್ಷೆ



ಸರಗೂರು, ಜು.6(ನಾಗೇಶ್)– ಎಂ.ಸಿ. ತಳಲು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ. ಬಿಜೆಪಿಯ ಅಂಬಿಕಾ ಚಂದ್ರಶೇಖರ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ತಾಲೂಕು ಪಂಚಾಯಿತಿ ಆವರಣದಲ್ಲಿ ಬುಧವಾರ ನಡೆದ ಚುನಾವಣೆ ಪ್ರಕ್ರಿಯೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಅಂಬಿಕಾ ಚಂದ್ರಶೇಖರ್ ಒಬ್ಬರೇ ಮಾತ್ರ ನಾಮಪತ್ರ ಸಲ್ಲಿಸಿದ್ದರು. ಹೀಗಾಗಿ ಚಿಕ್ಕಬರಗಿ ಅಂಬಿಕಾ ಚಂದ್ರಶೇಖರ್ ಅವರು ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು. ಕಬಿನಿ ಜಲಾಶಯದ ಎಇ ಉಷಾ, ಪಿಡಿಓ ಎಂ.ಜಯಶಂಕರಮೂರ್ತಿ ಚುನಾವಣೆ ಪ್ರಕ್ರಿಯೆ ನಡೆಸಿಕೊಟ್ಟರು.

ಉಪಾಧ್ಯಕ್ಷೆ ನಿಂಗಮ್ಮ, ಸದಸ್ಯರಾದ ಎಂ.ಎಲ್.ಪ್ರಕಾಶ್‌ಚಂದ್ರು, ರಮೇಶ್, ಕೆಂಡನಾಯಕ, ರಾಜಕುಮಾರ್, ಲಕ್ಷ್ಮೀ ಕುಮಾರ್, ನಾಗಮ್ಮ, ಚಿಕ್ಕಕ್ಯಾತ, ಲಕ್ಷ್ಮಿ ಮಾದಪ್ಪ, ಗ್ರಾಮದ ಮುಖಂಡರಾದ ಭವನೀಶ್, ಶಿವಪುರ ಪ್ರಕಾಶ್, ಜಯ ಲಕ್ಷ್ಮಿ ಪುರ ರಾಜು, ನಂದೀಶ್, ಮಂಜುಳಾ ದೇವಣ್ಣ, ಕುಮಾರ್, ಎಂ.ಪಿ. ಮಂಜುನಾಥ್, ಎಂ.ಬಿ. ಮಂಜು, ಬಸವಣ್ಣ, ಎಂ. ರಾಜಪ್ಪ, ಮಾದಪ್ಪ, ಮಹ ದೇವೇಗೌಡ, ಕರೀಗೌಡ, ಗುರುಮಲ್ಲೇ ಗೌಡ, ನಾಗರಾಜು, ಮಹದೇವ ಸ್ವಾಮಿ, ನಂಜುಂಡಸ್ವಾಮಿ, ಜಗದೀಶ್, ಪ್ರಭುಶಂಕರ್, ಚನ್ನಗುಂಡಿ ಬ್ರಹ್ಮದೇವಪ್ಪ, ಗ್ರಾಮಸ್ಥರು ಹಾಜರಿದ್ದರು.

ಪಿಯುಸಿಯಲ್ಲಿ ಎಚ್.ಎಸ್. ರಕ್ಷಿತಾ ತಾಲೂಕಿಗೆ ಪ್ರಥಮ



ಬೆಟ್ಟದಪುರ, ಜು.6(ಶಿವದೇವ್)– ಈ ಬಾರಿಯ ದ್ವಿತೀಯ ಪಿಯುಸಿ ಪರೀಕ್ಷೆಯ ವಾಣಿಜ್ಯ ವಿಭಾಗದಲ್ಲಿ ಬೆಟ್ಟದಪುರದ ಡಿಟಿಎಂಎನ್ ಶಾಲೆಯ ವಿದ್ಯಾರ್ಥಿನಿ ಎಚ್.ಎಸ್. ರಕ್ಷಿತಾ 585 ಅಂಕ ಪಡೆದು ತಾಲೂಕಿಗೆ ಪ್ರಥಮರಾಗಿದ್ದಾರೆ. ಕನ್ನಡ–95, ಇಂಗ್ಲಿಷ್–91, ಅರ್ಥಶಾಸ್ತ್ರ–100, ವ್ಯವಹಾರ ಅಧ್ಯಯನ–99 ಅಂಕಗಳನ್ನು ಪಡೆದಿದ್ದಾರೆ. ಈಕೆ ಚಪ್ಪರದಹಳ್ಳಿ ಗ್ರಾಪಂ ನೌಕರ ಸಣ್ಣೇಗೌಡ ಅವರ ಪುತ್ರಿ.

ಕಾರ್ಖಾನೆ ಪುನರಾರಂಭಿಸಲು ಆಗ್ರಹಿಸಿ ಪ್ರತಿಭಟನೆ



ಬೆಟ್ಟದಪುರ, ಜು.6– ಏಕಾಏಕಿ ಮುಚ್ಚಿರುವ ಪಿರಿಯಾಪಟ್ಟಣ ತಾಲೂಕಿನ ಸೀಗೂರು ಗ್ರಾಮದಲ್ಲಿರುವ ಶ್ರೀ ಗಣೇಶ ಸ್ಪಿನ್ನರ್ ಕಾರ್ಖಾನೆಯನ್ನು ಪುನರಾರಂಭಿಸಬೇಕು. ಕಳೆದ ಏಳು ತಿಂಗಳುಗಳಿಂದ ಬಾಕಿಯಿರುವ ವೇತನವನ್ನೂ ನೀಡುವಂತೆ ಆಗ್ರಹಿಸಿ ಗಣೇಶ್ ಸ್ಪಿನ್ನರ್ ಕಾರ್ಮಿಕರ ಸಂಘದ ಕಾರ್ಮಿಕರು ಕಾರ್ಖಾನೆ ಮುಂದೆ ಪ್ರತಿಭಟನೆ ನಡೆಸಿದರು.

ಕಾರ್ಖಾನೆಗೆ ಸಂಬಂಧಪಟ್ಟ ಬಟ್ಟೆ ಅಂಗಡಿ, ವೇ ಬ್ರಿಡ್ಜ್, ಮುಚ್ಚಿಸಬೇಕು ಮತ್ತು ಕಾರ್ಖಾನೆಯ ಆವರಣದೊಳಗಿರುವ ಯಾವ ವಸ್ತುಗಳನ್ನು ಹೊರಗೆ ಹೋಗದಂತೆ ಕಾರ್ಖಾನೆಯ ಮಾಲೀಕರಿಗೆ ಸೂಚಿಸಬೇಕೆಂದು ಹಾಗೂ ಕಾರ್ಖಾನೆಗೆ ಭೇಟಿ ನೀಡಿ ಪರಿಶೀಲನೆ ಮಾಡಿ ಅನ್ಯಾಯಕ್ಕೊಳಗಾಗಿರುವ ಕಾರ್ಮಿಕರಿಗೆ ನ್ಯಾಯ ಒದಗಿಸಿಕೊಡಬೇಕೆಂದು ಶ್ರೀಗಣೇಶ್ ಸ್ಪಿನ್ನರ್ ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ರಘುರಾಜೇ ಅರಸ್ ಅವರ ನೇತೃತ್ವದಲ್ಲಿ ಕಾರ್ಮಿಕರುಗಳು ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ನಾಗಾಚಾರಿ, ವಿ.ಕೆ. ಶಂಕರಚಾರಿ, ಮಲ್ಲೇಶ್, ಆನಂದ್, ವಿ.ಕೆ. ಶಂಕರ್, ನಾಗಭೂಷಣ್, ಸೋಮಾಚಾರಿ, ಈ.ಟಿ. ಮಹದೇವ್, ವೆಂಕಟೇಶ್, ಕಾರ್ಮಿಕರುಗಳು ಹಾಜರಿದ್ದರು.

ಬಿಜೆಪಿ ಸರ್ಕಾರ ವರ್ಗಾವಣೆಯಲ್ಲಿ ಬ್ಯುಸಿ, ಅಭಿವೃದ್ಧಿ ಕುಂಠಿತ

ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ಶಾಸಕ ಮಂಜುನಾಥ್ ವಾಗ್ದಾಳಿ



ಹುಣಸೂರು, ಜು.6(ಕೆಕೆ)– ಸರ್ಕಾರಿ ಅಧಿಕಾರಿಗಳ ವರ್ಗಾವಣೆಯಲ್ಲಿ ಬಿಜೆಪಿ ಸರ್ಕಾರ ಬ್ಯುಸಿಯಾಗಿದ್ದು, ಗ್ರಾಮೀಣಾಭಿವೃದ್ಧಿ ಕೆಲಸಗಳಾಗದೆ ಸ್ಥಳೀಯ ಶಾಸಕರು ಕೈಚೆಲ್ಲಿ ಕೂರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಶಾಸಕ ಹೆಚ್.ಪಿ.ಮಂಜುನಾಥ್ ವಾಗ್ದಾಳಿ ನಡೆಸಿದ್ದಾರೆ.

ನಗರಸಭೆಯ ಸಭಾಂಗಣದಲ್ಲಿ ನಡೆದ ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು ಕಳೆದ ಮೂರು ವರ್ಷಗಳಿಂದ ಯಾವುದೆ ಅನುದಾನಗಳು ಬಂದಿಲ್ಲ. ಹಿಂದಿನ ಹಳೆಯ ಅನುದಾನಗಳಲ್ಲೇ ಸಣ್ಣ–ಪುಟ್ಟ ಅಭಿವೃದ್ಧಿ ಕೆಲಸಗಳು ಕುಂಟುತ್ತ ನಡೆಯುತ್ತಿವೆ. ಕೆಡಿಪಿ ಸಭೆ ಕರೆದು ಅಧಿಕಾರಿಗಳನ್ನು ಕೇಳಿದರೆ ಏನು ಫಲ? ಕಳೆದ ಸಭೆಯಲ್ಲಿ ಭಾಗವಹಿಸಿದ್ದ ಅಧಿಕಾರಿಗಳು ಈ ಸಭೆಯಲ್ಲಿ ಇಲ್ಲ, ವರ್ಗವಾಗಿ ಹೋಗಿದ್ದಾರೆ ಎಂದರು.

ನಾನು ಹೊಸಬ ಎಂದು ಹೇಳುತ್ತಾರೆ. ಬಿಜೆಪಿ ಸರ್ಕಾರ ಅಧಿಕಾರಿಗಳ ವರ್ಗಾವಣೆಯ ಭರ್ಜರಿ ಕೊಕೊ ಆಟದಲ್ಲಿ ಬ್ಯುಸಿಯಾಗಿರುವುದರಿಂದ ಕೆಲಸಗಳು ಆಗದೆ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿದೆ. ಕೃಷಿ ಮತ್ತು ತೋಟಗಾರಿಕೆ ಸೇರಿದಂತೆ 29 ಇಲಾಖೆಗಳಿಗೆ ಸರ್ಕಾರ ಕಳೆದ ಮೂರು ವರ್ಷಗಳಿಂದ ಯಾವುದೇ ಅನುದಾನ ನೀಡದೆ ರಾಜ್ಯದಲ್ಲಿನ ಅಭಿವೃದ್ಧಿ ಮಟ್ಟ ಕುಸಿದಿದೆ ಎಂದರು.

ಕುಡಿಯುವ ನೀರು: ತಾಲೂಕಿನಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ 211 ಗ್ರಾಮಗಳನ್ನು ಗುರುತಿಸಲಾಗಿದೆ. ಅದರಲ್ಲಿ ಯೋಜನೆಗಳನ್ನು ಪೂರ್ಣಗೊಳಿಸಿ 150 ಗ್ರಾಮಗಳಿಗೆ ಕುಡಿಯುವ ನೀರನ್ನು ನೀಡಲಾಗುವುದು ಎಂದು ಜಿಪಂ ಕುಡಿಯುವ ನೀರು ಯೋಜನೆಯ ಅಧಿಕಾರಿ ಸಭೆಗೆ ತಿಳಿಸಿದರು.

ಆರೋಗ್ಯ ಇಲಾಖೆ: ಇತ್ತೀಚೆಗೆ ಕೆಲವು ದಿಗಳಿಂದ ನಿರಂತರವಾಗಿ ಬೀಳುತ್ತಿರುವ ಮಳೆಯಿಂದಾಗಿ ಶೀತದ ವಾತಾವರಣ ನಿರ್ಮಾಣವಾಗಿದ್ದು, ನಿಂತ ಮಳೆ ನೀರಿನಲ್ಲಿ ಸೊಳ್ಳೆಗಳ ಉತ್ಪತ್ತಿಯಿಂದ ಡೆಂಗ್ಯೂ ಜ್ವರ ಕಾಣಿಸಿಕೊಂಡಿದ್ದು, ನಗರ ಪ್ರದೇಶದಲ್ಲಿ 3 ರಿಂದ 4 ಗ್ರಾಮಾಂತರ ಪ್ರದೇಶದಲ್ಲಿ 12 ಪ್ರಕರಣಗಳು ದಾಖಲಾಗಿದೆ. ಮುಂಜಾಗ್ರತಾ ಕ್ರಮವನ್ನು ವಹಿಸಿ ನಿಯಂತ್ರಣ ಮತ್ತು ತಡೆಗಟ್ಟುವಿಕೆಗೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ ಹಾಗೂ ತಾಲೂಕಿನಲ್ಲಿ ಕೋವಿಡ್ ನಿಯಂತ್ರಣದಲ್ಲಿದೆ ಎಂದು ತಾಲೂಕು ಆರೋಗ್ಯಾಧಿಕಾರಿ ಡಾ.ಕೀರ್ತಿಕುಮಾರ್ ಸಭೆಗೆ ತಿಳಿಸಿದರು.

ಪೊಲೀಸ್ ಇಲಾಖೆ: ನಗರ ವ್ಯಾಪ್ತಿಯ ಆಯಕಟ್ಟಿನ ಪ್ರದೇಶದಲ್ಲಿ ಸುಮಾರು 25 ಸಿಸಿ ಕ್ಯಾಮರಾಗಳು ಬೇಕಾಗಿವೆ ಎಂದು ಪೊಲೀಸರು ಸಭೆಗೆ ತಿಳಿಸಿದರು. ಕೋರ್ಟ್ ಸರ್ಕಲ್, ಕಲ್ಕುಣಿಕೆ ಸರ್ಕಲ್‌ಗಳಲ್ಲಿ ಸಿಗ್ನಲ್ ಅಳವಡಿಸಲು ಕ್ರಮವಹಿಸಬೇಕಾಗಿದೆ. ಮತ್ತು ನಗರದ ಬಾಲಕಿಯರ ಕಾಲೇಜು, ಅರಸು ಕಾಲೇಜು, ಬಳಿ ಬೈಕ್ ವಿಲಿಂಗ್ ಮಾಡುವವರ ಸಂಖ್ಯೆ ಹೆಚ್ಚಾಗಿದ್ದು ಅದನ್ನು ನಿಯಂತ್ರಿಸಿ ಮತ್ತು ನಗರಸಭಾ ಮೈದಾನ, ದೇವಸ್ಥಾನಗಳು ಹಾಗೂ ಆರ್‌ಟಿಓ ಮತ್ತಿತರ ಕಡೆಗಳಲ್ಲಿ ಗಾಂಜಾ ವ್ಯಸನಿಗಳು ಹೆಚ್ಚಾಗಿದ್ದು, ಅದನ್ನು ತಾವು ಹೆಚ್ಚು ಬೀಟ್ ಮಾಡುವ ಮೂಲಕ ತಡೆಗಟ್ಟಬೇಕಾಗಿದೆ ಎಂದು ಶಾಸಕರು ಪೊಲೀಸರಿಗೆ ಸೂಚಿಸಿದರು.

ಹುಡಾಕ್ಕೆ ಶಾಸಕರ ಸೂಚನೆ: ಮಾರುತಿ ಬಡಾವಣೆ ಸೇರಿದಂತೆ ಮತ್ತಿತರ ಬಡಾವಣೆಗಳ ಅಭಿವೃದ್ಧಿಯಲ್ಲಿ ರಸ್ತೆ ಮತ್ತು ಚರಂಡಿಯ ನಿರ್ಮಾಣ ಕೆಲಸವನ್ನು ಹುಡಾದವರೆ ವಹಿಸಿಕೊಳ್ಳಬೇಕಾಗುತ್ತೆ. ಹೊಸ ಹೊಸ ಬಡಾವಣೆಗಳ ನಿರ್ಮಾಣ ನಂತರ ಎಲ್ಲಾ ಪರಿಶೀಲಿಸಿ ಎಲ್ಲಾ ಶುಲ್ಕವನ್ನು ಕಟ್ಟಿಸಿಕೊಂಡು ನಗರಾಭಿವೃದ್ಧಿ ಅನುಮೋದನೆ ನೀಡುವ ನೀವು ಎಲ್ಲಾ ಶುಲ್ಕವನ್ನು ನೀವೆ ಪಡೆದುಕೊಳ್ಳುವುದರಿಂದ ಅಭಿವೃದ್ಧಿಯ ಹೊಣೆಯನ್ನು ನೀವೆ ಹೊರಬೇಕಾಗುತ್ತೆ ಎಂದು ಶಾಸಕರು ಹುಡಾ ಅಧಿಕಾರಿಗೆ ಸೂಚಿಸಿದರು.

ಸಭೆಯಲ್ಲಿ ತಹಶೀಲ್ದಾರ್ ಡಾ. ಅಶೋಕ್, ತಾಪಂ ಕಾರ್ಯನಿರ್ವಹಣಾಧಿಕಾರಿ ಬಿ.ಕೆ.ಮನು, ಪೌರಾಯುಕ್ತ ರವಿಕುಮಾರ್, ನಗರಸಭಾಧ್ಯಕ್ಷೆ ಸಮೀನಾ ಭಾನು, ಉಪಾಧ್ಯಕ್ಷ ದೇವನಾಯ್ಕ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಡಿಆರ್‌ಸಿ ಸಿನಿಮಾಸ್

DRC CINEMAS

ದೂ : 4240422/4241800

ಸ್ಕ್ರೀನ್ 1	**777 ಚಾರ್ಲಿ** (ಕ): ಬೆ.10ಕ್ಕೆ, ರಾ.7ಕ್ಕೆ, ರಾ.10.10ಕ್ಕೆ, ಮಿನಿಯನ್ಸ್: ದಿ ರೈಸ್ ಆಫ್ ಗ್ರೂ (3ಡಿ)(ಇಂ): ಮ.1.15ಕ್ಕೆ, ಮ.3.10ಕ್ಕೆ, ಸಂ.5.05ಕ್ಕೆ.
ಸ್ಕ್ರೀನ್ 2	ತ್ರಿವಿಕ್ರಮ (ಕ): ಬೆ.10.10ಕ್ಕೆ, ಯಾನೈ (ತ): ಮ.1.05ಕ್ಕೆ, ಬೈರಾಗಿ (ಕ): ಸಂ.4.15ಕ್ಕೆ, ಪಕ್ಕ ಕಮರ್ಷಿಯಲ್ (ತೆ): ರಾ.7.10ಕ್ಕೆ, ರಾಷ್ಟ್ರ ಕವಚ್ ಓಂ (ಹಿಂ): ರಾ.10.05ಕ್ಕೆ
ಸ್ಕ್ರೀನ್ 3	ಹರಿಕಥೆ ಅಲ್ಲ ಗಿರಿಕಥೆ (ಕ): ಬೆ.10.45ಕ್ಕೆ, ರಾಕೆಟ್ರಿ (ತ): ಮ.1.20ಕ್ಕೆ, ರಾ.7.05ಕ್ಕೆ, ವಿಂಡೋಶೀಟ್ (ಕ): ಸಂ.4.20ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 4	ಬೈರಾಗಿ (ಕ): ಬೆ.10.40ಕ್ಕೆ, ಮ.1.20ಕ್ಕೆ, ರಾ.7.20ಕ್ಕೆ, ರಾ.10ಕ್ಕೆ, **777 ಚಾರ್ಲಿ** (ಕ): ಸಂ.4.05ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ರಾಕೆಟ್ರಿ (ತ): ಬೆ.9.55ಕ್ಕೆ, ಸಂ.5.15ಕ್ಕೆ, ಮಿನಿಯನ್ಸ್: ದಿ ರೈಸ್ ಆಫ್ ಗ್ರೂ (3ಡಿ)(ಇಂ): ಮ.1.05ಕ್ಕೆ, ಮ.3.10ಕ್ಕೆ, ರಾ.8.25ಕ್ಕೆ, ರಾಕೆಟ್ರಿ (ಹಿಂ): ರಾ.10.30ಕ್ಕೆ.
ಸ್ಕ್ರೀನ್ 2	ವಿಂಡೋಶೀಟ್ (ಕ): ಬೆ.9.50ಕ್ಕೆ, ಮ.12.45ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, **777 ಚಾರ್ಲಿ** (ಕ): ಮ.3.40ಕ್ಕೆ.
ಸ್ಕ್ರೀನ್ 3	**777 ಚಾರ್ಲಿ** (ಕ): ಬೆ.10ಕ್ಕೆ, ರಾ.10.10ಕ್ಕೆ, ರಾಷ್ಟ್ರ ಕವಚ್ ಓಂ (ಹಿಂ): ಮ.1.25ಕ್ಕೆ, ಸಂ.4.20ಕ್ಕೆ, ವಿಂಡೋಶೀಟ್ (ಕ): ರಾ.7.15ಕ್ಕೆ.
ಸ್ಕ್ರೀನ್ 4	ವಿಂಡೋ ಶೀಟ್ (ಕ): ಬೆ.9.55ಕ್ಕೆ, ಯಾನೈ (ತ): ಮ.12.45ಕ್ಕೆ, ಪಕ್ಕ ಕಮರ್ಷಿಯಲ್ (ತೆ): ಮ.3.55ಕ್ಕೆ, ರಾ.10.20ಕ್ಕೆ, **777 ಚಾರ್ಲಿ** (ಕ): ರಾ.7ಕ್ಕೆ.

ಮೈಸೂರು ವಿಷನ್ ಸಿನಿಮಾ

MVC

ದೂ : 0821–2973519

ಸ್ಕ್ರೀನ್ 1	ತ್ರಿವಿಕ್ರಮ (ಕ): ಬೆ.10.25ಕ್ಕೆ, ಪಕ್ಕ ಕಮರ್ಷಿಯಲ್ (ತೆ): ಮ.1.15ಕ್ಕೆ, ಸಂ.6.40ಕ್ಕೆ, ರಾಷ್ಟ್ರ ಕವಚ್ ಓಂ (ಹಿಂ): ಸಂ.4.05ಕ್ಕೆ, ರಾಕೆಟ್ರಿ (ತ): ರಾ.9.30ಕ್ಕೆ.
ಸ್ಕ್ರೀನ್ 2	ರಾಷ್ಟ್ರ ಕವಚ್ ಓಂ (ಹಿಂ): ಬೆ.11ಕ್ಕೆ, ರಾಕೆಟ್ರಿ (ತ): ಮ.1.40ಕ್ಕೆ, **777 ಚಾರ್ಲಿ** (ಕ): ಸಂ.4.40ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 3	ಬೈರಾಗಿ (ಕ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ಸಂ.6.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	**777 ಚಾರ್ಲಿ** (ಕ): ಬೆ.10.05ಕ್ಕೆ, ರಾ.9.15ಕ್ಕೆ, ತ್ರಿವಿಕ್ರಮ (ಕ): ಮ.1.10ಕ್ಕೆ, ವಿಂಡೋ ಶೀಟ್ (ಕ): ಸಂ.4ಕ್ಕೆ, ಸಂ.6.40ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357088

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕೆಜಿಎಫ್ 2(ಕ): ಸಂ.5.35ಕ್ಕೆ, ರಾಜ್ ಸೌಂಡ್ಸ್ ಅಂಡ್ ಲೈಟ್ಸ್ (ತು): ಸಂ.6.05ಕ್ಕೆ, ಮೆಟಡೊರ್ (ಕ): ಬೆ.11.45ಕ್ಕೆ, ಟಾಪ್ ಗನ್ (ಇಂ): ಮ.2.45ಕ್ಕೆ, ಸಾಮ್ರಾಟ್ ಪೃಥ್ವಿರಾಜ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಬೂಲ್‌ಬುಲಯ್ಯ 2(ಹಿಂ): ಮ.12.30ಕ್ಕೆ, ಸಂ.6.40ಕ್ಕೆ, ಮೇಜರ್ (ಹಿಂ): ಮ.1.05ಕ್ಕೆ, ರಾ.7.15ಕ್ಕೆ, ರಾ.9.20ಕ್ಕೆ, ವಿಕ್ರಮ್ (ತ): ಬೆ.8.30ಕ್ಕೆ, ಬೆ.9.30ಕ್ಕೆ, ಬೆ.11ಕ್ಕೆ, ಮ.12ಕ್ಕೆ, ಮ.2.35ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.9ಕ್ಕೆ, ರಾ.10.30ಕ್ಕೆ, ಮೇಜರ್ (ತೆ): ಬೆ.9.25ಕ್ಕೆ, ಸಂ.4.10ಕ್ಕೆ, ರಾ.10.20ಕ್ಕೆ, **F3** (ತೆ): ಮ.3.35ಕ್ಕೆ, ಸರ್ಕಾರು ವಾರಿ ಪಾಠ (ತೆ): ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಪಕ್ಕ ಕಮರ್ಷಿಯಲ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಚಾರ್ಲಿ–777 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಓಂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಪಕ್ಕ ಕಮರ್ಷಿಯಲ್ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಭೈರಾಗಿ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಯಾನೈ (ತ)	4 ಪ್ರದರ್ಶನಗಳು
ಸಂಗಂ	
ಭೈರಾಗಿ (ಕ)	4 ಪ್ರದರ್ಶನಗಳು
ಲಿಡೋ	
ವಿಂಡೋಶೀಟ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಓಂ (ಹಿಂ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಓಂ (ಹಿಂ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು
ಪ್ರಭಾ	
ತ್ರಿವಿಕ್ರಮ (ಕ)	4 ಪ್ರದರ್ಶನಗಳು

ಹುಣಸನಾಳು ಗ್ರಾಮದಲ್ಲಿ ಬೈಕ್‌ಗೆ ಬೆಂಕಿ

ನಂಜನಗೂಡು, ಜು.6(ಸುದರ್ಶನ)– ನಂಜನಗೂಡು ತಾಲೂಕು ಹುಣಸನಾಳು ಗ್ರಾಮದಲ್ಲಿ ಮನೆ ಮುಂದೆ ನಿಲ್ಲಿಸಿದ ಬೈಕ್‌ಗೆ ಕಿಡಿಗೇಡಿಗಳು ಬೆಂಕಿ ಹಚ್ಚಿರುವ ಘಟನೆ ನಡೆದಿದೆ.



ಹುಣಸನಾಳು ಗ್ರಾಮದ ಶಿವನಾಗ ಎಂಬುವರು ರಾತ್ರಿಯ ಸಮಯದಲ್ಲಿ ತಮ್ಮ ಮನೆಯ ಮುಂದೆ ಬೈಕ್ ನಿಲ್ಲಿಸಿದ್ದರು. ಕಿಡಿಗೇಡಿಗಳು ತಡರಾತ್ರಿಯಲ್ಲಿ ಹುಣಸನಾಳು ಗ್ರಾಮದ ಬೀದಿ ದೀಪಗಳನ್ನು ಆಫ್ ಮಾಡಿ ಬೈಕ್ ಗೆ ಬೆಂಕಿ ಹಚ್ಚಿ ಪರಾರಿಯಾಗಿದ್ದಾರೆ. ಸ್ಪ್ಲೆಂಡರ್ ಪ್ಲಸ್ ಬೈಕನ್ನು ಸಾಲ ಮಾಡಿ ತೆಗೆದುಕೊಂಡಿದ್ದರು ಎನ್ನಲಾಗಿದ್ದು, ಬೈಕ್ ಸುಟ್ಟು ಕರಕಲಾಗಿದೆ. ಸಹಾಯವಾಣಿ 112 ಸಂಖ್ಯೆಗೆ ಗ್ರಾಮಸ್ಥರು ದೂರವಾಣಿ ಕರೆ ಮಾಡಿ ವಿಷಯ ತಿಳಿಸಿದ್ದಾರೆ. ಸ್ಥಳಕ್ಕೆ ಭೇಟಿ ನೀಡಿದ ನಂಜನಗೂಡು ಗ್ರಾಮಾಂತರ ಪೊಲೀಸರು ಪರಿಶೀಲನೆ ನಡೆಸಿದ್ದಾರೆ. ಕಿಡಿಗೇಡಿಗಳ ಬಂಧನಕ್ಕೆ ಬಲೆ ಬೀಸಿದ್ದಾರೆ.

ವಿದ್ಯುತ್ ಸ್ಪರ್ಶದಿಂದ ಎತ್ತು ಸಾವು

ಜೊತೆಗಾರನನ್ನು ಕಳೆದುಕೊಂಡು ಮೂಕವೇದನೆ ಅನುಭವಿಸುತ್ತಿರುವ ಮತ್ತೊಂದು ಎತ್ತು

ಹನಗೋಡು, ಜು.6(ಮಹೇಶ್)– ವಿದ್ಯುತ್ ಸ್ಪರ್ಶದಿಂದ ಎತ್ತೊಂದು ಸಾವನ್ನಪ್ಪಿ, ಮತ್ತೊಂದು ಎತ್ತು ತನ್ನ ಜೊತೆಗಾರನನ್ನು ಕಳೆದುಕೊಂಡು ಮೂಕವೇದನೆ ಅನುಭವಿಸುತ್ತಿರುವ ಘಟನೆ ಹುಣಸೂರು ತಾಲೂಕಿನ ಕಾಳಭೂಚನಹಳ್ಳಿಯಲ್ಲಿ ಸಂಭವಿಸಿದೆ.



ಗ್ರಾಮದ ವಾಸಿ ಸ್ವಾಮಿಗೌಡ ಎಂಬುವರ ಎತ್ತು ಸಾವನ್ನಪ್ಪಿದ್ದು, ಜೋಡೆತ್ತುಗಳಲ್ಲಿ ಒಂದು ಎತ್ತು ತಮ್ಮ ಜಮೀನಿನಲ್ಲಿ ಮೇಯುತ್ತಿದ್ದಾಗ ಸೋನೆ ಮಳೆಯಿದ್ದ ಕಾರಣ ಸಮೀಪದಲ್ಲೇ ಅಳವಡಿಸಿದ್ದ ಟ್ರಾನ್ಸ್‌ಫಾರ್ಮರ್ ಹತ್ತಿರ ಹೋಗಿದೆ. ಈ ವೇಳೆ ವಿದ್ಯುತ್ ಸ್ಪರ್ಶಗೊಂಡು ಸಾವನ್ನಪ್ಪಿದ್ದು, ಮತ್ತೊಂದು ಎತ್ತು ಇದೀಗ ಒಂಟಿಯಾಗಿದೆ. ದಶಕಗಳಿಂದ ಜೊತೆಯಾಗಿದ್ದ ಜೊತೆಗಾರನನ್ನೂ ಕಳೆದುಕೊಂಡು ಮೂಕವೇದನೆ ಅನುಭವಿಸುತ್ತಿರುವ ದೃಶ್ಯ ಸಾರ್ವಜನಿಕರ ಮನುಕಲಕುವಂತಿತ್ತು. ಸ್ಥಳಕ್ಕೆ ಹನಗೋಡು ಚೆಸ್ಕಾಂ ಜೆಇ ವಿನಯ್, ಸಿಬ್ಬಂದಿ ಮೋಹನ್, ಸದಾ ಮತ್ತಿತರರು ಹಾಜರಿದ್ದು ಮಹಜರು ನಡೆಸಿ ನಂತರ ಸೂಕ್ತ ಪರಿಹಾರ ನೀಡಲಾಗುವುದು ಎಂದರು.

ಪ್ರಾದೇಶಿಕ ಪತ್ರಿಕೆಗಳು ಪರಿಣಾಮಕಾರಿಯಾಗಿವೆ...

● ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಿಮತ ● 'ಆಂದೋಲನ-50 ಸಾರ್ಥಕ ಪಯಣ' ಕಾರ್ಯಕ್ರಮದಲ್ಲಿ ಭಾಗಿ

ಮೈಸೂರು, ಜು.6(ಎಂಕೆ)- ಪ್ರಾದೇಶಿಕ ಪತ್ರಿಕೆಗಳ ಪಾತ್ರ ಬಹಳ ಪರಿಣಾಮಕಾರಿಯಾಗಿದೆ. ಇವು ಪ್ರಾದೇಶಿಕ ಸುದ್ದಿಯನ್ನಷ್ಟೇ ಅಲ್ಲದೆ ಆ ಸುದ್ದಿಗಳ ವಿಶ್ಲೇಷಣೆಯಲ್ಲೂ ವಿಭಿನ್ನವಾಗಿವೆ. ಸತ್ವತೆ ಮತ್ತು ಸತ್ವವನ್ನು ಪ್ರಾದೇಶಿಕ ಪತ್ರಿಕೆಗಳು ಒಳಗೊಂಡಿವೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಿವ್ಯಕ್ತಪಡಿಸಿದರು.

ಮೈಸೂರಿನ ಮುಕ್ತ ವಿವಿ ಘಟಿಕೋತ್ಸವ ಸಭಾಂಗಣದಲ್ಲಿ ಆಯೋಜಿಸಿದ್ದ 'ಆಂದೋಲನ-50 ಸಾರ್ಥಕ ಪಯಣ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಪತ್ರಿಕೆಗಳ ಪಾತ್ರ ಮಹತ್ವದ್ದಾಗಿದ್ದು, ಸ್ವಾತಂತ್ರ್ಯ ಪೂರ್ವದಿಂದಲೂ ಹೋರಾಟದ ಭಾಗವಾಗಿ ಬೆಳೆದು ಬಂದಿವೆ. ಇವತ್ತಿನ, ಅಂದಿನ ಪತ್ರಿಕೆಗಳಿಗೆ ಬಹಳಷ್ಟು ವ್ಯತ್ಯಾಸವಿದ್ದು, ಉದ್ಯಮಿಯಾಗಿದ್ದ ರಾಮನಾಥ್ ಗೋಯೆಂಕಾ ಅವರು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆ ಆರಂಭಿಸಿ, ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರ ತುರ್ತು ಪರಿಸ್ಥಿತಿ ಘೋಷಣೆ ವಿರುದ್ಧ ನಿಂತವರು. ಪತ್ರಿಕೆಗಳ ಸ್ವಾತಂತ್ರ್ಯ ಹರಣವಾದಾಗ ಮುಖಪುಟವನ್ನು ಖಾಲಿ ಬಿಟ್ಟು ಖಂಡಿಸಿದ ಮೊದಲ ಪತ್ರಿಕೆ ಇಂಡಿಯನ್ ಎಕ್ಸ್‌ಪ್ರೆಸ್ ಎಂದರು.

ಅಂತಃಕರಣ ಕಡಿಮೆಯಾಗಿದೆ: ಕಾಲ ಬದಲಾಗುತ್ತಿದೆ. ಜಾಗತೀಕರಣ, ಖಾಸಗೀಕರಣ ಹಾಗೂ ಉದಾರೀಕರಣದ ನಡುವೆ ಅಂತಃಕರಣ ಕಡಿಮೆಯಾಗಿದೆ. ಅಂತಃಕರಣದ ಜೊತೆಗೆ ಮುಂದೆ ಸಾಗಬೇಕಾದ ಅವಶ್ಯಕತೆಯಿದೆ. ಇವತ್ತಿನ ಪರಿಸ್ಥಿತಿಗೆ ತಕ್ಕಂತೆ ಮುನ್ನಡೆಯಬೇಕಾಗಿದೆ ಎಂದು ಹೇಳಿದರು.

ಭೂಮಿ ಮೊದಲಿನಿಂದಲೂ ಅಷ್ಟೇ ಇದ್ದು, ರೈತರ ಸಂಖ್ಯೆ ಹೆಚ್ಚಾಗಿದೆ. ಆದ್ದರಿಂದ ರೈತರ ಮಕ್ಕಳು ರೈತರಾಗಿಯೇ ಇರದೆ ವಿದ್ಯಾವಂತರಾಗಿ ಬೇರೆ ಬೇರೆ ಕ್ಷೇತ್ರಗಳಲ್ಲಿಯೂ ಬೆಳೆಯಬೇಕು. ಈ ನಿಟ್ಟಿನಲ್ಲಿ ನಾವುಗಳು ಪ್ರತಿಯೊಂದನ್ನು ಪೂರ್ವಾಗ್ರಹ ಪೀಡಿತರಾಗಿ ನೋಡದೆ ವಸ್ತುನಿಷ್ಠತೆಯಿಂದ ಪರಿಗಣಿಸಿ ಅತ್ಯಂತ ಉನ್ನತ ಗುಣಮಟ್ಟದ ಬದುಕನ್ನು ಕಟ್ಟಿಕೊಳ್ಳಬೇಕಾಗಿದೆ. ತಂತ್ರಜ್ಞಾನ ಬೆಳೆದಂತೆ ಪತ್ರಿಕೋದ್ಯಮದಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಇವತ್ತಿನ ಯುವಕರು ಚುರುಕಾಗಿ ಕೆಲಸ ಮಾಡುತ್ತಿದ್ದು, ಪತ್ರಿಕೆಗಳ ಪುಟಗಳ ಸಂಖ್ಯೆಯೂ ಹೆಚ್ಚಾಗುತ್ತಿದೆ. ಅದರಂತೆ ಜನರು ಕೂಡ ಏನೇ ಹೇಳಿದರೂ ಆಲೋಚನೆ ಮಾಡಿ ಒಪ್ಪಿಕೊಳ್ಳುವ ಮನಸ್ಥಿತಿಯನ್ನು ರೂಢಿಸಿಕೊಂಡಿದ್ದಾರೆ ಎಂದರು.

ರಾಜಕಾರಣಿಗಳು ಯಶಸ್ವಿಯಾಗಲಿಲ್ಲ: ರಾಜಕಾರಣಿಗಳು ಪತ್ರಿಕೆ ನಡೆಸುವ ಪ್ರಯತ್ನ ಮಾಡಿದರಾದರೂ ಯಶಸ್ವಿಯಾಗಲಿಲ್ಲ. ವೀರೇಂದ್ರ ಪಾಟೀಲರು 'ಲೋಕವಾಣಿ' ಎಂಬ ಪತ್ರಿಕೆಯನ್ನು ಪ್ರಾರಂಭಿಸಿದ್ದರು. ಆದರೆ ಬಹಳ ದಿನ ನಡೆಯಲಿಲ್ಲ. ಅದರಂತೆ ಆರ್.ಗುಂಡೂರಾವ್ ಅವರು ಕೂಡ ಇಂಗ್ಲಿಷ್ ಪತ್ರಿಕೆಯೊಂದನ್ನು ಆರಂಭಿಸಿದರೂ ತುಂಬ ದಿನ ನಡೆಯಲಿಲ್ಲ. ಅದ್ಯಾಕೋ ರಾಜಕಾರಣಿಗಳಿಗೆ ಹಾಗೂ ಪತ್ರಿಕೆಗಳಿಗೆ ಕೂಡಿ ಬಂದಿಲ್ಲ. ಒಂದು ರೀತಿಯಲ್ಲಿ ಇದು ಒಳ್ಳೆಯದೇ ಆಗಿದೆ. ರಾಜಕಾರಣಿಗಳು ಪತ್ರಿಕೆಗಳ ಮಾನ್ಯತೆ ಪಡೆದರೆ ಬಹಳ ಕಷ್ಟವಾಗುತ್ತದೆ. ಅದರಂತೆ ಉದ್ಯಮಿಗಳು ರಾಜಕಾರಣಕ್ಕೆ ಬಂದರೆ ಬಹಳ ಅನಾಹುತಗಳಾಗುತ್ತವೆ ಎನ್ನುತ್ತಾರೆ. ಆದರೆ ಇವತ್ತು ರಾಜಕಾರಣಿಗಳು ಉದ್ಯಮಿಗಳಾಗುತ್ತಿದ್ದು, ಕಾಲಕಾಲಕ್ಕೆ ಮೌಲ್ಯಗಳು ಬದಲಾಗುತ್ತಿವೆ ಎಂದು ಹೇಳಿದರು.

ಹಿರಿಯ ಪತ್ರಕರ್ತ ಪಿ.ಸಾಯಿನಾಥ್, ಹಿರಿಯ ಸಮಾಜವಾದಿ ಪ.ಮಲ್ಲೇಶ್, ಹ್ಯಾಟ್ರಿಕ್ ಹೀರೋ ಡಾ.ಶಿವರಾಜ್ ಕುಮಾರ್, 'ಆಂದೋಲನ' ಸಹ ಸಂಸ್ಥಾಪಕರಾದ ನಿರ್ಮಲ ಕೋಟಿ ಉಪಸ್ಥಿತರಿದ್ದರು.

ಸೇನಾ ತರಬೇತಿ ಪಡೆದರೆ ನಿವೃತ್ತಿ ಹೇಗೆ?

"ಕಾಲ ಬದಲಾದಂತೆ ಜನರ ಆಶೋತ್ತರಗಳು ಬದಲಾಗುತ್ತಿವೆ. ಸರ್ಕಾರಿ ಕಾರ್ಯಕ್ರಮಗಳು ಕೂಡ ಬದಲಾವಣೆಯಾಗುತ್ತಿರುತ್ತವೆ. ಸಣ್ಣ ವಯಸ್ಸಿನಲ್ಲಿ ಸೇನಾ ತರಬೇತಿ ಪಡೆದವರು ನಿವೃತ್ತಿಯಾಗುತ್ತಾರೆ ಎಂದು ಹೇಳುವುದ್ಹೇಗೆ? ನಿವೃತ್ತಿ ಎಂದರೆ ಸರ್ಕಾರಿ ನೌಕರರು 60 ವರ್ಷ ಆದ ಮೇಲೆ ನಿವೃತ್ತಿಯಾಗುವುದು. ಇಲ್ಲವೆ ಅವಧಿ ವಿಸ್ತರಿಸುವುದಾಗಿದೆ. 17ರಿಂದ 24 ವರ್ಷದವರೇ ಒಳ್ಳೆಯ ಸೇನಾ ತರಬೇತಿ ಪಡೆದು ಬೇರೆ ಬೇರೆ ಉದ್ಯೋಗಗಳನ್ನು ಮಾಡಲು ಅವಕಾಶ ಇದೆ. ಜಗತ್ತಿನ ಹಲವು ದೇಶಗಳಲ್ಲಿಯೂ ಇದೆ. ಆದ್ದರಿಂದ ಎಲ್ಲಾ ಯೋಜನೆ ಹಾಗೂ ಯೋಚನೆಗಳಿಗೆ ಅವಕಾಶ ನೀಡಿ, ಸಕಾರಾತ್ಮಕವಾಗಿ ಕ್ರಮಕೈಗೊಂಡರೆ ರಾಜ್ಯ, ದೇಶ ಮುನ್ನಡೆಯುತ್ತವೆ. ಅಂತಹ ಕೆಲಸವನ್ನು ಪತ್ರಿಕೆಗಳು ಮಾಡಬೇಕಾಗಿದೆ.

–ಬಸವರಾಜ ಬೊಮ್ಮಾಯಿ, ಸಿಎಂ



ಮೈಸೂರಿನ ಮುಕ್ತ ವಿವಿ ಘಟಿಕೋತ್ಸವ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ 'ಆಂದೋಲನ-50 ಸಾರ್ಥಕ ಪಯಣ' ಕಾರ್ಯಕ್ರಮವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿದರು. ವಿಪಕ್ಷ ನಾಯಕ ಸಿದ್ದರಾಮಯ್ಯ, ಹಿರಿಯ ಪತ್ರಕರ್ತ ಪಿ.ಸಾಯಿನಾಥ್, ಹಿರಿಯ ಸಮಾಜವಾದಿ ಪ.ಮಲ್ಲೇಶ್, ಖ್ಯಾತ ನಟ ಡಾ.ಶಿವರಾಜ್‌ಕುಮಾರ್, 'ಆಂದೋಲನ' ದಿನಪತ್ರಿಕೆ ಸಹ ಸಂಸ್ಥಾಪಕರಾದ ನಿರ್ಮಲ ಕೋಟಿ ಉಪಸ್ಥಿತರಿದ್ದರು.

ಮಾಧ್ಯಮ ಈಗ ಮನರಂಜನಾ ಕ್ಷೇತ್ರವಾಗಿದೆ

ಹಿರಿಯ ಪತ್ರಕರ್ತ ಪಿ.ಸಾಯಿನಾಥ್ ವಿಷಾದ

ಮೈಸೂರು: ಮಾಧ್ಯಮ ಕ್ಷೇತ್ರ ಈಗ ಮನರಂಜನಾ ಕ್ಷೇತ್ರವಾಗುತ್ತಿದ್ದು, 2024ರ ವೇಳೆಗೆ ಈ ಮನರಂಜನಾ ಕ್ಷೇತ್ರದ ವಹಿವಾಟು ಸುಮಾರು 2.32 ಟ್ರಿಲಿಯನ್‌ಗೆ ಮುಟ್ಟಲಿದೆ ಎಂದು ಹಿರಿಯ ಪತ್ರಕರ್ತ ಪಿ.ಸಾಯಿನಾಥ್ ಹೇಳಿದರು.

'ಆಂದೋಲನ-50 ಸಾರ್ಥಕ ಪಯಣ' ಕಾರ್ಯಕ್ರಮದಲ್ಲಿ ದಿಕ್ಸೂಚಿ ಭಾಷಣ ಮಾಡಿದ ಅವರು, ಕಾರ್ಪೊರೇಟ್ ಸಂಸ್ಥೆಗಳು ಮಾಧ್ಯಮ ಕ್ಷೇತ್ರವನ್ನು ನಡೆಸುವುದರಿಂದ ಲಾಭವೇ ಮುಖ್ಯವಾಗಿದೆ. ಈಗಂತೂ ಎರಡು ಬಗೆಯ ಪತ್ರಕರ್ತರಿದ್ದಾರೆ. ಅವರಲ್ಲಿ ಒಬ್ಬರು ಸುದ್ದಿ ಬರೆಯುವ ಪತ್ರಕರ್ತರಾದರೆ, ಇನ್ನೊಬ್ಬರು ಕೇವಲ ಲಿಪಿಕಾರರಾಗಿದ್ದಾರೆ ಎಂದರು.

ಪ್ರಸ್ತುತ ಬಂಡವಾಳಶಾಹಿಗಳ ಕಪಿಮುಷ್ಟಿಯಲ್ಲಿರುವ ಮಾಧ್ಯಮ ಕ್ಷೇತ್ರದಲ್ಲಿ ಎರಡನೇ ಬಗೆಯ ಪತ್ರಕರ್ತರೇ ಹೆಚ್ಚಾಗಿದ್ದಾರೆ. ಅಂಬಾನಿ ಅವರು ಎರಡ್ಮೂರು ಮಾಧ್ಯಮ ಸಂಸ್ಥೆಗಳಿಗೆ ಮಾಲೀಕರಾಗಿದ್ದಾರೆ. ಅವರಿಗೆ ರೈತರ ಹೋರಾಟಗಳು ಮುಖ್ಯವಾಗುವುದಿಲ್ಲ. ಬದಲಾಗಿ ತಮ್ಮ ಉತ್ಪನ್ನಗಳನ್ನು ಪ್ರಚುರಪಡಿಸಲಷ್ಟೇ ಬಳಸಿಕೊಳ್ಳುತ್ತಿದ್ದಾರೆ. ಅವರ ಆದಾಯ ಪಂಜಾಬಿನ ಜಿಡಿಪಿಗಿಂತ ಹೆಚ್ಚಾಗಿದೆ. ಹಾಗೆಯೇ ಅದಾನಿ ಅವರ ಆದಾಯ ಹರಿಯಾಣದ ಜಿಡಿಪಿಗಿಂತ ಹೆಚ್ಚಾಗಿದೆ ಎಂದು ಹೇಳಿದರು.

ಪತ್ರಿಕೆಗಳು ದಲಿತರ, ಬಡವರ, ಅವಕಾಶ ವಂಚಿತರ ದನಿಯಾಗಲಿ

ವಿಪಕ್ಷ ನಾಯಕ ಸಿದ್ದರಾಮಯ್ಯ ಆಶಯ

ಮೈಸೂರು: ಬಡವರು, ದಲಿತರು, ಅವಕಾಶ ವಂಚಿತರು, ಧ್ವನಿ ಇಲ್ಲದವರ ಧ್ವನಿಯಾಗಿ ಪತ್ರಿಕೆಗಳು ಕೆಲಸ ಮಾಡಬೇಕು. ಸ್ವಾತಂತ್ರ್ಯ ಪೂರ್ವದಲ್ಲಿ ಹೋರಾಟದ ಹಾಗೂ ಸ್ವಾತಂತ್ರ್ಯ ನಂತರ ಚಳವಳಿಗಳ ಭಾಗವಾಗಿ ಪತ್ರಿಕೆಗಳು ಕೆಲಸ ಮಾಡಿವೆ ಎಂದು ಮಾಜಿ ಮುಖ್ಯಮಂತ್ರಿಗಳೂ ಆದ ವಿಪಕ್ಷ ನಾಯಕ ಸಿದ್ದರಾಮಯ್ಯ ಹೇಳಿದರು.

ಅಸಮಾನತೆ ತೊಲಗಿಸದೆ ಸಮ ಸಮಾಜ ನಿರ್ಮಾಣ ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಸರ್ಕಾರ ಹಾಗೂ ಮಾಧ್ಯಮಗಳು ಕೆಲಸ ಮಾಡಬೇಕಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಮಾಧ್ಯಮಗಳು ನಿರೀಕ್ಷಿತ ಮಟ್ಟದಲ್ಲಿ ಕೆಲಸ ಮಾಡುತ್ತಿಲ್ಲ ಎಂಬುದು ನೋವಿನ ಸಂಗತಿಯಾಗಿದೆ. ಸುದ್ದಿಯ ವಸ್ತುನಿಷ್ಠತೆ ಪ್ರಸ್ತುತಪಡಿಸದೆ ಕೆಲ ಮಾಧ್ಯಮಗಳು ರೋಚಕ, ವೈಯಕ್ತಿಕ ವಿಚಾರಗಳಿಗೆ ಹೆಚ್ಚಿನ ಮಹತ್ವ ನೀಡಿ ತೋರಿಸುತ್ತಿವೆ. ಮೌಢ್ಯಗಳನ್ನು ತೋರಿಸುವುದರಿಂದ ಸಮಾಜಕ್ಕೆ ಏನೂ ಪ್ರಯೋಜನವಿಲ್ಲ. ಚಾಮರಾಜನಗರಕ್ಕೆ ಹೋದರೆ ಸಿಎಂ ಸ್ಥಾನ ಹೋಗುತ್ತದೆ ಎನ್ನಲಾಗುತ್ತಿತ್ತು. ನಾನು ಮುಖ್ಯಮಂತ್ರಿಯಾಗಿದ್ದಾಗ 12 ಬಾರಿ ಹೋಗಿದ್ದೇನೆ. ನೀನು ಒಮ್ಮೆ ಹೋಗಿದ್ದೇ ಅಲ್ವೆ ಎಂದು ಸಿಎಂ ಬಸವರಾಜ ಬೊಮ್ಮಾಯಿಯವರ ಗಮನ ಸೆಳೆಯುವ ಮೂಲಕ ಹಾಸ್ಯ ಚಟಾಕಿ ಹಾರಿಸಿದರು.

ಕಾರಿನ ಮೇಲೆ ಕಾಗೆ ಕೂತಿದ್ದು ಸುದ್ದಿ...!

ನಾನು ಮುಖ್ಯಮಂತ್ರಿಯಾಗಿದ್ದಾಗ, ಏಯ್ ಬಸವರಾಜ್(ಸಿಎಂ ಬಸವರಾಜ ಬೊಮ್ಮಾಯಿಯವರ ಗಮನ ಸೆಳೆದು) ನನ್ನ ಕಾರಿನ ಮೇಲೆ ಒಂದು ಕಾಗೆ ಕೂತ್‌ಕೊಂಡ್‌ಬಿಡ್ತು. ಅದರ ಪಾಡಿಗದು ಕೂತ್‌ಕೊಂಡ್ ಅಮೇಲೆ ಹಾರೋಯ್ತು. ಆದರೆ ಟಿವಿಯಲ್ಲಿ ಅದರದ್ದೆ ಚರ್ಚೆ. ಸಿದ್ದರಾಮಯ್ಯನ ಕಾರಿನ ಮೇಲೆ ಕಾಗೆ ಕೂತಿತ್ತು... ಆಗ ಇನ್ನೇನು ನಾನು ಬಜೆಟ್ ಮಂಡಿಸಬೇಕಾಗಿತ್ತು. ಟಿವಿಯಲ್ಲಿ ಒಬ್ಬರು ಹೇಳ್ತಾರೆ ಸಿದ್ದರಾಮಯ್ಯ ಅವರು ಈ ಸಾರಿ ಬಜೆಟ್ ಮಂಡಿಸಲ್ಲ. ಇನ್ನು ಕೆಲವರು, ಅವರು ಬಜೆಟ್ ಮಂಡಿಸ್ತಾರೆ. ಆದರೆ ಸರ್ಕಾರ ಉಳಿಸಿಕೊಳ್ಳೋಕೆ ಆಗಲ್ಲ ಅಂತ. ಆದಾದ ನಂತರವೂ ನಾನು ಇನ್ನೂ ಎರಡು ವರ್ಷ ಮುಖ್ಯಮಂತ್ರಿಯಾಗಿದ್ದೆ ಎನ್ನುವ ಮೂಲಕ ಸಿದ್ದರಾಮಯ್ಯ ತಮ್ಮ ಹಾಸ್ಯಭರಿತ ಮಾತುಗಳಿಂದಲೇ ಮಾಧ್ಯಮಗಳ ಜವಾಬ್ದಾರಿ ತಿಳಿಸುವ ಪ್ರಯತ್ನ ಮಾಡಿದರು.

ಕೊಡಗು ಸೇರಿ ಕರಾವಳಿಯಲ್ಲಿ ವ್ಯಾಪಕ ಮಳೆ: ಸೂಕ್ಷ್ಮ ಪ್ರದೇಶಗಳಿಂದ ಜನರ ಸ್ಥಳಾಂತರ

ಮೈಸೂರಿನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ



ಮೈಸೂರು,ಜು.6(ಜಿಎ)–ಕೊಡಗು, ಉತ್ತರ ಕನ್ನಡ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ನಿರಂತರ ಮಳೆಯಾಗುತ್ತಿದೆ. ಕಳೆದ ಬಾರಿ ಭೂಕುಸಿತ ಉಂಟಾಗಿದ್ದ ಸ್ಥಳಗಳಲ್ಲಿ ವಾಸವಿರುವವರನ್ನು ಸ್ಥಳಾಂತರ ಮಾಡಲು ಈಗಾಗಲೇ ಸೂಚಿಸಲಾಗಿದೆ. ರೋಡ್‌ಗಳು ಬ್ಲಾಕ್ ಆಗದಂತೆ ನೋಡಿಕೊಳ್ಳಲು ತಿಳಿಸಿದ್ದು, ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದೇವೆ. ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಹಣಕಾಸಿನ ವ್ಯವಸ್ಥೆ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಮೈಸೂರಿನಲ್ಲಿ ಖಾಸಗಿ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ಮುಖ್ಯಮಂತ್ರಿಗಳು ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಸುರಿಯುತ್ತಿರುವ ನಿರಂತರ ಮಳೆಯ ವಿಚಾರವಾಗಿ ಈಗಾಗಲೇ ಎಲ್ಲಾ ಜಿಲ್ಲಾಧಿಕಾರಿಗಳ ಸಂಪರ್ಕದಲ್ಲಿದ್ದೇವೆ. ಮನೆಗಳಿಗೆ ಹಾನಿಯಾಗಿದ್ದರೆ ಪರ್ಯಾಯ ವ್ಯವಸ್ಥೆ ಮಾಡಿ ಎಂದು ಸೂಚಿಸಲಾಗಿದೆ ಎಂದರು.

ಮೈಸೂರಿನ ಎನ್‌ಡಿಆರ್‌ಎಫ್ ತಂಡವನ್ನು ಕೊಡಗಿಗೆ, ಮಂಗಳೂರಿನ ಎನ್‌ಡಿಆರ್‌ಎಫ್ ಮಂಗಳೂರಿಗೆ ಮತ್ತು ಮಂಗಳೂರಿನ ಎಸ್‌ಡಿಆರ್‌ಎಫ್ ತಂಡವನ್ನು ಉಡುಪಿ ಮತ್ತು ಕಾರವಾರ ಜಿಲ್ಲೆಗೆ ನಿಯೋಜನೆ ಮಾಡಲಾಗಿದೆ. ಈಗಾಗಲೇ ಎಲ್ಲಾ ಜಿಲ್ಲಾಧಿಕಾರಿಗಳ ಬಳಿ 10 ಕೋಟಿಗೂ ಹೆಚ್ಚು ಹಣವಿದ್ದು, ಅವಶ್ಯಕತೆ ಇದ್ದಲ್ಲಿ ಹೆಚ್ಚಿನ ಹಣ ಬಿಡುಗಡೆ ಮಾಡಲಾಗುವುದು ಎಂದು ಸಿಎಂ ಬೊಮ್ಮಾಯಿ ತಿಳಿಸಿದರು.

ಪ್ರವಾಹದಿಂದ ಗ್ರಾಮಗಳ ಮುಳುಗಡೆಗೆ ಶಾಶ್ವತ ಪರಿಹಾರ ವಿಚಾರದ ಬಗ್ಗೆ ಪ್ರತಿಕ್ರಿಯಿಸಿ, 2009ರ ಅವಧಿಯಲ್ಲಿ ಉತ್ತರ ಕರ್ನಾಟಕದಲ್ಲಿ ಪ್ರವಾಹ ಬಂದಾಗ ಬಿಎಸ್‌ವೈ ನೇತೃತ್ವದ ಸರ್ಕಾರ 60 ಹಳ್ಳಿಗಳನ್ನು ಸ್ಥಳಾಂತರ ಮಾಡಿತ್ತು. ಆದರೆ, ಪ್ರವಾಹ ಕಡಿಮೆಯಾದ ಮೇಲೆ ಮತ್ತೆ ಜನರು ಅದೇ ಹಳ್ಳಿಗಳಿಗೆ ಹೋದರು. ಹೀಗಾಗಿ ಪ್ರವಾಹ ಪೀಡಿತ ಹಳ್ಳಿಗಳನ್ನು ಗುರುತು ಮಾಡಿ ಸುತ್ತಮುತ್ತಲಿನ ಎತ್ತರದ ಜಾಗದಲ್ಲಿ ನಿರ್ಮಿತಿ ಕೇಂದ್ರಗಳನ್ನು ಸ್ಥಾಪನೆ ಮಾಡಲು ಚಿಂತನೆ ನಡೆಸಲಾಗಿದೆ ಎಂದು ತಿಳಿಸಿದರು.

ಶಾಲಾ ಮಕ್ಕಳಿಗೆ ಶೂ ಮತ್ತು ಬೈಸಿಕಲ್ ಈ ವರ್ಷವೇ ಕೊಡಲಾಗುವುದು. ಸ್ವಲ್ಪ ವಿಳಂಬವಾಗಿದೆ. ಇದನ್ನು ಶಿಕ್ಷಣ ಸಚಿವರಾದ ಬಿ.ಸಿ. ನಾಗೇಶ್ ನೋಡಿಕೊಳ್ಳುತ್ತಿದ್ದಾರೆ. ಈ ವರ್ಷವೇ ಶೂ ಮತ್ತು ಬೈಸಿಕಲ್ ವಿತರಣೆ ಮಾಡಲಾಗುತ್ತದೆ.

–ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಸಿದ್ದರಾಮಯ್ಯರದ್ದು ಕೇಸ್‌ಗಳನ್ನು ಮುಚ್ಚಿ ಹಾಕುವ ಸರ್ಕಾರವಾಗಿತ್ತು

ಪಿಎಸ್‌ಐ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಸದನಕ್ಕೆ ತಪ್ಪು ಮಾಹಿತಿ ನೀಡಿದ್ದ ಸಿಎಂ, ಗೃಹ ಸಚಿವರು ಹೇಗೆ ಅಧಿಕಾರದಲ್ಲಿ ಮುಂದುವರೆಯುತ್ತಾರೆ ಎಂದು ಪ್ರಶ್ನಿಸಿದ್ದ ವಿಪಕ್ಷ ನಾಯಕ ಸಿದ್ಧರಾಮಯ್ಯ ಹೇಳಿಕೆಗೆ ಸಿಎಂ ಬಸವರಾಜ ಬೊಮ್ಮಾಯಿ ಪರೋಕ್ಷ ಟಾಂಗ್ ನೀಡಿದರು. ಸಿದ್ದರಾಮಯ್ಯ ಅವರನ್ನು ನೋಡಿದರೆ ನನಗೆ ತುಂಬಾ ಕನಿಕರ ಹುಟ್ಟುತ್ತೆ. ದಕ್ಷ ಆಡಳಿತಗಾರ ಎನ್ನುವ ಸಿದ್ದರಾಮಯ್ಯನವರು ಹಿಂದೆ ಡಿಜಿಪಿಯೊಬ್ಬರ ಕೇಸನ್ನು ಮುಚ್ಚಿ ಹಾಕಿಲ್ವ. ಹಾಗೇ ಅವರ ಅವಧಿಯಲ್ಲಿ ಡಿವೈಎಸ್‌ಪಿ ಒಬ್ಬರು ಪಿಯುಸಿ ಪಾಸ್ ಮಾಡಿಸುತ್ತೇವೆ ಎಂದು 18 ಕೋಟಿ ಅವ್ಯವಹಾರ ನಡೆಸಿದ್ದಾರೆ ಎಂದು ಎಫ್‌ಐಆರ್ ದಾಖಲಾಗಿತ್ತು. ಆದರೂ ಆ ಅಧಿಕಾರಿ ಬಂಧನವಾಗದೇ ಕೇಸ್ ಮುಚ್ಚಿ ಹಾಕಿದ್ದರು. ಈ ಎಲ್ಲಾ ವಿಚಾರಗಳ ಬಗ್ಗೆ ಸದನದಲ್ಲಿ ಪ್ರಶ್ನಿಸಿದರೂ ಸೂಕ್ತ ಉತ್ತರ ಬರಲಿಲ್ಲ. ಏಕೆಂದರೆ ಅವರದ್ದು ಸ್ಪಂದಿಸುವ ಸರ್ಕಾರ ವಾಗಿರಲಿಲ್ಲ. ಕೇಸ್‌ಗಳನ್ನು ಮುಚ್ಚಿ ಹಾಕುವ ಸರ್ಕಾರವಾಗಿತ್ತು. ಪ್ರಥಮ ಬಾರಿ ಈ ರಾಜ್ಯದ ಉದಯದ ನಂತರ ಅತ್ಯಂತ ದೊಡ್ಡ ಅಧಿಕಾರಿಯಾದ ಎಡಿಜಿಪಿ ಬಂಧಿಸಿ, ತನಿಖೆ ಮಾಡುತ್ತಿದ್ದೇವೆ ಎಂದರು.

ಗೃಹ ಬಳಕೆ LPG ಸಿಲಿಂಡರ್ ಬೆಲೆ 50 ರೂ. ಏರಿಕೆ

ನವದೆಹಲಿ: ಗೃಹ ಬಳಕೆಯ ಅಡುಗೆ ಅನಿಲ ಬೆಲೆ ಮತ್ತೆ ಹೆಚ್ಚಳವಾಗಿದೆ. 14.2 ಕೆಜಿ ಎಲ್‌ಪಿಜಿ ಸಿಲಿಂಡರ್ ಬೆಲೆ 50 ರೂ. ಹೆಚ್ಚಳವಾಗಿದ್ದು, ನೂತನ ದರ ಇಂದಿನಿಂದ ಜಾರಿಗೆ ಬರಲಿದೆ. ಇಂದಿನಿಂದ ನವದೆಹಲಿಯಲ್ಲಿ ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆ 1053 ರೂ. ಆಗಿದ್ದು, 5 ಕೆಜಿಯ ಸಣ್ಣ ದೇಶೀಯ ಸಿಲಿಂಡರ್ ಬೆಲೆಯೂ ಹೆಚ್ಚಾಗಿದೆ. ಇದರ ಬೆಲೆಯನ್ನು ಪ್ರತಿ ಸಿಲಿಂಡರ್‌ಗೆ 18 ರೂ. ಯಷ್ಟು ಹೆಚ್ಚಿಸಲಾಗಿದೆ. ಮತ್ತೊಂದೆಡೆ 19 ಕೆಜಿ ವಾಣಿಜ್ಯ ಸಿಲಿಂಡರ್ ಬೆಲೆ 8.50 ರೂ. ಇಳಿಕೆಯಾಗಿದೆ. ಜುಲೈ 1ರಿಂದ 19 ಕೆಜಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯನ್ನು ಪ್ರತಿ ಸಿಲಿಂಡರ್‌ಗೆ 198 ರೂ. ಕಡಿಮೆ ಮಾಡಲಾಯಿತು. ಇದಕ್ಕೂ ಮುನ್ನ ಜೂನ್‌ನಲ್ಲಿ 19 ಕೆಜಿ ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆ ಪ್ರತಿ ಸಿಲಿಂಡರ್‌ಗೆ 135 ರೂ. ಇಳಿಕೆಯಾಗಿತ್ತು.



ಜು.8, ಉದ್ದಿಮೆದಾರರ ಸಮಾವೇಶ

ಮೈಸೂರು,ಜು.6–ರಾಜ್ಯ ಹಣಕಾಸು ಸಂಸ್ಥೆ ಮೈಸೂರು,ಮಂಡ್ಯ, ಚಾಮರಾಜನಗರ ಮತ್ತು ಮಡಿಕೇರಿ ಶಾಖಾ ಕಚೇರಿಗಳ ಸಹಯೋಗದೊಂದಿಗೆ ಉದ್ದಿಮೆದಾರರ ಸಮಾವೇಶವನ್ನು ಜು.8ರಂದು ಶತಮಾನೋತ್ಸವ ಭವನ, ಮೆ:ಕಾಸ್ಮೋಪಾಲಿಟನ್ ಕ್ಲಬ್, ಡಾ: ಎಸ್.ರಾಧಾಕೃಷ್ಣನ್ ಅವೆನ್ಯೂ, ಯುವರಾಜ ಕಾಲೇಜ್ ಎದುರು ಹಮ್ಮಿಕೊಳ್ಳಲಾಗಿದೆ. ಮೆ: ಕೇನ್ಸ್ ಟೆಕ್ನಾಲಜಿಸ್ ಇಂಡಿಯಾ ಲಿಮಿಟೆಡ್‌ನ ರಮೇಶ್ ಕಣ್ಣನ್ ಸಮಾವೇಶದ ಉದ್ಘಾಟನೆ ನೆರವೇರಿಸುವರು.

ಪಿಯು ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರ ನೇಮಕಕ್ಕೆ ಆದೇಶ

ಬೆಂಗಳೂರು: ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳಿಗೆ ಅತಿಥಿ ಉಪನ್ಯಾಸಕರ ನೇಮಕಕ್ಕೆ ಸರ್ಕಾರ ಆದೇಶ ಹೊರಡಿಸಿದೆ. 2022-23ನೇ ಶೈಕ್ಷಣಿಕ ಸಾಲಿಗೆ ಅನ್ವಯವಾಗುವಂತೆ ಪಿಯುಸಿ ಕಾಲೇಜುಗಳಲ್ಲಿ ಖಾಲಿ ಇರುವ 3708 ಅತಿಥಿ ಉಪನ್ಯಾಸಕರ ನೇಮಕಕ್ಕೆ ಗ್ರೀನ್ ಸಿಗ್ನಲ್ ಕೊಟ್ಟಿದೆ. 2022-23ನೇ ಶೈಕ್ಷಣಿಕ ಸಾಲಿನಲ್ಲಿ ಬಡ್ತಿ, ವಯೋ ನಿವೃತ್ತಿ, ನಿಧನ ಹಾಗೂ ಇತರೆ ಕಾರಣಗಳಿಂದ ತೆರವಾಗಿರುವ ವಿವಿಧ ವಿಷಯಗಳ ಉಪನ್ಯಾಸಕರ ಹುದ್ದೆಗಳಿಗೆ ಅತಿಥಿ ಉಪನ್ಯಾಸಕರನ್ನು ನೇಮಕಕ್ಕೆ ಸೂಚನೆ ನೀಡಿದೆ. ಖಾಲಿ ಇರುವ ವಿವಿಧ ವಿಷಯಗಳ ಉಪನ್ಯಾಸಕರ ಹುದ್ದೆ-3,271 ಮತ್ತು ಬಡ್ತಿ, ವಯೋನಿವೃತ್ತಿ, ನಿಧನ ಹಾಗೂ ಇತರೆ ಕಾರಣಗಳಿಂದ ತೆರವಾಗಬಹುದಾದ ಉಪನ್ಯಾಸಕರ ಹುದ್ದೆಗಳ ಸಂಖ್ಯೆ-100. ಹೊಸ ಸಂಯೋಜನೆಗಳಿಗೆ ಹುದ್ದೆ ಮಂಜೂರಾಗದ ವಿಷಯಗಳಿಗೆ ನೇಮಕ ಮಾಡಿಕೊಳ್ಳಬೇಕಾದ ಅತಿಥಿ ಉಪನ್ಯಾಸಕರ ಸಂಖ್ಯೆ 337 ಇದೆ. ಪಿಯು ಕಾಲೇಜುಗಳ ಅತಿಥಿ ಉಪನ್ಯಾಸಕರ ವೇತನವನ್ನು 9 ಸಾವಿರದಿಂದ 12 ಸಾವಿರಕ್ಕೆ ಹೆಚ್ಚಳ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ ಎಂದು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದ್ದಾರೆ.

ಜಾಯ್ ಮಾಲಿಕಲ್ ಜನ್ಮ ದಿನಾಚರಣೆ



ಮೈಸೂರು ರಾಣಿ ಬಹದ್ದೂರ್ ಸಭಾಂಗಣದಲ್ಲಿ ದಿವಂಗತ ಜಾಯ್ ಮಾಲಿಕಲ್ ಜನ್ಮ ದಿನಾಚರಣೆಯನ್ನು ಬುಧವಾರ ಆಚರಿಸಲಾಯಿತು.

ಮೈಸೂರು, ಜು.6(ಎಸ್‌ಪಿಎನ್)- ಮೈಸೂರು ವಿಶ್ವವಿದ್ಯಾನಿಲಯ, ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ ಹಾಗೂ ಅಭಿವೃದ್ಧಿ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ದಿವಂಗತ ಜಾಯ್ ಮಾಲಿಕಲ್ ಜನ್ಮ ದಿನಾಚರಣೆಯನ್ನು ಬುಧವಾರ ಆಚರಿಸಲಾಯಿತು.

ಮೈಸೂರು ರಾಣಿ ಬಹದ್ದೂರ್ ಸಭಾಂಗಣದಲ್ಲಿ ಜಾಯ್ ಮಾಲಿಕಲ್ ಜನ್ಮದಿನಾಚರಣೆ ಅಂಗವಾಗಿ 'ಅಭಿವೃದ್ಧಿ, ಪ್ರಜಾಪ್ರಭುತ್ವ ಮತ್ತು ವೈವಿಧ್ಯತೆ- ನಾಗರಿಕ ಸಮಾಜದ ಪಾಲ್ಗೊಳ್ಳುವಿಕೆ' ಹಮ್ಮಿಕೊಂಡಿದ್ದ ವಿಚಾರ ಸಂಕಿರಣವನ್ನು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಅಧ್ಯಕ್ಷ ಹಾಗೂ ಮಾಜಿ ಮೇಯರ್ ನಾರಾಯಣ್ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದರು.

ಜಾಯ್ ಮಾಲಿಕಲ್ ಅವರು 1984ರಲ್ಲಿ ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ(ಆರ್‌ಎಲ್‌ಎಚ್‌ಪಿ) ಮೂಲಕ ಕೊಳಚೆ ಪ್ರದೇಶ ಮಕ್ಕಳು, ಮಹಿಳೆಯರಿಗೆ ವೈಯುಕ್ತಿಕ ಸ್ವಚ್ಛತೆ, ಪರಿಸರ ರಕ್ಷಣೆ, ಆರೋಗ್ಯ ಶಿಕ್ಷಣ ನೀಡಲು ಶ್ರಮಿಸಿದ್ದಾರೆ ಎಂದರು.

ಮೈಸೂರು ಪ್ರಾಧ್ಯಾಪಕ ಮುಜಾಫರ್ ಅಸ್ಸಾದಿ 'ಅಭಿವೃದ್ಧಿ ಪ್ರಜಾಪ್ರಭುತ್ವ ನಾಗರಿಕ ಸಮಾಜ ತೊಡಗಿಸಿಕೊಳ್ಳುವಿಕೆ ಕುರಿತು ಉಪನ್ಯಾಸ ನೀಡಿದರು. ಸಾಮಾಜಿಕ ಕಾರ್ಯಕರ್ತೆ ಮಧು ಭೂಷಣ್, ಬರಹಗಾರ ವ್ಯಾಥ್ಯುಸ್ ಫಿಲಿಪ್, ಡಾ.ಜೆರ್ರಿ ಪಾಯಜ್ ಹಾಗೂ ಇತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com